UNIVERSAL
LIBRARY
OU_200409
UNIVERSAL
LIBRARY

# ಚಲೋ ದಿಲ್ಲಿ

( ಕಾದಂಬರಿ )

★

ಲೇಖಕರು :

★

-ಮುನ್ನುಡಿಕಾರರು-

ಶ್ರೀ. ಎಂ. ಎಸ್. ಶಾಮಯ್ಯಂಗಾರ್, ಬಿ. ಎಸ್. ಸಿ.,

ಸಂಪಾದಕ : "ವಿಶ್ವಕರ್ಣಾಟಕ" ಬೆಂಗಳೂರು.

★


ಪ್ರಕಾಶಕರು :

ಪ್ರಗತಿಶೀಲ ಲೇಖಕರ ಸಂಘ, ಬೆಂಗಳೂರು.

೧೯೪೬ ರೂ. ೧

# ಪ್ರಗತಿಶೀಲ ಲೇಖಕರ ಸಂಘ, ಬೆಂಗಳೂರು.

ಅಧ್ಯಕ್ಷರು :— ಅ. ನ. ಕೃಷ್ಣರಾಯ.

ಕಾರ್ಯದರ್ಶಿಗಳು

ನಾಡಿಗೇರ ಕೃಷ್ಣರಾಯ. ಕುಮಾರ ವೆಂಕಣ್ಣ.

## ಮುಂದಿನ ಪ್ರಕಟನೆಗಳು

ಅ. ನ. ಕೃಷ್ಣರಾಯ.

ಕನ್ನಡದ ದಾರಿ
ಅಖಂಡ ಕರ್ನಾಟಕ
ಜವಹರಲಾಲ ನೆಹರು

ಕುಮಾರ ವೆಂಕಣ್ಣ.

ಜೈ ಹಿಂದ್ (ಕಾದಂಬರಿ)

ಅರ್ಚಿಕ ವೆಂಕಟೇಶ.

ಬಂಗಾಳದಲ್ಲಿ ಬಾಪೂ

ಕೆ. ನಾಗೇಶರಾಯ.

ಧೂಳು ಹೊಗೆ (ಕಾದಂಬರಿ)

ಸಂಕಲನ—

ಪ್ರಗತಿಶೀಲರು ಕಂಡ ಕೈಲಾಸಂ.

ಪ್ರಕಾಶಕರು :
ಕುಮಾರ ವೆಂಕಣ್ಣ
ಅನ್ನಪೂರ್ಣ, ವಿಶ್ವೇಶ್ವರಪುರಂ-
ಬೆಂಗಳೂರು ನಗರ.

ಮುದ್ರಕರು :
ವಿ. ರಾಮಕೃಷ್ಣ
ರಾಮಕೃಷ್ಣ ಅಂಡ್ ಕೋ ಪ್ರೆಸ್,
ಕೋಟೆ, ಬೆಂಗಳೂರು ನಗರ.

ಭಾರತೀಯ ರಾಷ್ಟ್ರೀಯ ಸೇನೆಯ

ನಾಯಕರ

ಮತ್ತು

ಸೈನಿಕರ ಬಿಡುಗಡೆಗಾಗಿ

## ಆತ್ಮಾರ್ಪಣಮಾಡಿ

## ಅಮರರಾದ

ಶ್ರೀಮತಿ ಜೋತಿರ್ಮಯಿ ಗಾಂಗುಲಿ

ಮತ್ತು

ಇತರ ಹಲವು ದೇಶಪ್ರೇಮಿಗಳಾದ

## ಹುತಾತ್ಮರ ನೆನಪಿಗಾಗಿ

★

ನೇತಾಜಿಯ ಜನ್ಮದಿನ

೨೩-ಜನವರಿ-೧೯೪೬.

## ಸಂಘದ ಇತರ ಪ್ರಕಟನೆಗಳು.

| | |
|---|---|
| ಭಾರತ ಶಕ್ತಿ (ಕುಮಾರ ವೆಂಕಣ್ಣ) | ೦—೩—೦ |
| ನನ್ನನ್ನು ನಾನೇ ಕಂಡೆ (ಅ. ನ. ಕೃಷ್ಣರಾಯ) | ೧—೦—೦ |
| ಪ್ರಗತಿಶೀಲ ಸಾಹಿತ್ಯ (ಸಂ : ಅ. ನ. ಕೃ) | ೨—೦—೦ |
| ಮ್ಯಾಕ್ಸಿಂ ಗಾರ್ಕಿ (ಸಂ : ಅ. ನ. ಕೃ) | ೫—೮—೦ |
| ತಲೆಹರಟೆ (ನಾಡಿಗೇರ ಕೃಷ್ಣರಾಯ) | ೧—೦—೦ |
| ರಸಋಷಿ (ಸಂ : ಅ. ನ. ಕೃ) | ೧—೮—೦ |
| ಜೀವನ ಸಂಗ್ರಾಮ (ಅರ್ಚಿಕ ವೆಂಕಟೇಶ) | ೧—೦—೦ |

ಆಥರ್ಸ್ ಕಾಪಿರೈಟ್.

# ಮುನ್ನುಡಿ

ಗೆ. ಅರ್ಚಿಕ ವೆಂಕಟೇಶ ತಾವು ಬರೆದ "ಚಲೋದಿಲ್ಲಿ"ಗೆ ಮುನ್ನುಡಿ ಬರೆಯಬೇಕೆಂದು ನನ್ನನ್ನು ಕೇಳಿದರು. ಇದು ನನಗೆ ಆಶ್ಚರ್ಯವನ್ನುಂಟು ಮಾಡದೆ ಇರಲಿಲ್ಲ. ಈಗತಾನೇ ಕನ್ನಡ ಸಾಹಿತ್ಯ ರಂಗದಲ್ಲಿ ಕಾಲಿಡು ತ್ತಿರುವವರಿಗೆ ಪ್ರೋತ್ಸಾಹಕವಾಗಿ ನಾಲ್ಕು ಮಾತು ಹೇಳಬೇಕಾದ್ದು ರೂಢಿ. ಆದರೆ ಇವರು ಆಗಲೇ ತಮ್ಮ ಕತೆ, ಕವನ, ನಾಟಕಾದಿಗಳಿಂದ ನಾಡ ಓದುಗರಿಗೆ ಚಿರಪರಿಚಿತರಾಗಿದ್ದಾರೆ. ಜತೆಗೆ ಅವರು ಬರೆದಿರುವ ಈ ಕಾದಂಬರಿ ಕನ್ನಡ ಭಾಷೆಯಲ್ಲೇ ಮೊದಲನೆಯದು; ಭಾರತದ ಯಾವ ಭಾಷೆಯಲ್ಲೂ ಇದುವರೆಗೆ ಈ ವಿಚಾರವಾದ ಕಾದಂಬರಿ ಇನ್ನೂ ಬಂದಿಲ್ಲ. ಅಲ್ಲದೆ, ಹಿರಿಯ ಪಂಡಿತೋತ್ತಮರನ್ನು ತೊರೆದು ಗೆಳೆಯ ಅರ್ಚಿಕರು ನನ್ನ ಮೇಲೇ ಏಕೆ ಈ ಹೊರೆ ಹೊರಿಸಿದರೆಂದು ಹಲವರಿಗೆ ಆಶ್ಚರ್ಯವೆನ್ನಿ ಸೀತು. ಆದರೆ, ಹಿರಿಯ ಪಂಡಿತರನ್ನು ಆಶ್ರಯಿಸುವ 'ಚಟ' ಅವರಿಗೂ ಇರಲಾರದು; ನನಗೂ ನನ್ನ ಮಾತಿನ ಬಗ್ಗೆ ಹೊಗಳಿಕೆ ತೆಗಳಿಕೆಗಳನ್ನು ಇದಿರು ನೋಡುವ ಇಚ್ಛೆ ಮೊದಲೇ ಇಲ್ಲ.

ಯಾವ ಒಂದು "ರಣಗೀತೆ"ಯು ದಿಗಂತದಲ್ಲಿ ಮೊಳಗುತ್ತಿದೆಯೋ ಅಂತಹ ಒಂದು ಪುಸ್ತಕದ ಬಗ್ಗೆ ಕೆಲ ಮಾತುಗಳನ್ನು ಹೇಳುವುದರಲ್ಲಿ ನನ್ನ ಹರುಷವು ಅನಂತವಾಯಿತು. ಇದು ಭಾರತದ ಬಾಹ್ಯ ಭೂಮಿ ಯಲ್ಲಿ ನಿಂತು ಭಾರತ ಸ್ವಾತಂತ್ರ್ಯಕ್ಕಾಗಿ ತನುಮನಧನಗಳನ್ನರ್ಪಿಸಿದ ಬೋಸ್ ಯೋಧರ ಸಮರ ಚರಿತೆಯೆ? ಎಂದು ನಾನು ಪ್ರಶ್ನಿಸಿಕೊಂಡು ಪುಸ್ತಕವನ್ನು ಓದಿದೆ. ಪ್ರತಿ ಪದವನ್ನು ಓದುತ್ತಿದ್ದ ಹಾಗೆ ನನ್ನಲ್ಲಿ ವೀರ ರಕ್ತವು ಜೀವನಾಲೆಯಲ್ಲಿ ಹರಿದಾಡಲು ಪ್ರಾರಂಭಿಸಿತು. ಪತ್ರಿಕಾ ಕಚೇರಿ ಯಲ್ಲಿ ನಮ್ಮ ನಿತ್ಯ ದಿನಗಳು ಬೋಸ್ ಸೇನೆಯನ್ನು ಪೂಜಿಸುವುದರಲ್ಲಿಯೇ ಆಗುತ್ತಿದೆ. ಎ. ಪಿ. ಐ. ರಾಯಿಟರ್ ತಂತಿಗಳು ಬಂದೊಡನೆಯೆ ಐ. ಎನ್. ಎ. ಸುದ್ದಿಯೇನು ಎಂದು ನಾವು ಆತುರದಿಂದ ತಗಾದೆ ಮಾಡು ತ್ತಿರುತ್ತೇವೆ. ಅರ್ಚಿಕರಂತೂ ಈ ನಮ್ಮ 'ರೇಸ್'ನಲ್ಲಿ ಭಾರಿ ವಿಜಯ ಗಳನ್ನು ಪಡೆದಿದಾರೆ.

ಪುಸ್ತಕವನ್ನು ಅತ್ಯಂತ ಆಸಕ್ತಿಯಿಂದ ಓದಿದೆ. ಆನಂದ ಪಟ್ಟಿದ್ದೇನೆ. ಭಾರತ ಇತಿಹಾಸದಲ್ಲಿ, ಭಾರತ ಸ್ವಾತಂತ್ರ್ಯ ಚರಿತ್ರೆಯಲ್ಲಿ ರಕ್ತಾಕ್ಷರಗಳಿಂದ ಉಲ್ಲೇಖಿಸಬೇಕಾದ ಬೋಸ್ ಸೇನೆಯ ಸಾಹಸದ ಕುಸುಮವಿದು. ಸ್ಪೇನ್ ದೇಶದಲ್ಲಿ ರಿಪಬ್ಲಿಕನ್ ರಕ್ತಪಾತದಲ್ಲಿ ಸ್ವಾತಂತ್ರ್ಯ ವೀರ ಯೋಧರು ಪ್ರದರ್ಶಿಸುತ್ತಿದ್ದ ಅನುಪಮ ತ್ಯಾಗದ ಬಗ್ಗೆ ಆ ದಿನಗಳಲ್ಲಿ ಇಂತಹ ಕಾದಂಬರಿಗಳು ಕಾಣುತ್ತಿತ್ತು.

ಒಬ್ಬ ಸಾಮಾನ್ಯ ಪ್ರಜೆಯು ಬಡತನದ ಬೇಗೆಯಲ್ಲಿ ಬೆಂದು ಕೇವಲ ಹೊಟ್ಟೆ ಪಾಡಿಗಾಗಿ ಮಿಲಿಟರಿಗೆ ಸೇರಿ ಹೊಟ್ಟೆ ಪಾಡು ನೀಗುವದೊಂದನ್ನೇ ತನ್ನ ಧ್ಯೇಯವನ್ನಾಗಿಟ್ಟುಕೊಳ್ಳುವನು. ಇದು ಕಥಾನಾಯಕ ಚೆಲುವರಾಜನ ಜೀವಿತದಲ್ಲಿ ಪ್ರಥಮ ಘಟ್ಟ, ಮೂಲ ಘಟ್ಟ. ಅನಂತರ ಬೋಸ್ ಮಹಾಮಹಿಮನನ್ನು ನೋಡಿ ಆ ಜೀವಿತದ ಮೇಲೆ ಆದ ಪರಿಣಾಮ ಅಸ್ವಾತಂತ್ರ್ಯದ ಜಾಗೃತಿ. ಸ್ವಾತಂತ್ರ್ಯಕ್ಕಾಗಿ ಸಮರ ಹೂಡಿ ಅನಂತ ಕೋಟಿಯನ್ನು ಅನಿರ್ಬಂಧದಿಂದ ಪಾರು ಮಾಡಬೇಕೆಂಬ ಮಹೋದ್ದೇಶ.

ಈ ಸಮರದ ವಿವಿಧ ಘಟ್ಟಗಳನ್ನು ಚಿತ್ರಿಸಿರುವ ರೀತಿಯಲ್ಲಿ ಒಂದು ವಿಶಿಷ್ಟತೆಯಿದೆ. ಅರ್ಚಿಕರ ಕಾದಂಬರಿಯಲ್ಲಿ ಕಲಾಕುಣಿತವಿದೆ, ಪ್ರಗತಿಶೀಲತೆಯಿದೆ.

ಈ ಪುಸ್ತಕವು ಕನ್ನಡ ಕಾದಂಬರಿ ಬರೆಹದಲ್ಲಿಯೇ ಒಂದು ನಾವೀನ್ಯತೆ ಹೊಂದಿದೆ ಎಂದರೆ ಹಿರಿಯರು ಉದ್ರೇಕಗೊಳ್ಳಲಾರರು. ಈ ಕಾದಂಬರಿಯು ಒಂಬು ಕ್ರಾಂತಿ ಕುಸುರಿ ಎಂದರೆ ಕ್ರಾಂತಿಕಾರರು ಕಿಚ್ಚೆಬ್ಬಿಸಲಾರರು ಎಂದು ನಾನು ತಿಳಿದಿದ್ದೇನೆ.

ನನ್ನ ಮನಸ್ಸಿಗೆ ಹೊಳೆದ ನಾಲ್ಕು ಮಾತುಗಳನ್ನು ಹೇಳಲು ಅಸ್ಪದವಿತ್ತುದಕ್ಕೆ ನಾ ಕೃತಜ್ಞನಾಗಿದೇನೆ ಎನ್ನದಿರಲಾರೆ.

ಅರ್ಚಿಕರ ಸಾಹಿತ್ಯದ ಮಲ್ಲಿಗೆ ತೋಟದಲ್ಲಿ ಇಂತಹ ಹೂಗಳು ಅನಂತವಾಗಿ ಅರಳಲಿ, ಇದೇ ನನ್ನ ಹಾರೈಕೆ.

ವಿಶ್ವಕರ್ಣಾಟಕ |
೧೫—೧—೧೯೪೬. |

ಎಂ. ಎಸ್. ಶಾಮಯ್ಯಂಗಾರ್.

# ಮೊದಲ ಮಾತು

ನನ್ನ ಮೊದಲ ಕಾದಂಬರಿ ಬೆಳಕಿಗೆ ಬರುತ್ತಿದೆ. ನೇತಾಜಿ ಸುಭಾಸ್ ಚಂದ್ರಬೋಸರು ಗೈದ ಅಮರ ಸಂಗ್ರಾಮದ ಅಪ್ರತಿಮ ಇತಿಹಾಸದ ಮಹಾಸಾಗರದಲ್ಲಿ ಇದೊಂದು ಹನಿಯಾಗಲೆಂದು ಬಯಸಿದ್ದೇನೆ. ಈ ಮೂಲಕ ರಾಷ್ಟ್ರಗೌರವ ನೇತಾಜಿಗೂ, ಆತನ ಮಹಾದಂಡನಾಯಕರಿಗೂ ನನ್ನ ಅಂತಃಕರುಣ ಪೂರ್ವಕವಾದ ಪ್ರಣಾಮವನ್ನು ಸಲ್ಲಿಸುತ್ತೇನೆ. ಅಲ್ಲದೆ ಭಾರತ ಸ್ವಾತಂತ್ರ್ಯಕ್ಕಾಗಿ ತಮ್ಮದೆನ್ನುವದೆಲ್ಲವನ್ನೂ ತ್ಯಾಗಮಾಡಿ ಬರ್ಮಾ, ಆರಾಕ್ನ್, ಚಿಂದ್ವಿನ್ ಮೊದಲಾದ ಅರಣ್ಯ, ಗುಡ್ಡ ಬೆಟ್ಟಗಳಲ್ಲಿ ಬಿದ್ದು ಸಾಯುವ ಮುಂದೆ 'ಜೈ ಹಿಂದ್' ಎಂದು ಜಯಘೋಷಮಾಡಿ ಪ್ರಾಣ ನೀಗಿದ ಅಸಂಖ್ಯಾತ ವೀರ ಯೋಧರಿಗೆ ಕೂಡ ನನ್ನ ಅನಂತ ವಂದನೆಯನ್ನರ್ಪಿಸುತ್ತೇನೆ.

ನೇತಾಜಿ ಸ್ಥಾಪಿಸಿದ ರಾಷ್ಟ್ರೀಯ ಸೈನ್ಯದ ಬಗ್ಗೆ ಭಾರತದಲ್ಲಿಯೇ ಇದು ಮೊದಲ ಪುಸ್ತಕ. ಇದರ ಬೆನ್ನುಗುಂಟ 'ಜೈ ಹಿಂದ್' ಕಾದಂಬರಿ ಕೂಡ ಬರಲಿದೆ. ಓದುಗರು ಸಹಕಾರ ಸಹಾನುಭೂತಿ ನೀಡುತ್ತಾರೆಂದು ನಂಬಿದ್ದೇನೆ

ಕಥಾನಾಯಕ ಸಾಮಾನ್ಯ ಜೀವಿ. ಹೊಟ್ಟೆಯ ಪಾಡಿಗಾಗಿ ಸೈನ್ಯಕ್ಕೆ ಸೇರಿದ್ದ. ಮನಸ್ಸಿಲ್ಲದಿದ್ದರೂ ಬಂದೂಕನ್ನೆತ್ತಿ ರಣಕ್ಷೇತ್ರಕ್ಕೆ ತೆರಳಿದ್ದ. ಆದರೆ, ವಿಧಿ ಬೇರೆ ಇತ್ತು. ಜಪಾನರ ಸೆರೆಯಲ್ಲಿ ಸಿಕ್ಕ ಚೆಲುವರಾಜ ನೇತಾಜಿಯ ಸೈನ್ಯ ಸೇರುವ ಭಾಗ್ಯ ಪಡೆದ ನವೀನ ಸ್ಫೂರ್ತಿ ಪಡೆದ. ನೇತಾಜಿಯ ಮಾತಿನಿಂದ ಅಚಲವಾದ ಜಡ ಪದಾರ್ಥಗಳಿಗೂ ಜೀವ ಪ್ರಾಪ್ತವಾಗುತ್ತಿತ್ತೆಂಬುದಕ್ಕೆ ಇಲ್ಲಿನ ಚೆಲುವರಾಜನೇ ಸಾಕ್ಷಿ. ಅವನು ಹೇಳಿದಂತೆ ಕತೆ ಬರೆದಿದ್ದೇನೆಯೇ ಹೊರತಾಗಿ "ಕವಿ ಸಮಯ" ವನ್ನು ಮಾತ್ರ ಉಪಯೋಗಿಸಲು ಹಾತೊರೆದಿಲ್ಲ.

ಈ ಕಾದಂಬರಿಗೊಂದು ಮುನ್ನುಡಿ ಬರೆಯಬೇಕೆಂದು "ವಿಶ್ವಕರ್ಣಾಟಕದ" ಸಂಪಾದಕರಾದ ಶ್ರೀ. ಎಂ. ಎಸ್. ಶಾಮಯ್ಯಂಗಾರ್ಯರನ್ನು ಕೇಳಿದೆ. ಅವರು ತುಂಬ ಸಂತೋಷದಿಂದ ಒಪ್ಪಿ ನನ್ನನ್ನು ಪ್ರೋತ್ಸಾಹಿಸಿದರು. ಪ್ರಗತಿಶೀಲ ಲೇಖಕರ ಸಂಘದವರು ಪ್ರಕಟನೆಗೆ ಮುಂದೆ ಬಂದರು.

ನನ್ನ ಮಾನ್ಯ ಗೆಳೆಯರಾದ ಶ್ರೀ. ಅ. ನ. ಕೃಷ್ಣರಾಯರು ಮತ್ತು ಕುಮಾರ ವೆಂಕಣ್ಣನವರು ನನಗೆ ಅನಂತ ವಿಧವಾದ ನೆರವು ನೀಡಿದರು. ಇವರೆಲ್ಲರಿಗೆ ನಾನು ಚಿರ ಕೃತಜ್ಞ.

ಬೆಂಗಳೂರು ನಗರ, |
೧೧—೧—೧೯೪೬. | **ಅರ್ಚಿಕ ವೆಂಕಟೇಶ.**

# ವಿನಂತಿ

ಹೊಸತೊಂದು ವರ್ಷ ಉರುಳಿ ನಿಂತಿದೆ.

ವಿವಿಧ ಕಾರಣಗಳಿಂದ ಪ್ರಕಟನೆಯ ಕಾರ್ಯವನ್ನು ಕಳೆದ ವರ್ಷದ ಉತ್ತರಾರ್ಧದಲ್ಲಿ ನಾವು ತಡೆದೆವು. ಇದೀಗ ಈ ವರ್ಷ ನಮ್ಮ "ರಚನಾತ್ಮಕ" ಕಾರ್ಯವನ್ನು ಭರದಿಂದ ಸಾಗಿಸಲು ನಿರ್ಧರಿಸಿದ್ದೇವೆ. ಅದರ ಪ್ರತೀಕ ಈ ಕಾದಂಬರಿ.

ರಾಷ್ಟ್ರೀಯ ಸೇನೆಯ ಸಮಸ್ಯೆ. ಅದರ ಸೈನಿಕರ—ನಾಯಕರ—ಬಿಡುಗಡೆಯ ವಿಚಾರ ರಾಷ್ಟ್ರೀಯ ಸಮಸ್ಯೆಯಾಯಿತು. ಇಡಿಯ ದೇಶವೇ ಜಾಗೃತವಾಗಿ, ಒಂದಾಗಿ, ಏಕ ಕಂಠದಿಂದ ಬಿಡುಗಡೆ ಬಯಸಿತು. ಇಂಥದೊಂದು ಪ್ರಚಂಡ ಚಳುವಳಿ ನಮ್ಮ ಸಾಹಿತ್ಯದಲ್ಲಿ ಪ್ರತಿಬಿಂಬಿತವಾಗಲಾರದಾದರೆ ನಮ್ಮ ಘೋಷಣೆ—ಚಳುವಳಿ—ಪ್ರದರ್ಶನಗಳೆಲ್ಲ ವ್ಯರ್ಥ; ಅವು ತೋರಿಕೆಯ ದಾರಿಗೆ ಸರಿದಿವೆ ಎನ್ನಬೇಕಾಗುತ್ತದೆ.

ಆದರೆ—ಆ ಚಳವಳ ಪ್ರಗತಿಶೀಲರ ಹೃದಯದಲ್ಲಿ ಪ್ರತಿಬಿಂಬಿತವಾಗಿ ಮರುದನಿಗೊಟ್ಟಿದೆ. ಭಾರತದ ಯಾವ ಭಾಷಾ ಸಾಹಿತ್ಯವೂ ಸಾಧಿಸಿರದ ಕಾರ್ಯವನ್ನು ಕನ್ನಡ ಸಾಹಿತ್ಯ ಸಾಧಿಸಿದೆ. ಇದು ಭಾರತದಲ್ಲಿ ಈ ಬಗ್ಗೆ ಮೊದಲ ಕಾದಂಬರಿ. ಎರಡನೆಯ "ಜೈ ಹಿಂದ್" ಬೇಗನೇ ಪ್ರಕಟವಾಗಲಿದೆ.

ಬಂಧು ಅರ್ಚಕ ವೆಂಕಟೇಶ—ಐ. ಎನ್ ಎ. ತನ್ನ ಹೃದಯದಲ್ಲಿ ಮೂಡಿಸಿದ ಭಾವಗಳನ್ನಲ್ಲಿ ಎರಕ ಹೊಯಿದಿದಾರೆ.

ನಾಡ ಜನತೆ ಈ ಪ್ರಗತಿಶೀಲ ಕಾದಂಬರಿಯನ್ನು ಆದರಿಸಲಿ; ನಮ್ಮ ಸಾಹಿತ್ಯದ ಸರ್ವೋದಯಕ್ಕೆ ಸರ್ವಬೆಂಬಲ ನೀಡಲಿ.

—ಪ್ರಕಾಶಕರು.

# ಚಲೋ ದಿಲ್ಲಿ

—★—

೧

ಪೋಸ್ಟ್ ಪೋಸ್ಟ್ !

ಕಿಟಕಿಯಿಂದ ಕವರೊಂದು ದೊಪ್ಪನೆ ಬಿತ್ತು.

ಈಜಿಛೇರಿನ ಮೇಲೆ ಹಾಯಾಗಿ ಬಿದ್ದುಕೊಂಡು, ನೂರುಯೋಚನೆಗಳಲ್ಲಿ ತೇಲಿ ಮುಳುಗುತ್ತಿದ್ದ ನನಗೆ ಈ ಸಪ್ಪಳದಿಂದ ಎಚ್ಚರವಾದಂತಾಯಿತು. ಥಕ್ಕನೆ ಎದ್ದವನೆ ಕವರನ್ನು ಬಳ್ಳಿಯಿಂದ ಗುಲಾಬಿ ಹೂವನ್ನು ಬಿಡಿಸಿಕೊಳ್ಳುವಂತೆ ಆದರ ಮಮತೆಗಳಿಂದ ಎತ್ತಿಕೊಂಡೆ. ನಲ್ಲೆಯ ಕಾಗದ ಬಂದು ಅದೇ ಎರಡು ದಿನವಾಗಿದ್ದರೂ, ಬೇರೆ ಯಾರ ಕಾಗದವೂ ಬರುವ ನಿರೀಕ್ಷಣೆ ಇಲ್ಲದಿದ್ದರೂ “ ಇದೆಲ್ಲಿಯದು ” ? ಎಂಬ ಕುತೂಹಲ ನನ್ನ ಮನವನ್ನೆಲ್ಲ ಮುಗಿಲ ಮುಖವನ್ನೆಲ್ಲ ಮುಚ್ಚಿಬ ಮೋಡದಂತೆ ಆವರಿಸಿ ನಿಂತಿತ್ತು.

ಕವರನ್ನು ಮೇಲಕ್ಕೆತ್ತಿದೆ. ನನ್ನ ಕಣ್ಣುಗಳಿಗೆ ಕಂಡದ್ದು ನೂತನ ಕೈಬರಹ. ಅಪರಿಚಿತ ವ್ಯಕ್ತಿಯ ಬರವಣಿಗೆ ಅದರಲ್ಲೂ ಕವರಿನ ಎಡ ಮೂಲೆಯಲ್ಲಿ “ **ಜೈ ಹಿಂದ್** ” ಎಂಬ ದಪ್ಪನೆಯ ರಕ್ತಾಕ್ಷರ, ಬಲಗಡೆಯ ಮೂಲೆಯಲ್ಲಿ “ **ಚಲೋ ದಿಲ್ಲಿ** ” ಎಂದು ಹಸಿರು ಮಸಿಯಲ್ಲಿ ಬರೆದ ಸುಂದರ ವರ್ಣಮಾಲೆ. ಕವರನ್ನು ಹಾಗೇ ತಿರುಗಿಸಿದೆ. ಅಲ್ಲಿ “ **ಆಜಾದ್ ಹಿಂದ್ ಝಿಂದಾ ಬಾದ್** ” ಎಂಬ ಅಮರ ಮಂತ್ರ ನುಡಿಗೊಡುತ್ತಿತ್ತು.

ನನಗೆ ಪರಮಾಶ್ಚರ್ಯವಾಯ್ತು. ಈ ಕಾಗದವನ್ನು ಯಾರು ಬರೆದಿರಬಹುದು ? ನನ್ನವರಾರೂ ಯುದ್ಧಭೂಮಿಗೆ ತೆರಳಿಲ್ಲವಲ್ಲ. ನನ್ನ

ಮಿತ್ರರಲ್ಲಿ ಯಾರಾದರೂ ಹೋಗಿರಬಹುದೆ? ಯಾಕಿರಬಾರದು? ನಾನು ಬೆಂಗಳೂರಿಗೆ ಬಂದು ೭-೮ ವರ್ಷಗಳಾಗಿ ಹೋಯಿತು. ಈ ಅವಧಿಯಲ್ಲಿ ಯಾರಾದರೂ ರಿಕ್ರೂಟ್ ಆಗಿ ಯುದ್ಧಭೂಮಿಗೆ ಹೋಗಿ ಕೊನೆಗೆ ಐ. ಎನ್. ಎ. ಗೆ ಸೇರಿರಬಾರದೇಕೆ? ಒಂದು ವೇಳೆ ಹಾಗೆ ಸೇರಿದ್ದರೆ ಈಗ ಈ ಕಾಗದಕ್ಕೆ ಕಾರಣವೇನು? ಎಂಬ ಸಹಸ್ರಾರು ಪ್ರಶ್ನೆಗಳು ನನ್ನ ತಲೆಯನ್ನೇ ಭೇದಿಸಿಬಿಟ್ಟವು. ಕಾಗದ ಒಡೆದು ನೋಡುವ ತಾಳ್ಮೆ ಕೂಡ ನನ್ನಲ್ಲುಳಿಯಲಿಲ್ಲ. ಅಶ್ವಮೇಧದ ಕುದುರೆಯಂತೆ ನನ್ನ ಯೋಚನೆ ಸಾಗುತ್ತಲೇ ಇತ್ತು.

ಮತ್ತೆ ಈಜಿಛೇರಿನ ಮೇಲೆ ಬಂದು ಕುಳಿತು ಮೆಲ್ಲಗೆ ಕವರೊಡೆದೆ. ಸಾವಧಾನವಾಗಿ ಕಾಗದ ತೆಗೆದು ಓದಲಾರಂಭಿಸಿದೆ :—

ಜೈ ಹಿಂದ್

ಕಲಕತ್ತಾ: ೩. ೨. '೪೫.

ಗೆಳೆಯ ಶ್ರೀನಿವಾಸ,

ಎರಡು ದಿನಗಳ ಹಿಂದೆ ನನ್ನನ್ನು ಜೆಸ್ಸೋರ್ ಕ್ಯಾಂಪಿನಿಂದ ಬಿಡುಗಡೆ ಮಾಡಿದರು. ನಾನು ಐ. ಎನ್. ಎ. ದಲ್ಲಿ ಸೇರಿದ ಒಬ್ಬ ಸಿಪಾಯಿ. ನನ್ನ ಜತೆಗೆ ಇನ್ನು ೪೯ ಜನ ಬಿಡುಗಡೆ ಹೊಂದಿದರು.

ಪ್ರಾಯಶಃ ನೀನು ನನ್ನನ್ನು ಮರೆತೇ ಇರಬೇಕು. ಬಹಳ ದಿನಗಳಮಾತು. ನಿನ್ನನ್ನು ಭೇಟಿಯಾಗದೆ ೬-೭ ವರ್ಷಗಳಾದವು. ಆದರೆ ದೇವರ ದಯೆಯಿಂದ, ಮಹಾತ್ಮಾಜಿಯ ಪುಣ್ಯಸಂಕಲ್ಪದಿಂದ ನಾನು ನನ್ನವರನ್ನು ಕಾಣುವ ಸದವಕಾಶ ದೊರಕಿತು. ಈಗ ನನ್ನ ಜೀವವೆಲ್ಲ ನಮ್ಮೂರು ಮತ್ತು ನಿನ್ನ ಹತ್ತಿರ ಸುಳಿಯುತ್ತಿದೆ.

ನನ್ನ ಜೊತೆಗೆ ಬಿಡುಗಡೆಯಾಗಿರುವ ಮಿತ್ರರು ಹಲವು ಬಂಗಾಳಿಗಳಿದ್ದಾರೆ. ಕೆಲವರಂತೂ ಕಲಕತ್ತಾ ನಗರದವರೇ ಇದ್ದಾರೆ. ಅವರು ನನ್ನನ್ನು ಇಲ್ಲಿ ನಾಲ್ಕಾರು ದಿನ ಇದ್ದು ಬಾಪೂಜಿಯ ಭೇಟಿ ಮಾಡಿಕೊಂಡು ಹೋಗಬೇಕೆಂದು ಒತ್ತಾಯ ಪಡಿಸುತ್ತಿದ್ದಾರೆ.

ಅಲ್ಲದೆ ಕಲಕತ್ತಾ ನಗರವನ್ನು ನಾನು ಚೆನ್ನಾಗಿ ನೋಡಿಯೇ ಇಲ್ಲ. ಆದ್ದರಿಂದ ನಾನು ಕಲಕತ್ತಾ ನಗರ ನೋಡಿಕೊಂಡು, ನನ್ನ ಮಿತ್ರರ ಬಂಧು ಬಳಗದವರನ್ನೂ ಕಂಡು ಮಾತನಾಡಿ, ಬಾಪೂಜಿಯ ದರ್ಶನ ಭಾಗ್ಯ ಪಡೆದು, ಅವರಿಂದ ಆಶೀರ್ವಾದ ಹೊಂದಿ ಬೆಂಗಳೂರಿಗೆ ಬರುತ್ತೇನೆ. ಅಲ್ಲಿಂದ ಮುಂದೆ ನನ್ನ ಊರಿಗೆ ಚೆಂದೂರಿಗೆ ಹೋಗ ಬೇಕೆಂದು ನಿಶ್ಚಯಮಾಡಿದ್ದೇನೆ.

ನಿನ್ನ ಪರಿಚಯದ ಮಿತ್ರರೊಬ್ಬರು ಇಲ್ಲಿ ಸಿಕ್ಕಿದ್ದರು. ಅವರೇ ನಿನ್ನ ವಿಳಾಸವನ್ನು ಕೊಟ್ಟು ಹಲವಾರು ಸಂಗತಿಗಳನ್ನು ತಿಳಿಸಿದರು. ಸದ್ಯ ಇದಕ್ಕೂ ವಿಶೇಷ ಏನೂ ಬರೆಯಲಾರೆ. ನಿನ್ನನ್ನು ಎಷ್ಟು ಬೇಗನೆ ಬಂದು ನೋಡೇನೋ ಎಂದು ಕಾತುರ ಪಡುತ್ತಿದ್ದೇನೆ ? ನನಗೆ ಕಾಗದ ಹಾಕುವ ಗೋಜಿಗೆ ಹೋಗಬೇಡ. ಹಾಗೆಮಾಡಬಾರದೆಂದೇ ನಾನು ನನ್ನ ಈಗಿನ ವಿಳಾಸವನ್ನು ನಿನಗೆ ತಿಳಿಸಿಲ್ಲ. ಪ್ರತ್ಯಕ್ಷದಲ್ಲಿ ವಿಶೇಷ ವಿಚಾರ ತಿಳಿಸುವೆ.

ನಾನು ಆರೋಗ್ಯವಾಗಿಯೇ ಇದ್ದೇನೆ.

ಸರಿ ; ನಮಸ್ಕಾರ. ಜೈಹಿಂದ್.

ನಿನ್ನ ಪ್ರೀತಿಯ ಮಿತ್ರ
**ಚೆಲುವರಾಜ**

ಕಾಗದ ಒಂದು ಬಾರಿ ಓದಿದೆ. ತೃಪ್ತಿಯಾಗಲಿಲ್ಲ. ಮತ್ತೆ ಮತ್ತೆ ಓದಿದೆ. ಒಮ್ಮೆಗೇ ಎದ್ದವನೇ ಜೋಬಿಗೆ ಕೈ ಹಾಕಿ ನಾಲ್ಕಾಣೆಯ ತುಂಡೊಂದನ್ನು ತೆಗೆದು ಪೋಸ್ಟ್‌ಮ್ಯಾನಿಗೆ ಕೊಡಲು ಬಾಗಿಲ ಕಡೆಗೆ ಧಾವಿಸಿದೆ. ಪೋಸ್ಟ್‌ಮ್ಯಾನ್ ಹೊರಟು ಹೋಗಿ ಎಷ್ಟೋಹೊತ್ತಾಗಿತ್ತು.

ಯಾರೋ ನಲ್ಲಿಯ ಕೆಳಗಡೆ ಪಾತ್ರೆಯಿಟ್ಟು ನೀರು ತುಂಬುತ್ತಿದ್ದರು. ಪಕ್ಕದಲ್ಲಿದ್ದವರು ಮುಸುರೆ ತಿಕ್ಕುತ್ತಿದ್ದರು. ನಾಲ್ಕಾರು ಹುಡುಗರು ಏನೇನೋ ಬೈದಾಡುತ್ತಿದ್ದರು. ಕೆಮ್ಮುತ್ತಲೇ ಸಾಗುತ್ತಿದ್ದ ಮುದುಕ ತಿರುಗಿ ತಿರುಗಿ ನೋಡುತ್ತಿದ್ದ. ಆಕಳೊಂದು ನೀರಡಿಸಿ ನಲ್ಲಿಯ ಪಕ್ಕದಲ್ಲಿ

ಬಂದಿತ್ತು. ಆದರೆ, ಇದಾವುದರ ಕಡೆಗೆ ನನ್ನ ಲಕ್ಷ್ಯ ಹರಿಯಲಿಲ್ಲ. ಮನದಲ್ಲೆಲ್ಲ ಸುಳಿಯುತ್ತಿದ್ದ ವಿಚಾರ ಒಂದೇ; ಚೆಲುವರಾಜನ ಆಗಮನ.

ಆಲೋಚನಾಲಹರಿಗೆ ಈಗ ಎಡೆತಡೆಯಿಲ್ಲದಾಯಿತು. ಚೆಂದೂರಿನ ಇತಿಹಾಸವೇ ಕಣ್ಣಮುಂದೆ ಬಂದು ನಿಂತಿತು. ಚೆಲುವರಾಜನ ಬಾಲ್ಯ ಜೀವನ, ಅವನ ಸಾಹಸ ಪರಂಪರೆಗಳು, ಅವನ ಅಧೀರ ಕಲ್ಪನಾ ಚಿತ್ರಗಳು, ಗಂಡಾಂತರದ ಆ ದುರ್ದಿನಗಳು, ಎಲ್ಲ ರಜತ ಪರದೆಯ ಬೊಂಬೆಗಳಂತೆ ಸುಳಿಯ ಹತ್ತಿದವು. ಕಣ್ಣು ತಾವೇ ತಾವಾಗಿ ಒದ್ದೆಯಾದವು. ಹನಿ ಹನಿಯಾಗಿ ನೀರು ಉದುರಲಾರಂಭಿಸಿತು. ಒಂದೆರಡು ತೊಟ್ಟು ನಾ ಹಿಡಿದ ಕಾಗದದ ಮೇಲೆಯೇ ಬಿತ್ತು. ಕಾಗದದಮೇಲೆ ಮಸಿ ಹರಡಿಕೊಂಡಿತು. ನನಗೆ ಇದಾವುದರ ಪರಿವೆಯೇ ಇಲ್ಲ. ಕಲ್ಲು ಬೊಂಬೆಯಂತೆ ಕಿಟಕಿಯಲ್ಲಿ ನೆಟ್ಟನೋಟದಿಂದ ನೋಡುತ್ತ ಕುಳಿತು ಬಿಟ್ಟೆದ್ದೆ. ಯಾವುದೋ ಹಕ್ಕಿಯೊಂದು ರಭಸದಿಂದ, ವಿದ್ಯುದ್ವೇಗದಿಂದ ಹಾರಿ ಹಾರಿ, ನಿಮಿಷಕ್ಕೆ ನೂರು ಗಾವುದವನ್ನು ಹಿಂದೆ ಸರಿಸುತ್ತ ಬರುವಂತೆ ಕಾಣುತ್ತಿತ್ತು. ನನ್ನ ಗೆಳೆಯನೂ ಏಕೆ ಈ ಹಕ್ಕಿಯ ವೇಗದಲ್ಲಿ ಬಂದು ನನ್ನನ್ನು ಕೂಡಬಾರದು ? ಎಂದು ಯೋಚಿಸುತ್ತಿದ್ದೆ.

ಬಾಗಿಲು ಕಿರಕ್ ಕಿರಕ್ ಎಂದು ಶಬ್ದಮಾಡಿತು. ಆದರೂ ನಾನು ನನ್ನ ಸ್ಥಿರ ದೃಷ್ಟಿಯನ್ನು ಆ ಹಕ್ಕಿಯಿಂದ ವಾಪಸು ತೆಗೆದುಕೊಳ್ಳಲಿಲ್ಲ.

ಹಕ್ಕಿ ಹಾರಿ ಹಾರಿ ಬರುತ್ತಲೇ ಇತ್ತು.

ನನ್ನ ಕಣ್ಣ ಹನಿ ಇನ್ನೂ ಆರಿರಲಿಲ್ಲ. ನನ್ನ ಇನ್ನೊಬ್ಬ ಆಪ್ತ ಮಿತ್ರ ಒಳಗಡೆ ಬಂದವನೇ ನನ್ನ ಸ್ಥಿತಿಯನ್ನು ನೋಡಿ ಗಾಬರಿಯಾಗಿ ಪ್ರಶ್ನಿಸಿದ.

" ಏನು ಶ್ರೀನಿವಾಸ ಸಮಾಚಾರ ? ಯಾರ ಕಾಗದ ? ಏನಾಯಿತು ? ಹಾಗೇಕೆ ನಿರಾಶನಾಗಿ ಕುಳಿತಿದ್ದೀಯಾ ? ಕಾಫಿ ಆಯಿತೇ ಇಲ್ಲವೇ ? ಬಾ ಹೋಗಿ ಬರೋಣ. "

ನನ್ನ ಮೈ ಮೇಲೆ ಪ್ರಜ್ಞೆ ಬಂದಿತ್ತು.

"ಬಾ ಚಂದ್ರೂ, ನಿನಗೊಂದು ಹೊಸಸಮಾಚಾರ ತಂದಿದ್ದೇನೆ. ಅಂಥಾದೇನೂ ಗಂಡಾಂತರ ಸಂಭವಿಸಿಲ್ಲ. ಇದೋ ಈ ಕಾಗದ ಓದು."

ಚಂದ್ರು ಕಾಗದ ಓದಿದ.

"ಶ್ರೀನಿವಾಸ, ನಾವಿಬ್ಬರೂ ಯೋಚಿಸಿದ್ದೇ ಆಗಬೇಕೆ? ಕಾಗದ ಬರೆದ ಮಹಾರಾಯ ಇಂಥ ದಿವಸ ಬರ್ತೇನೆ ಅಂತ ಬರೀಬೇಡವೇ? ನಾವೆಲ್ಲ ಸ್ಟೇಷನ್ನಿಗೆ ಹೋಗಿ ಕರೆದುಕೊಂಡು ಬರಬಹುದಿತ್ತು."

"ನಾನೂ ಅದನ್ನೇ ಯೋಚಿಸ್ತಾ ಇದ್ದೆ."

"ಆಗಲಿ ಆತ ಬಂದಂತೂ ಬರಲಿ. ಸಂಪೂರ್ಣವಾಗಿ ಕಥೇನೆಲ್ಲಾ ಕೇಳೋಣ. ಈಗ ಬರ್ತಾಯಿರೋ ಸಮಾಚಾರ ಎಷ್ಟು ಓದಿದರೂ ಇನ್ನೂ ಎಷ್ಟೆಷ್ಟು ಇದೆಯೋ ಅನಿಸ್ತಾ ಇದೆ."

"ಇವತ್ತಿನ ಪೇಪರ್ ನೋಡಿದೆಯೋ?"

"ಅದೇ ತಾನೇ ಸುಭಾಸ್ ಬೋಸ್ ಬದುಕಿದ್ದಾರೆ. ಪ್ರಾಯಶಃ ಅವರು ರಷ್ಯಾದಲ್ಲಿರಬಹುದು. ಆದರೆ ಸುಭಾಸ್ ಸತ್ತದ್ದು ನಾನು ನಂಬ ಲಾರೆ ಅಂತ ಹೇಳಿಕೆ ಇತ್ತದ್ದು ತಾನೆ?"

"ಹೂಂ ಅದೆ."

"ಓದಿದ್ದೇನೆ. ಎಲ್ಲಾದ್ರೂ ಉಂಟೇನಯ್ಯ. ಸುಭಾಸ್ ಸಾಯೋದು ಅಂದ್ರೇನು ಹುಡುಗಾಟವೇ? ಹೀರೋ ಅಂದ್ರೆ ಹೀರೋ ಕಣಯ್ಯ."

"ಚೆಲುವರಾಜ್ ಎಂಥಾ ಬೆಪ್ಪಕ್ಕಿ. ಇಂಥಾ ದಿನಾ ಬರ್ತೇನೆ ಅಂತ ಕಾಗದದಲ್ಲಿ ಬರೀ ಬೇಡವೇ?"

"ನಾನೂ ಅದನ್ನೇ ಯೋಚಿಸ್ತಾ ಇರೋದು."

"ಅಂತೂ ಒಳ್ಳೇ ಅವಕಾಶ ಸಿಕ್ಕತ್ತೆ ಅಂದಹಾಗಾಯ್ತು. ನಾಲ್ಕು ದಿನಾ ಹಗಲು ರಾತ್ರಿ ಗಂಟುಬಿದ್ದು ಕತೆ ಕೇಳೋಣ."

"ನಾನು ಅದನ್ನೇ ಬಯಸ್ತಾ ಇರೋದು."

ಮಾತು ಸಾಗಿಯೇ ಇತ್ತು. ಗಡಿಯಾರದಲ್ಲಿ ೧೨ ಬಾರಿ ಸದ್ದು ಕೇಳ ಬಂತು.

೨

ಬೆಂಗಳೂರಿನ ನಿಲ್ದಾಣದಲ್ಲಿ ಗದ್ದಲವೇ ಗದ್ದಲ. ಎಂದೂ ಇಲ್ಲದ ಜನ ಸಂದಣಿ. ಪತ್ರಿಕಾ ಕರ್ತರು ಹಲವರು, ಶಾಲಾ ಕಾಲೇಜ ವಿದ್ಯಾರ್ಥಿಗಳ ಅನೇಕರು, ನೂರಾರು ಅಪರಿಚಿತರು ಪ್ಲಾಟ್ ಪಾರ್ಮಿನಮೇಲೆ ಸುಳಿದಾಡುತ್ತಿದ್ದಾರೆ. ಪ್ರವಾಸಿಗರ ಗುಂಪಿನ ಜೊತೆಗೆ ಇದಿಷ್ಟು ಹೆಚ್ಚಿನ ಜನ. ಕಾಲಿಟ್ಟೇನಂದರೆ ಸ್ಥಳವಿಲ್ಲ.

ಯಾವಾಗ ಟ್ರೈನು ಬರುತ್ತೋ ಎಂದು ಜನ ಕಾದು ಕುಳಿತಿದ್ದರು. ಇಷ್ಟೆಲ್ಲ ಗದ್ದಲ, ಜನಸಂದಣಿ ಇಂದೇಕೆ ಎಂದು ನಾನು ಚಂದ್ರೂನನ್ನು ಪ್ರಶ್ನಿಸಿದೆ. ಆದರೆ ಆತನಿಗೂ ಅರ್ಥವಾಗಲಿಲ್ಲ. ಯಾರೋ ದೊಡ್ಡ ಮನುಷ್ಯರು ಬರುತ್ತಿರಬೇಕು. ಇಲ್ಲವಾದರೆ ಇಷ್ಟು ಜನ ವೇಕೆ ಸೇರುತ್ತಾರೆ ಎಂದು ನಾನುಡಿದೆ. ಚಂದ್ರೂಕೂಡ ಹೌದು ಇದ್ದರೂ ಇರಬೇಕು ಎಂದುತ್ತರಿಸಿದ.

ನನಗೆ ಮಾತ್ರ ತೃಪ್ತಿಯಾಗಲೇ ಇಲ್ಲ. "ಚಂದ್ರೂ, ಪತ್ರಿಕೆಯವರನ್ನಾದರೂ ಕೇಳಬಾರದೆ ಯಾರು ಬರುತ್ತಾರೆಂದು?" ಎಂದೆ. ಚಂದ್ರೂ "ನಿನಗೊಂದು ಹುಚ್ಚು, ಹಾಗೆಲ್ಲ ಕೇಳಬಾರದು. ಸುಮ್ಮನೆ ಗಂಭೀರವಾಗಿರು." ಎಂದ.

ಟ್ರೈನು ಕೂಗಿದ ಸದ್ದು ಕೇಳಿದ ಕೂಡಲೇ ಆ ಕಡೆ ನನ್ನ ದೃಷ್ಟಿ ಹರಿಯಬೇಕು, ಆದರೆ ಬೆಂಗಳೂರಿನಂಥ ಜಂಕ್ಷನ್ ನಿಲ್ದಾಣದಲ್ಲಿ ಯಾವ ಯಾವೋ ಟ್ರೈನುಗಳು ಕೂಗು ಹಾಕುತ್ತಲೇ ಇರುತ್ತವೆಂಬುದು ನನ್ನ ಸ್ಮೃತಿ ಪಟಲದಿಂದ ಹಾರಿಹೋಗಿತ್ತು.

ನಾನು, ಚಂದ್ರೂ ಚೆಲುವರಾಜನಿಗಾಗಿ ಕಾದು ನಿಂತಿದ್ದೆವು, ಅವನು ಕಳಿಸಿದ ಟೆಲಿಗ್ರಾಂ ಪ್ರಕಾರ ನಾವೀರ್ವರೂ ನಿಲ್ದಾಣಕ್ಕೆ ಬಂದೆವು. ಆದರೆ ನಮ್ಮಂತೆಯೇ ಮತ್ತಾರದೋ ಆಗಮನಕ್ಕಾಗಿ ನೂರಾರು ಜನ ಕಾದು ನಿಂತಿದ್ದರು.

ದೂರದಲ್ಲಿ ಗಾಡಿ ಕೂಗಿದ ಸದ್ದು. ಜನವೆಲ್ಲ ಕೂಗು ಹಾಕಿದರು. "ಓ! ಟ್ರೈನು ಬಂತು."

ಝುಗ್ ಝುಗ್ ಝುಗ್ ಝುಗ್ ಝುಗ್

ರಭಸದಿಂದಲೇ ಬಂದಿತು ಟ್ರೈನು. ಕಿಡಿಕಿಯಲ್ಲಿನ ಹಲವರು ಜೈ ಹಿಂದ'—ಜೈ ಹಿಂದ' ಎಂದು ಘೋಷ ಮಾಡಿದರು.

ಗಾಡಿಬರುವದಕ್ಕಿಂತ ಮೊದಲಿದ್ದ ನೂಕು ನುಗ್ಗಲು ಈಗ ಮಿತಿಮಿಾರಿತು. ಹೂವಿನ ಹಾರ ಹಿಡಿದವರು ಥರ್‍ಡ್ ಕ್ಲಾಸು ಡಬ್ಬದ ಹತ್ತಿರ ಓಡಿದರು. ಮಿರಾಯಿಗೆ ಮುತ್ತಿದ ನೊಣದಂತೆ ಆ ಡಬ್ಬದ ಹತ್ತಿರ ಜನ ಜನ ಜಾತ್ರೆ.

ನನಗೆ ಯಾವುದೂ ಅರ್ಥವಾಗಲಿಲ್ಲ. ಚೆಲುವರಾಜನನ್ನು ನಾನು ಹೇಗೆ ಗುರುತಿಸುವುದು ಎಂದು ಆಲೋಚಿಸುತ್ತಲೇ ಇದ್ದೆ. ಲೆಕ್ಕವಿಲ್ಲ-ದಷ್ಟುಜನ ಗಂಟು ಮೂಟೆಗಳನ್ನು ಹೊತ್ತು ಸಾಗಿದ್ದರು. ಹೆಂಗಸರು, ಮಕ್ಕಳು, ಮುದುಕರು ಯಾವದೋ ಊರಿನವರು ಟಿಕೇಟು ಕೊಟ್ಟು ಮುಂದೆ ಹೋಗುತ್ತಿದ್ದರು. ನಾನು ಚೆಲುವರಾಜನನ್ನು ಪತ್ತೆ ಹಚ್ಚುವುದು ಸಾಧ್ಯವಿಲ್ಲ ಎಂದುಕೊಂಡು ಒತ್ತಟ್ಟಿಗೆ ದೂರ ಸರಿದು ನಿಂತುಕೊಂಡೆ. ಚಂದ್ರೂ ಮಾತ್ರ ಅತ್ತಿತ್ತ ತಿರುಗಾಡುತ್ತಲೇ ಇದ್ದ.

ಹಾರ ಹಾಕಿಸಿಕೊಂಡ ವ್ಯಕ್ತಿ ಹೆಜ್ಜೆ ಇಕ್ಕುವುದೇ ಪ್ರಯಾಸವಾಗಿ ಹೋಯ್ತು. ಗಾಳಿಬಂದು ಅವನ ಮೈ ಸೋಕುವುದೇ ಅಸಾಧ್ಯವಾಯಿತು. ಹಾರದಮೇಲೆ ಹಾರಗಳು ಬಿದ್ದು ಅವನ ಕುತ್ತಿಗೆಯೆಲ್ಲ ತುಂಬಿಹೋಗಿತ್ತು.

"ಇವನೇ ಚಲುವರಾಜನಿರಬಹುದೇ?" ಎಂಬ ಪ್ರಶ್ನೆ ನನ್ನ ತಲೆಯಲ್ಲಿ ಸುಳಿಯಿತು. ಛೇ ಎಲ್ಲಾದರೂ ಉಂಟೆ? ಸಾಮಾನ್ಯ ಸಿಪಾಯಿಯಾಗಿ ಸೇರಿದ ಆತನಿಗೆ ಇಷ್ಟುಗೌರವ ಎಂದಾದರೂ ಸಾಧ್ಯವೇ? ಇಲ್ಲದಿದ್ದರೆ ಆತನೊಡನೆ ಬಿಡುಗಡೆಯಾದ ಯಾರಾದರೂ ಅಧಿಕಾರಿಯೇ? ಎಂದು ಏನೋನೋ ವಿಚಾರಿಸುತ್ತಿದ್ದೆ.

ಗಲಭೆ ಕಡಿಮೆಯಾಗುತ್ತಿತ್ತು. ಜನಜಂಗುಳಿ ಕರಗುತ್ತಿತ್ತು. ನನ್ನ ಯೋಚನೆ ಮಾತ್ರ ಕಡಮೆಯಾಗುವುದರ ಬದಲು ಹೆಚ್ಚುತ್ತಿತ್ತು.

ಚೆಂದ್ರೂ ಬಂದ. ಅವನಿಗೂ ಸರಿಯಾಗಿ ತಿಳಿಯಲಿಲ್ಲ.

"ಏನಯ್ಯ ಬಂದಿದ್ದು ವ್ಯರ್ಥವಾಯ್ತಲ್ಲ."

"ನೀನು ವಿಚಾರಿಸಬಾರದಿತ್ತೇ ಆ ಹಾರ ಹಾಕಿಸಿಕೊಂಡವರು ಯಾರು ಅಂತ ?"

"ಕೇಳಿದೆ ಒಬ್ಬೊಬ್ಬರು ಒಂದೊಂದು ಹೇಳಿದರು"

"ಸರಿ ನಾಳೆ ಬಂದರೂ ಬರಬಹುದು."

ಇಬ್ಬರೂ ಸ್ಟೇರ್ಷ ಮೆಟ್ಟಲುಗಳನ್ನು ಏರಿದೆವು.

ಯಾರೋ ಹೇಳುತ್ತಿದ್ದರು.

"ಕ್ಯಾಪ್ಟನ್ ರಾಮ್‌ಸಿಂಗ್ ಈಗ ಬಂದವರು. ಸುಭಾಸ್‌ಚಂದ್ರ ಬೋಸರ ಸೈನ್ಯದಲ್ಲಿ ಇವರು ಅಧಿಕಾರಿಗಳಾಗಿದ್ದರಂತೆ. ಇತ್ತೀಚೆಗೆ ಇವರ ಬಿಡುಗಡೆಯಾಯಿತಂತೆ. ಅವರ ಆಪ್ತಮಿತ್ರರೆಲ್ಲ ಅವರನ್ನು ಇಂದು ಸ್ವಾಗತಿಸಿದ್ದು."

ಇನ್ನೊಬ್ಬರು :

"ರಾಮುಸಿಂಗರ ಜೊತೆಗೆ ಇನ್ನೂ ಐದು ಜನ ಐ. ಎನ್. ಎ. ಸೈನಿಕರು ಬಿಡುಗಡೆ ಹೊಂದಿ ಬಂದಿದ್ದಾರೆ."

ಎಲ್ಲ ಜನರ ಬಾಯಿಯಲ್ಲೂ ಅದೇ ಮಾತು. ಎತ್ತಲಕ್ಷ ಕೊಟ್ಟರೂ ಸುಭಾಸ್ ಸೈನಿಕರ ನಾಮೋಚ್ಚಾರಣೆ.

ನಾನು ಚಂದ್ರೂಗೆ ಹೇಳಿದೆ "ಆ ಐದು ಜನರಲ್ಲಿ ನಮ್ಮ ಚೆಲುವ ರಾಜನೂ ಇರಬಹುದು. ವಿಚಾರಿಸೋಣವೆ ?"

"ಇದ್ದರೂ ಇರಬಹದು. ನಡೆ ಹೋಗೋಣ" ಎಂದು ಚಂದ್ರೂ ಹೇಳಿದ.

ಮೆಟ್ಟಲು ಇಳಿದು ಬಂದು ನೋಡಿದರೂ ಜನರ ತಂಡ ಕಡಮೆಯಾಗಿರಲಿಲ್ಲ. ಅವರು ಏರುವ ಜಟಕಾದ ಸುತ್ತೆಲ್ಲ ಜನ. ಅವರಿಗೆ ಉಸಿರಾಡುವುದೇ ಪ್ರಯಾಸವಾಗಿರಬೇಕೆಂದು . ನಮಗೆ ತೋಚಿತು.

ಜಟಕಾ ಓಡಲಾರಂಭಿಸಿತು. ಮುತ್ತಿದ್ದ ಜನದಿಂದ ಒಮ್ಮೆ ಪಾರಾಯಿತು.

ಯಾರಿಗಾಗಿ ನಾವು ಬಂದೆವೋ ಅವರು ಬಂದರೋ ಇಲ್ಲವೋ ತಿಳಿಯಲೇ ಇಲ್ಲ.

ಕುತೂಹಲ ಇನ್ನೂ ಕೆರಳಿತು. ಬಂದವರು ಎಲ್ಲಿ ಇಳಿದುಕೊಂಡಿದ್ದಾರೆಂದು ಯಾರನ್ನಾದರೂ ವಿಚಾರಿಸೋಣವೆಂದು ಯತ್ನಿಸಿದ್ದಾಯಿತು. ತಿಳಿದರೂ ಅದೂ ಅಸ್ಪಷ್ಟ. ಬಸವನಗುಡಿ ೬ನೇ ಬೀದಿ.

ನಿರಾಶೆ ಹಬ್ಬಿ ನಿಂತಿತು ಚೆಲುವರಾಜನ ಮೌಢ್ಯವನ್ನು ಕಟುವಾಗಿ ಟೀಕಿಸಿದ್ದಾಯಿತು. ಹತ್ತಾರು ಬೈಗಳನ್ನು ಅವನಿಗೆ ಬೈದದ್ದಾಯಿತು. ಆದರೆ ಎಲ್ಲ ವ್ಯರ್ಥ.

ಇಬ್ಬರೂ ಮನೆ ತಲ್ಪಿದೆವು

ರಾತ್ರಿ ಊಟ ಬೇಡವೆನಿಸಿತು. ಹಾಸಿಗೆಯ ಮೇಲೆ ಎಷ್ಟು ಬಾರಿ ಉರುಳಾಡಿದರೂ ನಿದ್ರೆ ಬಾರದಂತಾಯಿತು. ಬರೀ ಅದೇ ಯೋಚನೆ. ಚೆಲುವರಾಜನನ್ನು ಕಾಣುವುದು ಹೇಗೆ? ಆತ ಬಂದನೋ ಇಲ್ಲವೋ ಇದೇ ಚಿಂತೆ.

ಕಿಡಿಕಯಲ್ಲಿ ನೋಡುತ್ತಿದ್ದೆ. ನೂರು ನಕ್ಷತ್ರಗಳು ನನ್ನನ್ನೇ ನಿರೀಕ್ಷಿಸುತ್ತಿರುವಂತೆ ಭಾಸವಾಯಿತು. ಕತ್ತಲೆ ಆ ನಕ್ಷತ್ರಗಳನ್ನು ನುಂಗಿ ನೀರು ಕುಡಿಯಲು ಯತ್ನಿಸುತ್ತಿದ್ದರೂ ಅವೆಲ್ಲ ಕುಲುಕುಲು ನಗುತ್ತಿರುವಂತೆ ಭಾಸವಾಗುತ್ತಿತ್ತು. ಜಗತ್ತೆಲ್ಲ ಚೇತನಾರಹಿತವಾಗಿ ಮಲಗಿದಂತೆ ತೋರುತ್ತಿತ್ತು. ಆಕಾಶ ಪ್ರಪಂಚ ಮಾತ್ರ ಸಚೇತನವಾಗಿ ಉಳಿದೆಲ್ಲ ಲೋಕಗಳ ಉಸ್ತುವಾರಿ ಗೈಯುತ್ತಿದ್ದಂತೆ ಕಂಡು ಬರುತ್ತಿತ್ತು.

ಆಗಾಗ ತಂಗಾಳಿಯ ತೆರೆ ಬಂದು ಮೈ ಸೋಕುತ್ತಿತ್ತು. ನಿರಭ್ರವಾದ ಆಕಾಶದ ನಿತ್ಯ ಸೌಂದರ್ಯ ಅವರ್ಣನೀಯವಾಗಿತ್ತು. ಆದರೆ ನನಗೆ ಇದಾವುದೂ ಬೇಡವೆನ್ನುವಂತೆನಿಸಿ ಹೋಗಿತ್ತು.

ನನ್ನಂತೆಯೇ ಚಂದ್ರೂ ಕೂಡ ನಿರಾಶೆಯ ನಿಟ್ಟುಸಿರು ಹಾಕಿಯೇ ಮನೆಯತ್ತ ತೆರಳಿದ್ದ. ಅವನಿಗೂ ಕೂಡ ರಾತ್ರಿ ನಿದ್ರೆ ಬಾರದೆಂದು ನಾನು ಊಹಿಸಿದ್ದೆ.

ದೂರದ ಗಂಟೆ ಒಂದು ಬಾರಿ ಸದ್ದು ಮಾಡಿತು. ಮುಂದೆ ಅರ್ಧ ಗಂಟೆಯಲ್ಲಿ ಚಂದ್ರೂ ನನ್ನ ರೂಮಿಗೆ ಬಂದವನೇ ಮತ್ತೆ ಹರಟೆಗೆ ಆರಂಭಿಸಿದ. ಬೆಳಗಿನ ಜಾವ ೫ ಗಂಟೆಯವರೆಗೆ ಏನೇನೋ ಕಾಡು ಹರಟೆ ಹೊಡೆದು ಹೊತ್ತು ನೂಕಿದೆವು.

ಸುಮಾರು ೫|| ಗಂಟೆಯಾಗಿರಬೇಕು. ಈರ್ವರಿಗೂ ಕೊಂಚ ಜೋಂಪು ಬಂದ ಹಾಗಾಯಿತು. ಹಾಗೆಯೇ ಹಾಸಿಗೆಯ ಮೇಲೆ ಉರುಳಿದೆವು.

ಎಚ್ಚರವಾದಾಗ ಹಗಲು ಹನ್ನೊಂದು ಗಂಟೆ.

೩

ಸಿಗರೇಟಿನ ಹೊಗೆಯನ್ನುಗುಳುತ್ತ ಚಂದ್ರೂ ಬರುತ್ತಿದ್ದುದನ್ನು ದೂರದಿಂದಲೇ ನೋಡಿದೆ. ಕೈಯಲ್ಲಿ ಯಾವುದೋ ದಿನ ಪತ್ರಿಕೆಯ ಸುರುಳಿಯೊಂದು ಸ್ಥಾನ ಪಡೆದಿತ್ತು.

"ಗ್ರ್ಯಾಂಡ್ ನ್ಯೂಸ್ ಫಾರ್ ಯು (ನಿನಗೊಂದು ರಮ್ಯ ವರ್ತಮಾನ)" ಎಂದು ಚಂದ್ರೂ ಎಂದೂ ತೋರದ ಉತ್ಸಾಹವನ್ನೂ ಹರ್ಷವನ್ನೂ ಬೆರಸಿ ಮೃದುವಾದ ನಗೆಮುಗುಳನ್ನೊಂದನ್ನು ಉರುಳಿಸಿದ.

"ಏನಪ್ಪ ಸಮಾಚಾರ; ಮೊದಲು ಹೇಳಬಾರದೇ" ಎಂದು ನಾನು ಅವಸರ ಪಡಿಸಿದೆ. ಕೈಯ್ಯಲ್ಲಿದ ದಿನಪತ್ರಿಕೆಯನ್ನು ತೆಗೆದು ಬೆರಳುಮಾಡಿ ತೋರಿಸಿದ.

**ರಾಷ್ಟ್ರೀಯ ಸೈನಿಕರ ಸಾರ್ವಜನಿಕ ಭಾಷಣ.**

ಈ ದಿನ "ಸುಭಾಸ್ ಪಾರ್ಕ್" (ಮುನಿಸಿಪಲ್ ಪಾರ್ಕ್) ನಲ್ಲಿ ಇತ್ತೀಚೆಗೆ ಜೆಸ್ಸೋರ್ ಯುದ್ಧ ಬಂದಿ ಸಿಬಿರದಿಂದ ಮುಕ್ತರಾಗಿ ಬಂದಿರುವ ಕ್ಯಾ|| ರಾಮ್‌ಸಿಂಗ್ ಮತ್ತು ಚೆಲುವರಾಜ್ ಅವರು ತಮ್ಮ ಯುದ್ಧಾನುಭವಗಳನ್ನು ತಿಳಿಸುತ್ತಾರೆ. ಸರ್ವರಿಗೂ ಆಹ್ವಾನವಿದೆ.

ಎಂದು ಓದಿದೆ. ನನ್ನ ಹೃದಯದಲ್ಲಿ ಸಂತೋಷದ ನದಿಯು ಕೋಡಿ ಒಡೆಯಿತು. ಅರೆಕ್ಷಣ ಜಗತ್ತೇ ಮರೆತುಹೋಯಿತು.

"ಏಳು ಚಂದ್ರೂ ಮೊದಲು ಸುಭಾಸ್ ಪಾರ್ಕಿಗೆ ಹೋಗೋಣ. ನೋಡಿದೆಯಾ ನೆನ್ನೆಯೇ ಬಂದಿದಾನೆ ಚೆಲುವರಾಜ್. ಅವನ ಪರಿಚಯ ನಮಗಾಗಲಿಲ್ಲ. ಕ್ಯಾ|| ರಾಮುಸಿಂಗರ ಜೊತೆಗೇ ಇವನೂ ಬಂದಿರಬೇಕು."

"ನನಗೂ ಹಾಗೇ ಎನಿಸುತ್ತದೆ. ಇಂದು ಸಭೆ ಮುಗಿದ ಮೇಲೆ ಜನಗಳು ರೈಲ್ವೆ ಸ್ಟೇಷನ್ನಿನಲ್ಲಿಯಂತೆ ಮುತ್ತಿಕೊಂಡರೆ ನಮ್ಮ ಗತಿ?"

"ಏನಾದರೂ ಆಗಲಿ ಇವತ್ತು ಬಿಡುವುದುಂಟೆ. ನಮ್ಮ ಮನೆಗೆ ಅವನನ್ನು ಕರೆದುಕೊಂಡು ಬಂದೇ ತೀರೋಣ. ನಿನಗೇಕೆ ಯೋಚನೆ."

"ಏಳು ಮೊದಲು' ಎಂದು ಚಂದ್ರೂ ಅವಸರದಿಂದಲೇ ಹೇಳಿದ.

ನಾನೂ ಸನ್ನದ್ಧನಾದೆ. ಇಬ್ಬರೂ ಬಾಗಿಲು ದಾಟಿದೆವು. ನಮ್ಮಿಬ್ಬರ ಕಾಲುಗಳು ದೇಹವನ್ನು ಸರವಾಗಿ ಸಾಗಿಸುತ್ತಿದ್ದುವು. ದಾರಿಯಲ್ಲೂ ಮೌನ.. ಕಣ್ಣೆದುರು ಕೂಡ ಸಭೆಯ ಚಿತ್ರವೇ ಬಂದು ನಿಲ್ಲುತ್ತಿತ್ತು.

ದಾರಿಯಲ್ಲಿ ಪರಿಚಿತರನೇಕರು ನಮಸ್ಕಾರ ಚಮತ್ಕಾರ ಗೈದರು. ಪ್ರತಿಯಾಗಿ ವಂದಿಸುವುದು ಕೂಡ ನಮಗಾಗಲಿಲ್ಲ. ಎಲ್ಲೋ ಮನಸ್ಸು; ಎಲ್ಲೋ ದೇಹ.

ಕಾಲಿನವೇಗ ಮನೋವೇಗಕ್ಕೆ ಹೇಗೆ ಸರಿಯಾದೀತು! ಎಷ್ಟು ಲಗು ಬಗೆಯಿಂದ ನಡೆದರೂ ನಿಧಾನವೇ ಎನ್ನಿಸುತ್ತಿತ್ತು.

ಇಪ್ಪತ್ತೈದು ನಿಮಿಷಗಳ ಕಾಲ್ನಡಿಗೆಯಿಂದ ಈರ್ವರೂ ಸುಭಾಸ್ ಪಾರ್ಕಿಗೆ ಗಂಭೀರವಾಗಿ ಪ್ರವೇಶಿಸಿದೆವು. ನೂರಾರು ಜನ ನೆರೆದಿದ್ದಾರೆ. ಭಾಷಣಕಾರರು ಮಾತ್ರ ಇನ್ನೂ ವೇದಿಕೆಗೆ ಬಂದಂತೆ ಕಾಣಲಿಲ್ಲ. ನಮ್ಮಷ್ಟೇ ಕುತೂಹಲವುಳ್ಳ ಅನೇಕರ ಜೊತೆಗೆ ನಾವೂ ಸೇರಿಕೊಂಡೆವು.

ಒಂದೆರಡು ನಿಮಿಷಗಳು ಕಳೆದವು. ಇದ್ದಕ್ಕಿದ್ದ ಹಾಗೆಯೇ ಪಾರ್ಕೆಲ್ಲ ಪ್ರತಿಧ್ವನಿಗೊಡುವಂತೆ ''ಜೈ ಹಿಂದ್'' ಜಯಕಾರ ಕೇಳ ಬಂತು.

ದೂರದಲ್ಲಿ ಸೈನಿಕರ ಉಡುಪಿನಲ್ಲಿ ಮೂವರು.ಕಾಣಿಸಿದರು. ನನಗೆ ಮಾತ್ರ ಚೆಲುವರಾಜನ ಮುಖ ಪರಿಚಯವಾಯಿತು.

ಭಾರತವೀರರು ಗಂಭೀರವಾಗಿ ಸೈನಿಕರ ಹೆಜ್ಜೆಯನ್ನೇ ಹಾಕುತ್ತ ಬಂದರು. ಸಭೆಗೆ ಬಂದ ಜನವೆಲ್ಲ ಎದ್ದು ನಿಂತು ಅವರನ್ನೇ ನಿಟ್ಟಿಸ ಲಾರಂಭಿಸಿದರು. ಬಂದ ಆ ಧೀರರು ''**ಜೈ ಹಿಂದ್-ಆಜಾದ್ ಹಿಂದ್ ಝಿಂದಾಬಾದ್ - ಸುಭಾಸ್ ಬಾಬು ಝಿಂದಾಬಾದ್-ಗಾಂಧೀಮಹಾ ರಾಜ್ ಕೀ—ಜೈ—ಜೈ.**'' ''**ಚಲೋದಿಲ್ಲಿ**'' ಎಂದು ಸಿಂಹನಾದ ಗೈದರು.

"**ಜೈ ಹಿಂದ್**" ಘೋಷಣೆ ಮಾಡಿದರು.

ಸಭೆಯ ಕಾರ್ಯ ಕಲಾಪಗಳು ಆರಂಭವಾದವು. ಪ್ರಾರಂಭದಲ್ಲಿ ಭಾಷಣಕಾರರ ಪರಿಚಯ ಮಾಡಿಕೊಡುವಾಗಲೇ ನಮ್ಮ ಚೆಲುವರಾಜ ಬಂದುದು ನಮಗೆ ವಿಶೇಷ ಹರ್ಷವನ್ನುಂಟು ಮಾಡಿತು.

ಯುಧಾವಿಧಿಯಾಗಿ ಮೂವರೂ ಮಾತನಾಡಿದರು. ಆದರೆ ನಾವು ಯೋಚಿಸಿದಷ್ಟು ವಿಷಯ ಆ ಭಾಷಣದಲ್ಲಿ ಸಿಕ್ಕಲಿಲ್ಲ. ಪ್ರಾಯಶಃ ಸಾರ್ವ ಜನಿಕ ವೇದಿಕೆಯಿಂದ ಅವರು ವಿಶೇಷ ವಿಷಯಗಳನ್ನು ಹೇಳಿರಲಿಕ್ಕೂ ಇಲ್ಲ.

ಚೆಲುವರಾಜ್ ಭಾಷಣಕಾರನಲ್ಲನೆಂಬುದು ಅವನು ಮಾತನಾಡಿದ ಹರಕು ಮುರುಕು ಶಬ್ದಗಳಿಂದ ಗೊತ್ತಾಗುವಂತಿತ್ತು. ರಾಮ್‌ಸಿಂಗ್ ಕೂಡ ಮಾತುಗಾರನಲ್ಲ. ಸಾಹಿತ್ಯವಿಲ್ಲ ; ಕಲೆಯಿಲ್ಲ ; ರಾಜಕಾರಣವಿಲ್ಲ ; ವಿಜ್ಞಾನವಿಲ್ಲ. ವಿಷಯ ಪ್ರತಿಪಾದನೆ ಇಲ್ಲ. ಏನೂ ಇಲ್ಲ. ಆದರೆ ಅವರ ಮಾತಿನಲ್ಲಿನ ಕಾವು ; ಆ ರಾಷ್ಟ್ರಪ್ರೇಮ ; ತ್ಯಾಗ ಮನೋವೃತ್ತಿ ಇವೇ ಅವರ ಭಾಷಣದ ಜೀವಾಳವಾಗಿದ್ದುವು.

ಅಲ್ಲಿ ನೆರೆದಿದ್ದವರೆಲ್ಲರಲ್ಲಿ ಮುಕ್ಕಾಲುವಾಸಿ ಕಾಲೇಜು ವಿದ್ಯಾರ್ಥಿ ಗಳು. ಅವರಿಗೆ ಸಾಹಿತ್ಯ, ಕಲೆ, ರಾಜಕಾರಣ, ವಿಜ್ಞಾನ ಗೊತ್ತಿಲ್ಲವೇ ? ಆದರೆ ಈ ಎಲ್ಲ ಹಿಡಿತಗಳ ಮೇರೆಯಿಂದ ಮೀರಿ ಸ್ವಾತಂತ್ರ್ಯದ ಪಂಜನ್ನು ಹಿಡಿದು ದಾಸ್ಯದ ಕಗ್ಗತ್ತಲನ್ನು ಓಡಿಸಲು ಸರ್ವಸ್ವವನ್ನೂ ತ್ಯಾಗಮಾಡಿದ

ಮಹಾವೀರರ ಸಂದೇಶವನ್ನು ಕೇಳುವುದರಲ್ಲಿ ಅವರು ತಮ್ಮನ್ನೇ ತಾವು ಮರೆತಿದ್ದರು. ಸುಭಾಸ್ ಬಾಬುವಿನ ಹೆಸರು ಬಂದಾಗಲಂತೂ ಪ್ರಖರವಾಗಿ ಕರತಾಡನ ಮಾಡುತ್ತಿದ್ದರು.

ಒಂದು ಸನ್ನಿವೇಶದಲ್ಲಂತೂ ವಿದ್ಯಾರ್ಥಿಗಳ ಉತ್ಸಾಹ ನೋಡಬೇಕು. ರಾಮ್‌ಸಿಂಗ್ ಹೇಳುತ್ತಿದ್ದಾರೆ.

"ರಂಗೂನನಲ್ಲಿ. ವೈರಿಗಳು ನುಗ್ಗಿ ಬರುತ್ತಿದ್ದಾರೆ. ಎಲ್ಲ ಕಡೆಗೂ ಸೈನಿಕರ ತಂಡ. ಗುಂಡಿನ ಸದ್ದು. ದೂರದಲ್ಲೆಲ್ಲ ಉರಿ. ಹೊಗೆ. ಜನರೆಲ್ಲ ಭೀತಿಗ್ರಸ್ತರಾಗಿ ಹೌಹಾರಿದ್ದಾರೆ. ರಾಷ್ಟ್ರೀಯ ಸೈನಿಕರ ಸೆರೆಯಾಗುತ್ತದೆಂಬ ಗುಲ್ಲು. ತೋಫಿನ ಬಂಡಿಗಳು ನಗರದೊಳಕ್ಕೆ ನುಗ್ಗುತ್ತವೆಂಬ ವಾರ್ತೆ. ಸುಭಾಸ್ ಬೋಸ್ ಅವರನ್ನು ಹಿಡಿಯುವದಕ್ಕಾಗಿ ಅಸಂಖ್ಯಾತ ಸೈನಿಕರು ಆಗಮಿಸಿದ್ದಾರೆ.

"ಪತ್ಯಕ್ಷವಾಗಿ ಕಾಳಗವೇ ನಡೆಯಿತು. ಹೆಣಗಳು ಉರುಳಿದುವು. ನೆತ್ತರು ಚಿಮ್ಮಿತು. ಕಾಲು ಕೈ ಕಳೆದುಕೊಂಡವರೆಷ್ಟು ಜನವೋ. ಸಮುದ್ರದ ತೆರೆಗಳಂತೆ ಸೈನಿಕನಿಕರ ಧಾವಿಸುತ್ತಿದೆ."

"ಕುದುರೆಗಳು ಎಲ್ಲಿಂದಲೋ ನುಗ್ಗಿದವು. ಸವಾರರ ವೇಗವನ್ನು ಬಣ್ಣಿಸಲಿಕ್ಕುಂಟೇ. ಯಾರೋ ಬೆರಳುಮಾಡಿ ತೋರಿಸಿದರು—ಅದೋ ನೇತಾಜಿ-ಆ ಬಿಳಿ ಕುದುರೆ ಏರಿ ಪಾರಾದರು-ನೋಡಿ-ಆಹಾ-ಏನು ಚಕಮಕಿ! "ಜೈ ಹಿಂದ್"

"ಸಾವಿರ ವರ್ಷ ಬದುಕಬೇಕು ಸುಭಾಷ್ ಬಾಬು"

ಎಂದು ಮಾತು ಮುಗಿಸಿದಾಗಂತೂ ಕೇಳುವ ತರುಣರ ಉತ್ಸಾಹ ಎಲ್ಲೆ ಮಿರಿತ್ತು.

ಚೆಲುವರಾಜನ ಮಾತಿನಲ್ಲೂ ಒಂದೆರಡು ಸನ್ನಿವೇಶಗಳ ವರ್ಣನೆ ಇದ್ದುದರಲ್ಲಿ ಚೆನ್ನಾಗಿಯೇ ಇತ್ತೆನ್ನಬೇಕು. ಭಾಷಣ ಮುಕ್ತಾಯವಾದ ಮೇಲೆ ಭಾಷಣಕಾರರ ಕೊರಳಿಗೆ ಹಾರಗಳಿಂದಲಂಕಾರವಾಯಿತು.

ಮತ್ತೆ "ಜೈ ಹಿಂದ್" ಜಯಕಾರ.

ಭಾಷಣಕಾರರನ್ನು ಜನರು ಮುತ್ತಿದರು. ಇವತ್ತು ತಪ್ಪಿಸಿಕೊಳ್ಳು ವುದು ತರವಲ್ಲವೆಂದು ನಾನು ಮುಂದೆ ನುಗ್ಗಿದೆ. ಚಂದ್ರೂ ಹಿಂಬಾಲಿಸಿದ.

ವೇದಿಕೆಯ ಬಳಿ ಬರುವುದೊಂದೇ ತಡ ಚೆಲುವರಾಜ ಮುಂದಕ್ಕೆ ನುಗ್ಗಿ ಬಂದವನೇ ನನ್ನನ್ನು ಬಲವಾಗಿ ತಬ್ಬಿಕೊಂಡು ಬಿಟ್ಟ. ಜನರೆಲ್ಲ ಮತ್ತೆ "ಜೈ ಹಿಂದ್" ಎಂದು ಗದ್ದರಿಸಿದರು.

ಎರಡು ನಿಮಿಷಗಳವರೆಗೆ ಚೆಲುವರಾಜ್ ನನ್ನನ್ನು ಹಾಗೇ ತಬ್ಬಿ ಬಿಟ್ಟಿದ್ದ. ಏಳೆಂಟು ವರ್ಷಗಳ ಅಗಲುವಿಕೆಯಿಂದ ಈರ್ವರ ತೋಳುಗಳೂ ಪರಸ್ಪರ ಹಾತೊರೆಯುತ್ತಿದ್ದುದನ್ನು ತಮ್ಮ ತಮ್ಮಲ್ಲಿ ತೋರಿಕೊಳ್ಳುತ್ತಿರು ವಂತೆ ಬೇರೆಯವರಿಗೆ ಎನಿಸಿರಬೇಕು

ನಮ್ಮ ಈ ಆಲಿಂಗನ ಕೂಡಿದ ಜನರ ಮೇಲೆ ವಿಶೇಷ ಪರಿಣಾಮ ವನ್ನುಂಟು ಮಾಡಿತು. ಸ್ವತಂತ್ರ ಭಾರತ ಸೇನೆಯಲ್ಲಿದ್ದ ಕೀರ್ತಿಶಾಲಿ ನನ್ನ ಆಪ್ತನಿರಬೇಕೆಂಬ ವಿಚಾರ ಅನೇಕರ ತಲೆಯಲ್ಲಿ ಸುಳಿದಂತೆ ಭಾಸ ವಾಯಿತು.

ಯಾರೋ ಬಂದು ಕೇಳಿದರು. "ನಿಮ್ಮ ಅಣ್ಣನೋ ಇವರು" ಎಂದು. ಕೇಳಿದವರಿಗೆಲ್ಲ ಒಂದೊಂದು ಉತ್ತರ ಹೇಳಿ ತೃಪ್ತಿಪಡಿಸಬೇಕಾ ಯಿತು.

ಚೆಲುವರಾಜನಿಗೂ ವಿಶೇಷ ಸಂತೋಷ.

ರಾಮುಸಿಂಗ್ ಎಲ್ಲರಿಗೆ ವಂದಿಸಿ ಹೊರಡಲನುವಾದರು. ಚೆಲುವ ರಾಜ್ ಅವರ ಅನುಮತಿ ಪಡೆದು ಕೆಲಹೊತ್ತು ನಿಲ್ಲಲು ಒಪ್ಪಿದ.

"ಚೆಲುವರಾಜ್ ಈ ದಿನ ನೀನು ಖಂಡಿತ ನಮ್ಮ ಮನೆಗೆ ಬರ ಬೇಕು." ನಾನೆಂದೆ.

"ಬರುತ್ತೇನಪ್ಪ. ಇನ್ನೆಲ್ಲಿ ಹೋಗಲಿ? ನಾಲ್ಕು ದಿನ ನಿನ್ನ ಸಂಗಡ ಇದ್ದು ಮತ್ತೆ ಚೆಂದೂರಿನ ಕಡೆ ಹೋಗಬೇಕೆಂದು ಮಾಡಿದ್ದೇನೆ. ನನ್ನ ಜೀವವೆಲ್ಲ ನಿನ್ನ ಮೇಲೆಯೇ ಇತ್ತು."

"ನಾನೂ ಹಾಗೆಯೇ ಅಂದುಕೊಂಡಿದ್ದೆ ಚೆಲುವರಾಜ್. ಈ ನಾಲ್ಕಾರು ದಿನಗಳಲ್ಲಿ ನಿದ್ರೆ ಯಾರು ಮಾಡಿದ್ದಾರೆ? ಕೇಳು ಚಂದ್ರೂನ್ನ."

"ಕ್ಷಮಿಸಬೇಕು."

"ಎಂಥಾ ಬೆಪ್ಪ ನೀನು. ಅಲ್ಲಯ್ಯ ಇಂಥಾ ದಿನಾ ಬೆಂಗಳೂರಿಗೆ ಬರ್ತೀನೆ ಅಂತ ತಾರೀಖು ತಿಳಿಸಬೇಡವೇ?"

"ನಾನೆಲ್ಲ ಆಮೇಲೆ ಹೇಳ್ತೀನೆ. ಈಗ ನಡೀ ಮತ್ತೆ. ಒಳ್ಳೆ ಕಾಫಿ ಕುಡಿಯೋಣ."

ಚಂದ್ರೂ ನಾವು ಮಾತನಾಡುತ್ತಿದ್ದುದನ್ನು ಮೊದಲಗಿತ್ತಿ ತನ್ನನಲ್ಲನ ಬಗ್ಗೆ ಬೇರೆಯವರಾಡುವ ಮಾತುಗಳನ್ನು ಕುತೂಹಲದಿಂದ ಕೇಳುವಂತೆ ಕಿವಿಗೊಟ್ಟು ಕೇಳುತ್ತಿದ್ದ.

ನಮ್ಮ ಮಾತುಗಳು ಸಾಗಿದ್ದಾಗಲೇ ಚೆಲುವರಾಜನ ಹಸ್ತಾಕ್ಷರಕ್ಕಾಗಿ ಐದಾರು ವಿದ್ಯಾರ್ಥಿಗಳು ಕೈ ಚಾಚಿದ್ದರು. ಒಂದೊಂದು ನೋಟ್ ಬುಕ್ಕಿನಲ್ಲಿ ತನ್ನ ರುಜು ಹಾಕಿ "**ಜೈ ಹಿಂದ್**" ಎಂದು ಬರೆದು ಕೊಡುತ್ತಿದ್ದ.

ವಿದಾರ್ಥಿಗಳಲ್ಲಿ ಹಲವರು ಬಂದು "ಏನ್ ಸರ್ ನೀವೆಲ್ಲಿರೋದು, ಕೊಂಚ ಅಡ್ರೆಸ್ ಹೇಳಿದರೆ" ಎಂದು ಕೇಳಿದರು.

ನಾನು ನನ್ನ ವಿಳಾಸ ಹೇಳಿದೆ.

"ಹಾಗಾದರೆ ನಾಳೆ ನಿಮ್ಮನ್ನು ಬಂದು ಕಾಣೋಣವೋ" ಎಂದು ಪ್ರಶ್ನೆಗೆ ಆರಂಭವಾಯಿತು ನಾನೇ ಉತ್ತರ ಹೇಳುವ ಅಧಿಕಾರ ತೆಗೆದುಕೊಂಡು :

"ನಾಳೆಗೆ ನಾವೆಲ್ಲೋ ಹೋಗಬೇಕೆಂದು ನಿರ್ಧರಿಸಿದ್ದೇವೆ. ಇನ್ನೆರಡು ದಿನ ಬಿಟ್ಟು ಬನ್ನಿ."

ವಿದ್ಯಾರ್ಥಿಗಳು ತಲೆಯಾಡಿಸಿದರು.

ನಾವು ಕಾಫಿ ಸಮಾರಾಧನೆಗಾಗಿ ಸಾಗಿದೆವು. ಕಾಲುಗಳ ಕೆಲಸ ಸಾಗಿದಂತೆ ಮಾತಿನ ಮಾಲೆಯನ್ನು ಕಟ್ಟುವ ಕೆಲಸವೂ ಸಾಗಿಯೇ ಇತ್ತು.

"ನಾವು ನಿನ್ನೆಯೇ ಕಾಣಬಹುದಿತ್ತು ನೋಡಿದೆಯೋ" ಎಂದು ಚಂದ್ರೂ ಧ್ವನಿ ಎತ್ತಿದ.

"ಹೌದು ಚಂದ್ರೂ. ಇಂದಾದರೂ ಪರವಾಯಿಲ್ಲ. ಇನ್ನು ನಿನಗೆ ಆಹಾರ ಸಿಕ್ಕಿತಪ್ಪ. ಈ ಸುಸಂಧಿಯನ್ನು ಚೆನ್ನಾಗಿ ಉಪಯೋಗ ಮಾಡಿಕೊ."

"ಬಿಡೋದು ಉಂಟೇ ಈ ಅಪರ್ಚೂನಿಟಿನ" ಎಂದು ಚಂದ್ರೂ ಹೇಳಿದ.

"ಚೆಲವರಾಜ್, ನನಗಿಂತ ಈ ಚಂದ್ರೂಗೆ ನಿನ್ನ ಬಗ್ಗೆ ಕುತೂಹಲ ಹೆಚ್ಚಾಗಿತ್ತಪ್ಪ."

"ಅದೇನು ?"

"ನಿನ್ನ ಮುಖಾಂತರ ಆತ ಎಲ್ಲ ಕತೆ ಕೇಳಬೇಕಂತೆ.''

"ನೀನು ಕೇಳೋದಿಲ್ಲವೋ ?"

"ಚಂದ್ರೂಗಿಂತ ನನಗೆ ಹೆಚ್ಚು ಕುತೂಹಲ. ಚಂದ್ರೂಗೆ ನಿನ್ನ ಇತ್ತೀಚಿನ ಒಂದೆರಡು ವರ್ಷದ ಕತೆ ಕೇಳಬೇಕೆಂದಿದ್ದರೆ ನನಗೆ ಕಳೆದ ೭—೮ ವರ್ಷದ ಕತೆ ಕೇಳಬೇಕಾಗಿದೆ. ಚೆಂದೂರಿನಿಂದ ನಾನು ಬೆಳಗಾಂವಿಗೆ ಹೋದನಂತರದಿಂದ ನಿನ್ನ ವರ್ತಮಾನವಿಲ್ಲ. ದಿನಕ್ಕೊಮ್ಮೆ ನಿನ್ನನ್ನು ನೆನೆಯುತ್ತಿದ್ದೆ. ಕಾಗದ ಬರೆಯಬೇಕೆಂದು ಇಚ್ಛಿಸಿದರೆ ಹೇಗೆ ಬರೆಯಲಿ ? ಅಡ್ರೆಸ್ ಗೊತ್ತಿಲ್ಲ. ಏನಾಯ್ತು ಎಂತಾಯ್ತು ಎಂಬುದಾವುದೂ ಗೊತ್ತಿಲ್ಲ.

"ನಿನ್ನ ನೆನೆದಾಗಲೆಲ್ಲ ನನ್ನ ಕಣ್ಣಲ್ಲ ಒದ್ದೆಯಾಗುತ್ತಿತ್ತು ಚೆಲುವರಾಜ್. ದೇವರು ದೊಡ್ಡವನು. ಯಾವುದೋ ದಿಕ್ಕಿಗೆ ಹಾರಿಹೋಗಿದ್ದ ಹಕ್ಕಿಗಳನ್ನು ತಾನೇ ಕೈಯ್ಯಾರ ಹಿಡಿದುಕೊಂಡು ಬಂದು ಒಂದೆಡೆ ಸೇರಿಸಿದ್ದಾನೆ. ಇದೂ ಹಿರಿಯರ ಪುಣ್ಯ ಫಲ" ಎಂದು ನಾನು ಏನೇನೋ ಹೇಳುತ್ತಲೇ ಇದ್ದೆ.

ಕಾಫಿ ಹೋಟಲು ಬಂದಿತು. ಮಾತು ಒಂದು ನಿಮಿಷ ನಿಲ್ಲಿಸಿ ಒಳಕ್ಕೆ ಹೊಕ್ಕೆವು.

ಮಾಣಿ ತಿಂಡಿಯ ನಾಮಾವಳಿಯನ್ನು ಉಚ್ಚರಿಸಿದ. ಸ್ಟ್ರಾಂಗ್ ಕಾಫಿಗಾಗಿ ಆಜ್ಞೆಯಾಯಿತು.

"ಹೌದು ಚಂದ್ರೂ. ಇಂದಾದರೂ ಪರವಾಯಿಲ್ಲ. ಇನ್ನು ನಿನಗೆ ಆಹಾರ ಸಿಕ್ಕಿತಪ್ಪ. ಈ ಸುಸಂಧಿಯನ್ನು ಚೆನ್ನಾಗಿ ಉಪಯೋಗ ಮಾಡಿಕೊ."

"ಬಿಡೋದು ಉಂಟೇ ಈ ಅಪರ್ಚ್ಯೂನಿಟಿನ" ಎಂದು ಚಂದ್ರೂ ಹೇಳಿದ.

"ಚೆಲವರಾಜ್, ನನಗಿಂತ ಈ ಚಂದ್ರೂಗೆ ನಿನ್ನ ಬಗ್ಗೆ ಕುತೂಹಲ ಹೆಚ್ಚಾಗಿತ್ತಪ್ಪ."

"ಅದೇನು ?"

"ನಿನ್ನ ಮುಖಾಂತರ ಆತ ಎಲ್ಲ ಕತೆ ಕೇಳಬೇಕಂತೆ."

"ನೀನು ಕೇಳೋದಿಲ್ಲವೋ ?"

"ಚಂದ್ರೂಗಿಂತ ನನಗೆ ಹೆಚ್ಚು ಕುತೂಹಲ. ಚಂದ್ರೂಗೆ ನಿನ್ನ ಇತ್ತೀಚಿನ ಒಂದೆರಡು ವರ್ಷದ ಕತೆ ಕೇಳಬೇಕೆಂದಿದ್ದರೆ ನನಗೆ ಕಳೆದ ೭—೮ ವರ್ಷದ ಕತೆ ಕೇಳಬೇಕಾಗಿದೆ. ಚೆಂದೂರಿನಿಂದ ನಾನು ಬೆಳಗಾಂವಿಗೆ ಹೋದನಂತರದಿಂದ ನಿನ್ನ ವರ್ತಮಾನವಿಲ್ಲ. ದಿನಕ್ಕೊಮ್ಮೆ ನಿನ್ನನ್ನು ನೆನೆಯುತ್ತಿದ್ದೆ. ಕಾಗದ ಬರೆಯಬೇಕೆಂದು ಇಚ್ಛಿಸಿದರೆ ಹೇಗೆ ಬರೆಯಲಿ ? ಅಡ್ರೆಸ್ ಗೊತ್ತಿಲ್ಲ. ಏನಾಯ್ತು ಎಂತಾಯ್ತು ಎಂಬುದಾವುದೂ ಗೊತ್ತಿಲ್ಲ.

"ನಿನ್ನ ನೆನೆದಾಗಲೆಲ್ಲ ನನ್ನ ಕಣ್ಣೆಲ್ಲ ಒದ್ದೆಯಾಗುತ್ತಿತ್ತು ಚೆಲುವರಾಜ್. ದೇವರು ದೊಡ್ಡವನು. ಯಾವುದೋ ದಿಕ್ಕಿಗೆ ಹಾರಿಹೋಗಿದ್ದ ಹಕ್ಕಿಗಳನ್ನು ತಾನೇ ಕೈಯ್ಯಾರ ಹಿಡಿದುಕೊಂಡು ಬಂದು ಒಂದೆಡೆ ಸೇರಿಸಿದ್ದಾನೆ. ಇದೂ ಹಿರಿಯರ ಪುಣ್ಯ ಫಲ" ಎಂದು ನಾನು ಏನೇನೋ ಹೇಳುತ್ತಲೇ ಇದ್ದೆ.

ಕಾಫಿ ಹೋಟಲು ಬಂದಿತು. ಮಾತು ಒಂದು ನಿಮಿಷ ನಿಲ್ಲಿಸಿ ಒಳಕ್ಕೆ ಹೊಕ್ಕೆವು.

ಮಾಣಿ ತಿಂಡಿಯ ನಾಮಾವಳಿಯನ್ನು ಉಚ್ಚರಿಸಿದ. ಸ್ಟ್ರಾಂಗ್ ಕಾಫಿಗಾಗಿ ಆಜ್ಞೆಯಾಯಿತು.

ಅಲ್ಲೂ ನೂರುಮಾತುಗಳು. ಆದರೆ ತೃಪ್ತಿ ಎಂಬುವ ಮಾತು ಜೀಳ ವಂತಿಲ್ಲ ನೂರುಗಾವುದ ದೂರ ಹಾರಿಹೋಗುತ್ತಿರುವಂತೆ ಭಾಸವಾಗುತ್ತಿತ್ತು.

ಕಾಫಿ ಕುಡಿದಾದಮೇಲೆ. ಚಲುವರಾಜನೊಡನೆ ಮನೆಯತ್ತ ಸಾಗಿದ್ದಾಯಿತು.

"ನಾನು ಬೇಗನೆ ಊಟ ತೀರಿಸಿಕೊಂಡು ಬರುತ್ತೇನೆ" ಎಂದು ಹೇಳಿದ ಚಂದ್ರೂ.

"ನಮ್ಮಲ್ಲೇ ಊಟಮಾಡಿದರೇನು' ಬರಬಾರದೇ ಇಷ್ಟುದಿನಗಳಿಂದ ಹಾರೈಸುತ್ತಿದ್ದವನು—ಇಂದು ಹುಲಿ ಪಂಜರದಲ್ಲಿ ಸಿಕ್ಕಿರುವಾಗ ನೀನು ಆಚೆ ಹೋಗೋದೆ. ಬಾ. ಅಲ್ಲಿಯೇ ಊಟ ಮುಗಿಸಿ ರಾತ್ರಿ ಪಟ್ಟಾಗಿ ಹರಟೆ ಕೊಚ್ಚೋಣ."

"ಮನೆಗೆ ಹೋಗಿ ಹೇಳಿಯಾದರೂ ಬರುತ್ತೇನೆ" ಎಂದು ಹೇಳಿ ಚೆಲುವರಾಜನಿಗೆ "ಬರ್ತೇನೆಸಾರ್" ಎಂದು ವಂದಿಸಿದ ಚಂದ್ರೂ.

ಅದಕ್ಕೆ ಪ್ರತಿಯಾಗಿ ಚೆಲುವರಾಜ್ "ಜೈ ಹಿಂದ್" ಎಂದ ಗಂಭೀರವಾಗಿ.

ನಾವಿಬ್ಬರೂ ಮನೆಯತ್ತ ಸಾಗಿದೆವು

೪

ಚೆಲುವರಾಜನನ್ನು ಕಂಡು ಮಾತನಾಡಬೇಕೆನ್ನುವ ಆತುರದಲ್ಲಿ ಚಂದ್ರೂಗೆ ಊಟ ಮರತೇ ಹೋಗಿರಬೇಕು. ಮನೆಗಾದರೂ ಹೋದನೋ ಇಲ್ಲವೋ ೧೫ ನಿಮಿಷಗಳಲ್ಲಿಯೇ ಹಾಜರಾಗಿಬಿಟ್ಟ.

"ಊಟವಾಯ್ತೆ ಚಂದ್ರೂ" ಎಂದು ನಾನು ಆರಂಭಿಸಿದೆ.

"ಊಟ ಮಾಡುವುದು, ನಿದ್ರೆ ಮಾಡುವುದು ದಿನಾಲು ಇದ್ದದ್ದೆ."

"ಹಾಗಾದರೆ ಮನೆಗೆ ಕೂಡ ಹೋಗಲಿಲ್ಲ ಅನ್ನು?"

"ಮನೆಗೆ ಹೋಗಿ ಬಂದೆ ನೀವಿಷ್ಟು ಬೇಗನೆ ಮುಗಿಸಿದ್ದರೆ."

"ಎಷ್ಟು ಹೊತ್ತು ಚಂದ್ರೂ. ಐದು ನಿಮಿಷದಲ್ಲಿ ಮುಗಿಸ್ತೇವೆ. ನೀನೂ ಏನಾದ್ರೂ ತಿಂಡಿ ಗಿಟ್ಟಸ್ತೀಯೋ"

" ನಿನ್ನ ಹರಟೆ ಸಾಕಪ್ಪಾ ಬೇಗ ಏಳು. ನಮ್ಮ ಕೆಲಸಕ್ಕೆ ಪ್ರಾರಂಭಿಸೋಣ."

ನಾವಿಬ್ಬರೂ ಎದ್ದೆವು. ತಟ್ಟೆಗಳು ಸಿದ್ಧವಾಗಿದ್ದುವು. ಊಟ ಮುಗಿಸಿಕೊಂಡು ಬಂದುದಾಯಿತು. ಚಂದ್ರೂ ಫೌಂಟೆನ್ ಪೆನ್, ಕಾಗದ ಹಿಡಿದುಕೊಂಡು ಸಿದ್ಧನಾಗಿದ್ದ.

" ಚಂದ್ರೂ. ಚೆಲುವರಾಜನಿಗೆ ನಾನೆಲ್ಲ ಹೇಳಿದ್ದೇನೆ. ನಿನ್ನ ಅಭಿಮತವನ್ನ. ಅವನೂ ಒಪ್ಪಿದ್ದಾನೆ " ಎಂದು ನಾನು ಹೇಳುತ್ತಿದ್ದಾಗ ಚೆಲುವರಾಜ ಮುಗುಳ್ನಗೆ ನಕ್ಕ.

" ಸುಮಾರು ತಿಂಗಳು ಗಟ್ಟಲೆ ನಾನು ಯಾರನ್ನಾದರೂ ನಿಮ್ಮಹಾಗೆ ಬಂಧ ಮುಕ್ತರಾದವರನ್ನು ಕಂಡು ಮಾತನಾಡಬೇಕು ತಿಳಿಯಲಾರದ ಸಂಗತಿಗಳನ್ನು ತಿಳಿದುಕೊಳ್ಳಬೇಕು ಎಂದು ಭಾರಿ ಕುತೂಹಲ. ಆದರೆ ಯಾರನ್ನು ಕೇಳಬೇಕು. ಈವರೆಗೆ ಬಂದವರೆಲ್ಲ ಅಪರಿಚಿತರು ಅಂತಹವರೊಂದಿಗೆ ವಿಶೇಷ ಸಲುಗೆಯಿಂದ ಮಾತನಾಡುವುದು ಸಾಧ್ಯವಾಗದ ಮಾತು. ಈಗ ನನ್ನ ಭಾಗ್ಯ ತೆರೆದಿದೆ ಎಂದುಕೊಂಡಿದ್ದೇನೆ. ನೀವು ಅಗತ್ಯವಾಗಿ ಎಲ್ಲ ಕತೆಯನ್ನು ಸವಿಸ್ತಾರವಾಗಿ ತಿಳಿಸಬೇಕು." ಎಂದು ಚಂದ್ರೂ ಪೀಠಿಕೆ ಹಾಕಿ ಸಿಗರೇಟಿಗಾಗಿ ಜೋಬಿಗೆ ಕೈ ಹಾಕಿದ. ಖಾಲಿ ಪ್ಯಾಕು. ಸರಿ, ಕಳವಳಕ್ಕಾರಂಭವಾಯಿತು. ಸ್ವತಃ ತಾನೇ ಹೋಗಿ ನಾಲ್ಕು ಪ್ಯಾಕೆಟ್ಟು ವಿಲ್ಸ್ ಸಿಗಾರೆಟ್ಸ್ ತಂದು ಮತ್ತೆ ಆರಂಭಿಸಿದ " ಹೂಂ ಪ್ರಾರಂಭಿಸಿ " ಎಂದು.

" ನನ್ನದೊಂದು ಸೂಚನೆ ಚೆಲುವರಾಜ್. ನಾನು ಚೆಂದೂರನ್ನು ಅಗಲಿ ಬೆಂಗಳೂರಿಗೆ ಬಂದೆನಲ್ಲ ಅಲ್ಲಿಂದ ನೀನು " ರಿಕ್ರೂಟ್ " ಆಗುವವರೆಗಿನ ಕತೆಯನ್ನು ಸ್ವಲ್ಪದರಲ್ಲಿ ಹೇಳಿದರೆ ನಿನ್ನ ಮುಂದಿನ ಕತೆಗೆ ಕೊಂಚ ಪುಷ್ಟಿ ಸಿಕ್ಕಂತಾಗುವುದಿಲ್ಲವೇ ? ಅದೂ ಅಲ್ಲದೆ ನನಗೆ ಆ ವಿಭಾಗದ ಸಂಗತಿ ವಿಶೇಷ ಆಸಕ್ತಿಯುಂಟುಮಾಡುತ್ತಿದೆ. ಮೊದಲು ನೀನು ಅದನ್ನು ದೀರ್ಘವಾಗಿಯಲ್ಲದಿದ್ದರೂ ತೀರ ಸೂಕ್ಷ್ಮವಾಗಿಯಾದರೂ ಪರವಾಗಿಲ್ಲ ಹೇಳಬೇಕು." ಎಂದು ನನ್ನ ಅಂತರಂಗವನ್ನು ಬಹಿರಂಗ ಪಡಿಸಿದೆ.

ಚಂದ್ರೂಗೆ ಕೂಡ ಈ ನನ್ನ ಸೂಚನೆ ಹಿಡಿಸಿತೆಂದು ತೋರುತ್ತದೆ. ಆವನೂ ತತ್‌ಕ್ಷಣ "ಹೌದು. ಎರಡು ಮುಖಗಳೂ ಸರಿಯಾಗಿ ತೋರಿದರೆ ಆದರ ರೀತಿಯೇ ಬೇರೆ. ಸರಿ ಹಾಗೇ ಆಗಲಿ. ಮೊದಲು ಕಥೆಯ ಮೊದಲು ಭಾಗ, ನಂತರ ಎರಡನೆಯ ಘಟ್ಟ." ಎಂದ.

"ಇನ್ನೊಂದು ದೊಡ್ಡ ತೊಂದರೆ ನನಗೆ ಭಾಷೆ ಸರಿಯಾಗಿ ಬರದು. ಎಲ್ಲ ಕೆಟ್ಟು ಹಾಳಾಗಿ ಹೋಗಿದೆ ಅದಕ್ಕಾಗಿ ಕ್ಷಮಿಸಬೇಕು."

"ನಮಗೆ ನಿನ್ನ ಸಾಹಿತ್ಯ ಜ್ಞಾನ, ವಾಗ್ಮಿಯ ನೈಪುಣ್ಯತೆ ಬೇಕಾ ಗಿಲ್ಲ. ಅಮರವಾದ ಕೀರ್ತಿಯನ್ನುಗುಳಿಸಿ ಜಗತ್ತಿನ ಕಣ್ಣಲ್ಲೇ ಕುಕ್ಕುತ್ತಿರುವ ರಾಷ್ಟ್ರೀಯ ಸೈನ್ಯದ ಬಗ್ಗೆ ನಿನಗೆ ತಿಳಿದಿರುವ ವಿಶೇಷ ಸಂಗತಿ." ಎಂದು ನಾನು ಸ್ಫೂರ್ತಿ ತುಂಬಿದೆ

"ವಿಶೇಷ ಸಂಗತಿ ಏನು—ಎಲ್ಲವೂ ವಿಶೇಷವೇ!" ಎಂದು ಚೆಲುವರಾಜ ಸಿಗರೇಟ್ ಹಚ್ಚಿ ಆರಂಭಿಸಲು ಅಣಿಯಾದ.

"ನಿಮ್ಮ ಪರಮ ಮಿತ್ರರೂ ನಾನೂ ಒಂದೇ ಊರಿನವರು. ಒಂದೇ ಕೇರಿಯವರು ನಮ್ಮ ಮನೆಗೂ ಇವರ ಮನೆಗೂ ಸುಮಾರು ನಾಲ್ಕಡಿ ದಪ್ಪನೆಯ ಗೋಡೆ ಮಾತ್ರ ಅಡ್ಡಲಾಗಿದೆ ಅಷ್ಟೆ

"ಚೆಂದೂರು ನಮ್ಮಿಬ್ಬರ ಹುಟ್ಟಿದೂರು. ಅದೊಂದು ಕಿರುಹಳ್ಳಿ. ಧಾರವಾಡ ಜಿಲ್ಲೆಗೆ ಸೇರಿದೆ ಇಲ್ಲಿನ ಜನ ಸಂಖ್ಯೆ ಸುಮಾರು ೬೦೦. ಕೇವಲ ಗುಡಿಸಲಿನ ಮನೆಗಳು

"ನಮ್ಮಿಬ್ಬರ ಬಾಲ್ಯವೆಲ್ಲ ಅಲ್ಲಿಯೇ ಕಳೆಯಿತು. ಶಿಕ್ಷಣ ಕೂಡ ಅಲ್ಲಿಯೇ ಈ ಭಾಗ ನಿಮಗೆ ಅಷ್ಟು ಹಿತಕರವಲ್ಲವೆಂದು ತೋರುತ್ತದೆ" ಎಂದು ಚೆಲುವರಾಜ ನಡುವೆ ನಿಲ್ಲಿಸಲು ಯತ್ನಿಸಿದ. ಆದರೆ ಚಂದ್ರೂ "ನೀವು ಪರೀಕ್ಷೆಗೆ ಕುಳಿತಿಲ್ಲ ಯಾರಿಂದಲೂ ಸರ್ಟಿಫಿಕೇಟ್ ಪಡೆಯಬೇಕಿಲ್ಲ; ಹೇಳಿ ಪರವಾಯಿಲ್ಲ."

ಎಂದು ಚೆಲುವರಾಜನಿಗೆ ಉತ್ಸಾಹವಿತ್ತ.

"ನಿಮಗೆ ಬೇಸರವಾಗಬಾರದಷ್ಟೇ."

"ಹೂಂ ಸಾಗಲಿ ನಿನ್ನ ಇತಿಹಾಸ"

"ಬಾಲ್ಯದಿಂದಲೂ ಒಂದಿಲ್ಲೊಂದು ಕಷ್ಟಪರಂಪರೆ ನನ್ನ ಬೆನ್ನ ಗುಂಟೆ ಸಾಗಿಬರುತ್ತಲೇ ಇತ್ತು. ನನ್ನ ತಾಯಿ ತೀರಿಕೊಂಡಾಗ ನಾನಿನ್ನೂ ೫ ವರ್ಷದ ಹುಡುಗ. ಮನೆಯಲ್ಲಿ ನನ್ನ ಹಾಗೇ ಪರದೇಶಿಗಳಾದ ಇಬ್ಬರು ತಂಗಿಯರು. ನಮ್ಮ ತಂದೆ ನಮ್ಮೆಲ್ಲರನ್ನು ಅಕ್ಕರೆಯಿಂದ ಸಾಕಿದರು. ಬಡತನ. ಊಟ-ಬಟ್ಟೆಯು ಯಾವುದಕ್ಕು ನಮಗೆ ಸರ್ವದಾ ಚಿಂತೆ ತಪ್ಪಲೇ ಇಲ್ಲ.

"ಮಾತಿಗೊಮ್ಮೆ ಚೆಲುವ ನೀನು ದೊಡ್ಡವನಾದರೆ ನನಗಿಷ್ಟು ಅಂಬಲಿ ಸಿಕ್ಕುವಹಾಗೆ ಮಾಡಬಹುದಪ್ಪಾ' ಎಂದು ನನ್ನ ತಂದೆಯವರೆನ್ನುತ್ತಿದ್ದರು. ಅವರಿಗೆ ಅದೊಂದೇ ಹಿರಿಯಾಸೆ.

"ನನಗೂ ವಯಸ್ಸಾಗುತ್ತ ಬಂತು. ಶಾಲಾ ಶಿಕ್ಷಣದಲ್ಲಿ ನನ್ನ ಪ್ರಗತಿ ಏನೂ ಆಗಲಿಲ್ಲ. ಪುಸ್ತಕ ಓದುವುದು ನನಗೆ ತೀರ ಬೇಸರದ ಕೆಲಸ. ತಲೆಗೆ ಸುಮ್ಮನೆ ವಿಷಯಗಳನ್ನು ತುಂಬುವದರಿಂದ ಏನೂ ಪ್ರಯೋಜನವಿಲ್ಲವೆಂದು ನಿರ್ಧರಿಸಿ ಬಿಟ್ಟಿದ್ದೆ. ಆದರೆ ಆಂಗ್ಲ ಭಾಷೆಯಲ್ಲಿ ರುಜುಮಾಡುವುದೊಂದು ಬಂದರೆ ಸಾಕು ನಾನು ಸಾಮ್ರಾಜ್ಯವನ್ನು ಸ್ಥಾಪಿಸಬಲ್ಲೆನೆಂಬ ಒಂದು ಹುಚ್ಚು ಹೆಮ್ಮೆ ನನಗೆ.

"ಪ್ರಾಥಮಿಕ ಶಾಲಾ ಶಿಕ್ಷಣ ಮುಗಿಸಿ ಮಾಧ್ಯಮಿಕ ಶಿಕ್ಷಣಕ್ಕಾಗಿ ಹಾವೇರಿ ಹೈಸ್ಕೂಲು ಸೇರಿದೆ. ನನ್ನ ಗ್ರಹಚಾರಕ್ಕೆ ಸರಿಯಾಗಿ ನನಗೊಬ್ಬ ಗುರುಗಳು ಸಿಕ್ಕಿದರು ಅಲ್ಲಿ. ಇಂಗ್ಲೀಷ್ ಕಲಿಯಬೇಕೆಂದು ತೆರಳಿದ ನನಗೆ ಅರ್ಥಮೆಟಿಕ್ ಕ್ರೂರ ವೈರಿಯಾಗಿ ಬಿಟ್ಟಿತು. ಆ ಅಧ್ಯಾಪಕರ ಛಡಿ ಏಟಿನ ಶಿಕ್ಷೆ. ಅಂತೂ ಆಗ ತಿಂದ ಏಟು ಒಂದು ರೀತಿಯಿಂದ ನನ್ನ ಮುಂದಿನ ಜೀವನದಲ್ಲಿ ಸಹಕಾರಿಯೇ ಆಯಿತು.

"ದೀಪಾವಳಿ, ಮೇ ರಜಗಳಲ್ಲಿ ನಮ್ಮೂರಿಗೆ ಹೋದಾಗ ಇಡೀ ಹಗಲು ನದಿಯ ನೀರಿನಲ್ಲಿ ಈಜುವುದರಲ್ಲಿ ಹೋಗುತ್ತಿತ್ತು. ಸಿಕ್ಕ ಸಿಕ್ಕ ಕುದುರೆ ಏರಿ ಸವಾರಿ ಮಾಡುವುದು; ಇನ್ನು ಇದೇ ರೀತಿಯ ಮಂಗ ಚೇಷ್ಟೆಗಳು

"ಒಂದು ಬಾರಿ ಯಾರೋ ಬಂದು ನಮ್ಮ ತಂದೆಯ ಹತ್ತಿರ ನನ್ನಮೇಲೆ ಚಾಡಿ ಹೇಳಿ ಬಿಟ್ಟರು. ನಮ್ಮ ತಂದೆಯು ರೇಗಿದರು. . ನೀನು

ಇವತ್ತೇ ಮನೆ ಬಿಟ್ಟು ತೊಲಗು. ಮನೆಯಲ್ಲಿ ಕಾಲಿಟ್ಟರೆ ಕಾಲು ಮುರಿದು ಕೈಯಲ್ಲಿ ಕೊಡುತ್ತೇನೆಂದು ಗದ್ದರಿಸಿದರು

" ನಮ್ಮ ತಂದೆಯ ಸ್ವಭಾವ ಕೋಪದ್ದಲ್ಲ. ಆದರೆ ಅಕಸ್ಮಾತ್ತಾಗಿ ಕೋಪ ಬಂದರೆ ನಮ್ಮ ಪಾಡು ನಾಯಿಪಾಡೆಂಬುದನ್ನು ನಾವೆಲ್ಲ ಸಂಪೂರ್ಣ ಅರಿತಿದ್ದೆವು ಒಂದು ಬಾರಿ ಕಾರಹುಣ್ಣಿವೆಯ ಕರ್ಜಗಿ ಜಾತ್ರೆಗೆ ಹೋಗಿ ಕೈ ಬೆರಳ ಚಿಕ್ಕ ಉಂಗುರವನ್ನು ನಾನು ಕಳೆದುಕೊಂಡು ಬಂದ ದಿನ ನಮ್ಮ ತಂದೆ ಹೊಡೆದ ಆ ಹೊಡೆತವನ್ನು ನಾನಿನ್ನೂ ನೆನೆಯುತ್ತೇನೆ ಅಂದು ನನ್ನ ಪ್ರಾಣವೇ ಹೋಗಬೇಕಾಗಿತ್ತು. ಅಂತೆಯೇ ನಮ್ಮ ತಂದೆ ಅಷ್ಟು ರೇಗಿದ್ದನ್ನು ಕಂಡು ನಾನು ತೀರ ಗಾಬರಿಯಾದೆ.

" ನಿಮ್ಮ ಈ ಮಿತ್ರರೂ ನಾನೂ ಊರ ಹೊರಗಿನ ಹನುಮಂತ ರಾಯನ ದೇವಸ್ಥಾನದಲ್ಲಿ ಸೇರಿದೆವು ಆಗ ರಾತ್ರಿ ೮ ಘಂಟೆಯಾಗಿತ್ತು.

" ಹೌದು ಜೀವರಾಜ್ ಅಂದಿನ ದಿನವನ್ನು ನೆನೆದುಕೊಂಡರೆ ಮೈ ಜುಮ್ಮೆನ್ನುತ್ತದೆ " ಎಂದು ನಾನು ನಡುವೆ ಬಾಯಿ ಹಾಕಿದೆ.

" ಇಬ್ಬರೂ ಕೂಡಿ ಅಂದಿನ ರಾತ್ರಿ ಸಹಸ್ರಾರು ಯೋಚನೆ ಮಾಡಿದೆವು. ಹನುಮಂತರಾಯ ಮಾತ್ರ ಆ ಮಿಣುಕು ದೀಪದಲ್ಲಿ ಸಾಕ್ಷಿಮುಕ್ಕೆ ಮುಖಮಾಡಿಕೊಂಡು ನಮ್ಮ ಆ ನಿರ್ಧಾರವನ್ನು ಕೇಳುತ್ತಿರುವಂತೆ ಭಾಸವಾಗುತ್ತಿತ್ತು

" ದೂರದಲ್ಲಿ ಯಾರದೋ ಕಾಲಿನ ಸದ್ದು. ನಾವಿಬ್ಬರೂ ಗಾಬರಿಯಾದೆವು. ಯಾರು ಬರುತ್ತಿದ್ದಾರೋ ಎಂದು ಎದೆ ಢಡ ಢಡನೆ ಹೊಡೆದುಕೊಳ್ಳುತ್ತಿತ್ತು. ನಮ್ಮ ತಂದೆಯಲ್ಲಿ ಹುಡಿಕಿಕೊಂಡು ಬರುತ್ತಾರೋ ಎಂಬ ಅಂಜಿಕೆ ಬೇರೆ. ಅದರಲ್ಲೂ ಸಾಯಂಕಾಲ ಹೊಳೆಯ ಕಡೆ ತಿರುಗಾಡಿಕೊಂಡು ಬರಲು ಹೊರಟಿದ್ದೆವೆಂಬುದು ನಮ್ಮ ಮನೆಯವರಿಗೆಲ್ಲ ತಿಳಿದಿತ್ತು.

" ನಾನು ತೀರ ಅಧೀರನಾಗಿ ದೇವಾಲಯದ ಗರ್ಭಗುಡಿಯಲ್ಲಿ ಹೋಗಿ ನನ್ನ ಈ ಆಪ್ತ ಮಿತ್ರನನ್ನು ಹತ್ತಿರ ಕರೆದೆ ಆತನೂ ಬಂದ.

"ಇವತ್ತು ನನಗಾದ ಹಣೆಬರೆಹ ನೋಡಿದೆಯೋ ನನ್ನ ತಂದೆ ಯಾರ ಮಾತನ್ನೋ ಕೇಳಿ ನನ್ನ ಕೈಕಾಲು ಮುರಿದು ಹಾಕಲು ಸಿದ್ಧರಾಗಿದ್ದಾರೆ ಇನ್ನು ನಾನು ಇಲ್ಲಿರುವುದು ಅಸಾಧ್ಯ. ಇದೋ ಇಂದೇ ರಾತ್ರಿ ಬಾರಪ ಹಾದಿಗೆ ಹೋಗಲು ನಿರ್ಧರಿಸಿದ್ದೇನೆ ಎಂದು ಹೇಳುತ್ತಿದ್ದಾಗಲೇ ಶೀನು ಅತ್ತುಬಿಟ್ಟ. "ಚೆಲುವ, ನೀನೆಂದು ಇನ್ನು ನನ್ನನ್ನು ಕಾಣೋದು" ಎಂದು ಅಂಗಲಾಚಿದ.

"ನನಗೆ ಏನೂ ಹೇಳಲು ಬಾಯಿ ಬಾರದಂತಾಗಿತ್ತು. ಆ ದುರ್ದಮ್ಯ ಜೀವನದಿಂದ ಒಮ್ಮೆ ಪಾರಾಗಬೇಕೆನ್ನಿಸಿತ್ತು ತಂದೆಯವರು ಹೊಡೆಯು ತ್ತಾರೆಂಬ ಭೀತಿಗಿಂತ ಅವರಿಗೆ ನಾನು ದಿನೇ ದಿನೇ ಭಾರವಾಗುತ್ತಿದ್ದೇನಲ್ಲಾ ಎಂಬೊಂದು ಕಲ್ಪನೆ ಆಗಲೇ ನುಳಿದಿತ್ತು.

"ಹನುಮಪ್ಪನ ಪಾದ ಮುಟ್ಟಿ, ದೀರ್ಘದಂಡ ನಮಸ್ಕಾರ ಮಾಡಿ- 'ಸ್ವಾಮಿ ನೀನೇ ನನ್ನ ಕಾಪಾಡಬೇಕು. ಪರದೇಶಿಮಗ, ನೀನೇ ನನ್ನ ತಂದೆ. ಎಲ್ಲಾದರೂ ನಾನು ಹೋಗ್ತಿರಲಿ ನೀನು ನನ್ನ ಬೆನ್ನ ಹಿಂದೆ ಇರಬೇಕು ಇದೋ ಈ ದೀಪ ಹಿಡಿದು ಆಣೆ ಮಾಡ್ತೀನಿ. ಇನ್ನು ಮಾತ್ರ ನಾನು ಇಲ್ಲಿಗೆ ತಿರುಗಿ ಬರೋದಿಲ್ಲ ನಿನ್ನ ವರಪ್ರಸಾದ ಪೊಂದಿದ್ದರೆ ಸಾಕು' ಎಂದು ಭಕ್ತಿಯಿಂದ ಬೇಡಿಕೊಂಡು ಗಳೆಯನಿಗೆ ನಮಸ್ಕಾರ ಮಾಡಿ ಆದಿನ ಹನುಮಂತರಾಯನ ದೇವಾಲಯದಿಂದ ಹೊರಟೆ.

"ನನ್ನ ಕಣ್ಣಲ್ಲೂ ನೀರು ಹನಿ ಹನಿಯಾಗಿ ಹೊಮ್ಮುತ್ತಿತ್ತು. ಶೀನೂ ಕೂಡ ಅಳುತ್ತಿರುವಂತೆ ತೋರಿಬಂತು. ಆ ಮಿಣುಕು ದೀಪದಲ್ಲಿ ನಮ್ಮಿಬ್ಬರ ಮುಖಗಳು ಹೊಳೆದುವು ದೇವರ ಮಾತಿನ ನಮ್ಮ ಈ ಹೃದಯ ಭೇದಕ ದೃಶ್ಯವನ್ನು ನೋಡಲಾರದೆ ಬೇರೆ ದಿಕ್ಕಿಗೆ ಮುಖ ತಿರುಗಿಸಿದಂತೆ ತೋರಿಬಂತು

"ಕಾಲ ಮುಂದಕ್ಕೆ ಮುಂದಕ್ಕೆ ಹೋಗುತ್ತಿತ್ತು ಇನ್ನು ಹೆಚ್ಚು ಕಾಲ ಇಲ್ಲಿ ನಿಲ್ಲುವುದು ಬೇಡ ಎಂದವನೇ ಶೀನುವನ್ನು ತಬ್ಬಿಕೊಂಡು ನಾನು ಬದುಕಿದ್ದರೆ ನಿನ್ನ ಮತ್ತೊಮ್ಮೆ ಕಾಣುತ್ತೇನೆ." ಎಂದು ಹೆಜ್ಜೆ ಮುಂದಕ್ಕೆ ಇಟ್ಟೆ.

ನಾನು ನಿನಗೆ ಉಪದೇಶ ಕೊಡುವಷ್ಟು ಬುದ್ಧಿವಂತನಲ್ಲ. ಇದು ಕೊಂಚ ದುಡುಕಿನ ಕಾರ್ಯ ಯೋಚಿಸು ಮತ್ತೇನನ್ನು ನಾನು ಹೇಳಲಾರೆ. ನಿನ್ನ ತಂದೆಗೂ ವಯಸ್ಸಾಗುತ್ತ ಬಂದಿದೆ ಈವರೆಗೆ ಕಷ್ಟವೋ ನಿಷ್ಠುರವೋ ನಿನ್ನನ್ನು ಅವರು ಬೆಳೆಯಿಸಿ ದೊಡ್ಡವನನ್ನಾಗಿಸಿದ್ದಾರೆ. ಎಂದು ಏನೇನೋ ಉಪದೇಶದ ಮಾತುಗಳನ್ನು ಹೇಳಿದರೂ ಆ ಅಪಕ್ವ ವಯಸ್ಸಿನ ಹುಚ್ಚು ಹೆಮ್ಮೆ ನನ್ನನ್ನು ಬಾಧಿಸಿ ಎತ್ತೋ ಕರೆದೊಯ್ಯಲು ಕಾದಿತ್ತು.

"ಎಷ್ಟು ಹೇಳಿದರೂ ಕೇಳದೆ ನಾನು ಶೀನುಗೆ ಬರುತ್ತೇನೆ ಎಂದು ಮತ್ತೊಮ್ಮೆ ಹೇಳಿದವನೇ ಆ ಕತ್ತಲ ರಾತ್ರಿಯಲ್ಲಿ ತೀವ್ರವಾಗಿ ನಡೆದು ಬಿಟ್ಟೆ.

"ಶೀನು ದೇವಾಲಯದಲ್ಲೇ ನಿಂತಿರುವಂತೆ ನನಗೆ ಕೊಂಚದೂರಿನಿಂದ ಕಾಣುತ್ತಿತ್ತು. ಆ ಮಿಣುಕು ದೀಪ ಕಾಣುವವರೆಗೆ ಹಿಂದೆ ಹಿಂದೆ ತಿರುಗಿ ನೋಡುತ್ತ ಮುಂದೆ ಮುಂದೆ ಸಾಗುತ್ತಿದೆ ೧೫ ನಿಮಿಷಗಳಲ್ಲಿ ನನ್ನ ಕಾಲುಗಳು ನನ್ನನ್ನು ಚೆಂದೂರಿನಿಂದ ಎಷ್ಟೋದೂರ ತಂದಿದ್ದವು.

ಕೆರೆಯ ಏರಿಗೆ ಬಂದು ಪುನಃ ಊರಿನ ಕಡೆಗೊಮ್ಮೆ ನೋಡಿದೆ. ಯಾವುದೋ ಮೂಲೆಯಲ್ಲಿ ಗೂಗೆಯೊಂದು ಕೂಗುತ್ತಿತ್ತು ನಿಶ್ಶಬ್ದ. ಘೋರ ವಾತಾವರಣ.

ದಾರಿಯುದ್ದಕ್ಕೂ ಬರಿಕತ್ತಲೆ. ನೀರವತೆ. ಹುಚ್ಚು ಧೈರ್ಯ ತಂದು ಕೊಂಡು ಬಂಡಿ ದಾರಿಗುಂಟ ನಾಗಿದೆ."

೫

"ಆಕಾಶದಲ್ಲಿ ನಕ್ಷತ್ರಗಳ ಗಡಣವೇ ನೆರೆದಿತ್ತು. ಇಷ್ಟು ಜನ ನಕ್ಷತ್ರ ದೇವತೆಗಳು ನನ್ನನ್ನು ತೆರೆದ ಕಣ್ಣಿನಿಂದ ನೋಡುತ್ತಿರುವಾಗ ಯಾತರ ಭೀತಿ ಯೆಂದು ಸಾಗುತ್ತಲೇ ಇದ್ದೆ. ಗಾಳಿಯೂ ಅಷ್ಟಾಗಿ ಬೀಸುತ್ತಿರಲಿಲ್ಲ. ಸುತ್ತಲಿನ ಗಿಡಗಂಟೆಗಳಲ್ಲಿ "ಜರ್ ಜಿಟ್" ಎಂಬ ಶಬ್ದವಾದಾಗ ಮಾತ್ರ ಕೊಂಚ ದಿಗಿಲು ಬಿದ್ದು ನೋಡುತ್ತ ಭರದಿಂದ ನಡೆಗೆ ಸಾಗಿಸುತ್ತಲೇ ಇದ್ದೆ

“ ಒಂದು ಮುಂದಿನ ಯೋಚನೆಗಳಿಲ್ಲ. ಎಲ್ಲಿಗೆ ಹೋಗಬೇಕು? ಏನು ಮಾಡಬೇಕು ಎಂಬ ನಿಶ್ಚಯವಿಲ್ಲ ಹಾಗೂ ಹೀಗೂ ಎಡವುತ್ತ ಮುಗ್ಗರಿಸುತ್ತ ದಾರಿ ಸವೆಯಿಸುತ್ತಿದ್ದೆ ”

“ ಯಾವ ದಿಕ್ಕಿಗೆ ಹೊರಟದ್ದು ಗೊತ್ತಾಗಲಿಲ್ಲವೇ ? ಎಂದು ಚಂದ್ರೂ ಮಧ್ಯೇ ಕೇಳಿದ.

“ ಪಶ್ಚಿಮ ದಿಕ್ಕಿನಲ್ಲಿ ಸಾಗುತ್ತಿದ್ದೆ ಬಂಡಿದಾರಿ ತೆಗ್ಗು ದಿನ್ನೆಗಳು ಮುಳ್ಳುಗಳು, ಕಲ್ಲುಗಳು ನನ್ನ ಮೈ ಮೇಲೆ ಪ್ರಜ್ಞೆಯೇ ಇರಲಿಲ್ಲ. ಏನಿತ್ತೋ ಏನೋ ಮುಂದೆ ನಡೆಯುವುದೊಂದು ನನ್ನ ಮನದ ಹಂಬಲ ವಾಗಿತ್ತು

“ ಏರಿಯೊಂದನ್ನು ತೇಗುತ್ತಲೇ ಏರಿದೆ ಮತ್ತೆ ನಿಮಿಷವೊಂದು ನಿಂತು ಸುತ್ತೆಲ್ಲ ನಿಟ್ಟಿಸಿವೆ ಅದೇ ನಿರಭ್ರವಾದ ಆಕಾಶ ನಿರ್ಜನವಾದ ವಿಶಾಲಪ್ರದೇಶ ತಲೆಯಲ್ಲಿ ನೂರು ಯೋಚನೆಗಳು.

“ ದಾರಿಮಾತ್ರ ಹೇಗೋ ಸಾಗುತ್ತಿತ್ತು. ತಂಗಾಳಿಯ ಆರ್ಭಟ ಕೊಂಚ ಹೆಚ್ಚಾದಂತಾಯಿತು ಮೈಗೆ ಸಾಕಷ್ಟು ಬೆಚ್ಚನೆಯ ಬಟ್ಟೆ ಇಲ್ಲದುದರಿಂದ ನನಗೆ ವಿಪರೀತ ಚಳಿಯೆನಿಸಿತು ಮೈಮುದುಡಿಕೊಂಡು ನಡೆಯುತ್ತಿದ್ದಾಗ ಹತ್ತಿರದಲ್ಲೇ ದೀಪದ ಕಿಡಿಯೊಂದು ಕಾಣಿಸಿತು.

“ ಆ ದೀಪದ ಆಶೆಯನ್ನು ಹಿಡಿದು ನಡೆದು ಬಂದೆ ಅದೊಂದು ಹಾಳು ದೇವಸ್ಥಾನ. ಹಳ್ಳಿಗರು ತಮ್ಮೆಲ್ಲ ಬಂಡಿಗಳನ್ನು ದೇವಸ್ಥಾನದ ಅಂಗಳದಲ್ಲಿ ಬಿಟ್ಟು, ಎತ್ತುಗಳಿಗೆ ಮೇವು ಹಾಕಿ ಅವರೆಲ್ಲ ಗಾಢವಾದ ನಿದ್ರೆಯಲ್ಲಿ ಲೀನ ರಾಗಿದ್ದರು. ಎಲ್ಲರ ಮೈ ಮೇಲೆ ಕರಿಕಂಬಳಿಗಳು ಹಾಯಾಗಿ ಮಲಗಿದ್ದವು. ಬೆಳಗಿನ ಜಾವ ಎಲ್ಲರಿಗೂ ಭಾರಿ ಜೋಂಪು ನಾನೂ ಹೋಗಿ ಒಂದು ಮೂಲೆಯಲ್ಲಿ ಮುದುಡಿಕೊಂಡು ಮಲಗಿಬಿಟ್ಟೆ

“ ವಿಪರೀತ ಆಯಾಸವಾಗಿ ಹೋಗಿತ್ತು ಕೈಕಾಲುಗಳಿಗೆಲ್ಲ ನೋವು ಬಂದಿತ್ತು. ಕಾಲಿಗೆ ಎಷ್ಟೋ ಮುಳ್ಳುಗಳು ಮುರಿದುಕೊಂಡಿದ್ದವು. ಆದರೆ ಅದೊಂದು ಹುಮ್ಮಸ್ಸು ನನ್ನನ್ನು ಚೇತರಿಸುತ್ತಲೇ ಇತ್ತು.

“ ನಾನು ಮಲಗಿದ ಅರ್ಧಗಂಟೆಯಲ್ಲಿಯೇ ಕಂಬಳಿ ಹೊದ್ದ ಹಳ್ಳಿಗ ರೆಲ್ಲರೂ ಎಚ್ಚರಗೊಂಡರು ಬೆಳ್ಳಿಯ ಚಿಕ್ಕೆ ಮೂಡಿತು. ಏಳಿರೋ

ಎಂದು ಯಾರೋ ಒಬ್ಬರು ಕೂಗಿದರು. ಸರಿ, ಇಡೀ ಸಮೂಹವೇ ಎಚ್ಚರಗೊಂಡಿತು.

"ಅದು ಯಾವ ಊರ ದೇವಸ್ಥಾನ ?" ಎಂದು ಚಂದ್ರೂ ಪ್ರಶ್ನಿಸಿದ.

"ಚಿಕ್ಕಳ್ಳಿ ಎಂಬುದೊಂದು ಹಳ್ಳಿ. ಆ ರೈತರೆಲ್ಲ ಸಿರ್ಸಿಗೆ ಹೋಗತಕ್ಕವರಿದ್ದರು. ಯಾವ ಯಾವವೋ ಸಾಮಾನುಗಳನ್ನು ತುಂಬಿಕೊಂಡಿದ್ದರು.

"ನಾನೂ ನಿಮ್ಮೊಡನೆ ಬರಬಹುದೇ ಎಂದು ಕೇಳಿದೆ ಒಬ್ಬ ಮುದುಕನನ್ನು. ಆತ ಹೇಳಿದ 'ತಮ್ಮ, ಎಲ್ಲಿಗೆ ಹೋಗಬೇಕು ನೀನು ? ಹಾನಗಲ್ಲಿಗೆ ಬೇಕಾದರೆ ಹೋಗುತ್ತಿದ್ದರೆ ಹೋಗು. ಹಾವೇರಿಗೆ ಇಳಿದು ಬಿಡುತ್ತಿದ್ದರೆ ಇಳಿ ಎಂದ. ನಾನು ಏನೊಂದನ್ನೂ ನಿರ್ಧರವಾಗಿ ಹೇಳದೆ ಬಂಡಿ ಏರಿದೆ.

"ಸುಮಾರು ೨೫ ಬಂಡಿಗಳು ಒಂದೇ ಸಾಲಾಗಿ ಸಾಗುತ್ತಿದ್ದುವು. ಎತ್ತಿನ ಕೊರಳಲ್ಲಿನ ಗಂಟೆಯ ಮಧುರನಿನಾದ ದೇವಾಲಯದ ಗಂಟೆಯ ಸದ್ದಿನಂತೆ ಪವಿತ್ರಭಾವನೆಯನ್ನುಂಟುಮಾಡುತ್ತಿತ್ತು. ಬಂಡಿ ಹೊಡಿಯುವವರೆಲ್ಲ ಬೀಡಿ ತೆಗೆದು ಹಚ್ಚಿದರು. ನನಗೂ ಒಂದು ಬೀಡಿ ಕೊಟ್ಟರು.

"ಏನೇನೋ ಕತೆಗಳು, ಹಾಡುಗಳು. ನಮ್ಮ ಎದುರಿನ ಬಂಡಿಯವನೊಬ್ಬ ಹೇಳುತ್ತಿದ್ದ—ರಾಗದಿಂದ ತನ್ನನ್ನೇ ತಾನು ಮರೆತು.

'ಇನ್ನೇಸು ದಿನಕ ನನಗೆಣತಿ ಬರತಿ
ಸುಕದಂಬ್ರುತವ ತುಂಬಿ ತರತಿ

ತೊಂಡಿ ಹಣ್ಣಿನಾ ತುಟಿಯುವಳೀ
ಮಿಂಡರ ಮೆಟ್ಟಿಸಿಂದವಳೀ ?'

"ನನಗೆ ನಗೆ ಬರುತ್ತಿತ್ತು. ಮಿಂಡರಮೆಟ್ಟನಿಂತ ಗೆಣತಿಯನ್ನು ಕರೆಯುವ ಈ ಹಾಡಿನ ರಹಸ್ಯವೇನಿರಬೇಕು ಎಂದು ನಾನು ಎಷ್ಟೆಷ್ಟೋ ಯೋಚಿಸಿದೆ. ಯಾವದೂ ಬಗೆ ಹರಿಯಲಿಲ್ಲ.

"ಒಂದೆರಡುಗಂಟೆ ಕಳದಿರಬೇಕು. ಬೆಳ್ಳಗೆ ಬೆಳಗು ಹರಿಯಿತು. ಅಗಡಿಯ ಊರ ಮುಂದಿನ ತೋಟದ ಹತ್ತಿರ ನಾನು ಇಳಿದೆ. ಪಕ್ಕದ ಭಾವಿಯಲ್ಲಿ ಸ್ನಾನಮಾಡಿಕೊಂಡು ರಸ್ತೆಯಲ್ಲಿ ಮತ್ತೆ ಸಾಗಿದೆ.

"ಸಾಯಂಕಾಲದ ಹೊತ್ತಿಗೆ ನನ್ನ ಪಯಣವೆಲ್ಲ ಮುಗಿದಿತ್ತು. ಧರ್ಮ ಶಾಲೆಯ ಕಲ್ಲಮೇಲೆ ಮಲಗಿದ್ದುಕೊಂಡು ಮರುದಿನ ಬೆಳಗಿನ ರೈಲಿನಲ್ಲಿ ಪೂನಾಕ್ಕೆಂದು ಹೊರಟದ್ದಾಯಿತು.

"ದಾರಿಯಲ್ಲೆಷ್ಟೆಷ್ಟೋ ಗಂಡಾಂತರಗಳನ್ನೆದುರಿಸಿದರೂ ನನ್ನ ಪಯಣ ಪೂನಾವರೆಗೆ ಸಾಗುವುದು ಅಸಾಧ್ಯವೆಂದು ತೋರಿತು. ಬೆಳಗಾಮಿಯಲ್ಲೇ ಟಿಕೆಟ್ ಕಲೆಕ್ಟರ್ ಇಳಿಸಿಯೇ ಬಿಟ್ಟ. ಸರಿ ಊರಲ್ಲಿ ಹೊಕ್ಕು ಸಿಕ್ಕ ಸಿಕ್ಕ ಬೀದಿಯಲ್ಲಿ ತಿರುಗಾಡಿದೆ. ಕೊನೆಗೆ ಹೇಗೋಮಾಡಿ ಖಡೇ ಬಜಾರಿನ ಲ್ಲಿನ "ರಾಮವಿಲಾಸದಲ್ಲಿ" ಕೆಲಸಕ್ಕೆ ಸೇರಿದೆ.

"ಕೇಳಿದೆಯಾ ಚಂದ್ರೂ ನಿನ್ನ 'ಹೀರೋನ' ಕತೆಯನ್ನು?" ಎಂದು ನಾನಂದೆ.

"ಇರಲಿ ಅವನು ಹೇಳಲಿ, ನೀನು ನಡುವೆ ಬಾಯಿ ಹಾಕಬೇಡ," ಎಂದು ಚಂದ್ರೂ ಹೇಳಿದ.

"ಆ ಹೋಟಿಲ್ ಮಾಲಿಕ ಇದ್ದುದರಲ್ಲಿಯೆ ಒಳ್ಳೆಯ ಮನುಷ್ಯ. ನನ್ನನ್ನು ವಿಶೇಷ ಆದರದಿಂದ ನೋಡುತಿದ್ದ. ಸುಮಾರು ೨ ವರ್ಷಗಳಂತೂ ನಾನು ಯಾವ ತಾಪತ್ರಯವೂ ಇಲ್ಲದೆ ಚೆನ್ನಾಗಿಯೇ ಇದ್ದೆ. ಈ ಮಧ್ಯೆ ಇನ್ನೊಂದು ಘಟನೆ ನಡೆಯಿತು.

"ನನ್ನ ಹೋಟೆಲ್ ಮಾಲೀಕನಿಗೆ ಒಬ್ಬ ಸೂಳೆ. ಅವಳು ದಿನವೂ ರಾತ್ರಿ ಹೋಟಲಿಗೆ ಬಂದು ಆಳುಗಳ ಮೇಲೆ ಉಸ್ತುವಾರಿ ನೋಡಿಕೊಳ್ಳು ತ್ತಿದ್ದಳು. ಎಲ್ಲ ಆಳುಗಳಿಗೂ ಸಿಕ್ಕಾಪಟ್ಟೇ ಮಾತನಾಡುವುದು ಅವಳಿ ಗೊಂದು ಹೆಮ್ಮೆ."

"ನಾನು ಈ ಹೋಟೆಲ್ ಸೇರಿದ ಮೇಲೆ ಚೆನ್ನಾಗಿ ತಿಂದುಂಡು ಸ್ವಲ್ಪ ಲಕ್ಷಣವಾಗಿ ಕಾಣುವಂತಾದೆ. ಏನು ಗ್ರಹಚಾರ ತಿರುಗಿತೋ ಏನೋ. ಆ ಮಾಲೀಕನ ಸೂಳೆಯ ಕಣ್ಣು ನನ್ನ ಮೇಲೆ ಬಿತ್ತು. ಪ್ರತಿ ದಿನವೂ ನನ್ನ ತಿಂಡಿಯ ವಿಷಯದಲ್ಲಿ ಆಕೆ ವಿಶೇಷ ಆಸಕ್ತಿ ವಹಿಸತೊಡಗಿ ದಳು. ನನ್ನ ಸಂಬಳದಲ್ಲಿ ರಿಕಮೆಂಡೇಶನ್ ಆಯಿತು. ನನಗಾಗಿ ಕೊಂಚ ಬಟ್ಟೆಗಳು ಬಂದುವು. ಇದೆಲ್ಲದರ ಅರ್ಥ ನನಗಾಯಿತು.

"ನನ್ನನ್ನು ಸಿನೀಮಾಕ್ಕೆ ಬರಬೇಕೆಂದು ಆಕೆಯ ಒತ್ತಾಯ ಬೇರೆ ಆರಂಭವಾಯಿತು. ಆದರೆ ಅದೇಕೋ ಏನೋ ಅವಳ ಈ ಆಟ ನೋಟಗಳು ನನಗೆ ತೀರ ಅಸಹ್ಯವೆನಿಸಿದುವು. ಇದಕ್ಕೆ ಜೋಲು ಬೀಳಬಾರದೆಂದು ನಾನು ಎಷ್ಟೆಷ್ಟೋ ಮನಸ್ಸು ಗಟ್ಟಿ ಮಾಡುತ್ತಿದ್ದೆ.

"ಹೋಟಿಲ್ ಕೆಲಸಕ್ಕೆ ಸೇರಿದಮೇಲೆ ನನ್ನ ಬಾಲ್ಯ ಜೀವನದಲ್ಲಿ ತೀರ ಪ್ರಿಯವಾದ ಕಸರತ್ತು ಇತ್ಯಾದಿಗಳಿಗೆಲ್ಲ ತಿಲಾಂಜಲಿಯುಂಟಾಯಿತು. ಕೇವಲ ಹೊಟ್ಟೆಯ ಪಾಡಿಗಾಗಿ ದುಡಿಯುವ ನಿರ್ಜೀವಯಂತ್ರವಾಗಿ ಬಿಟ್ಟೆ ನಾನು.

"ಮತ್ತೂ ಒಂದು ವರ್ಷ ಕಳೆಯಿತು. ಈ ಹೊತ್ತಿಗೆ ಮಾಲೀಕರಿಗೆ ನನ್ನ ಬಗ್ಗೆ ತುಂಬಾ ಸಂಶಯ ಬಂದಿತ್ತು. ತಮ್ಮ ಸೂಳೆಯ ಮೇಲಂತೂ ಅವರು ಕಡಕಡನೆ ಹಲ್ಲು ಕಡಿಯುತ್ತಿದ್ದರು. ಒಂದು ದಿನ ಆಕೆ ನನ್ನ ಇದಿರು ಒಂದು ಮಣೆಯ ಮೇಲೆ ಕುಳಿತು ಏನನ್ನೋ ಹೇಳುತ್ತಿದ್ದಳು. ಮಧ್ಯೆ ಮಧ್ಯೆ ನಗೆಯ ಹೊಳೆಯೊಂದು ಹರಿದು ಹೋಗುತ್ತಿತ್ತು. ಮಾಲೀಕರು ಬಂದವರೇ, 'ನಿಮ್ಮಿಬ್ಬರನ್ನು ಕಡಿದು ಬುಟ್ಟಿ ತುಂಬುತ್ತೇನೆ' ಎಂದು ಗದ್ದರಿಸಿದರು.

"ಆಕೆಯ ಮುಖದ ಚರ್ಯೆ ಬದಲಾಯಿತು. ನಿರಾಶೆಯ ಕಾರ್ಮೋಡ ಆಕೆಯ ಆ ತೇಜಃಪುಂಜ ಮೊಗದಲ್ಲಿ ಸುಳಿಯಿತು. ನನ್ನ ಜೀವನದ ಹಲವು ಧ್ಯೇಯಗಳು ಕೈಗೂಡುವವರೆಗೆ ಈ ಸಾಂಸಾರಿಕ ಜೀವನಕ್ಕೆ ಇಳಿಯುವುದು ತರವಲ್ಲವೆಂದು ನಾನು ನಿರ್ಧರಿಸಿದ್ದೆ.

"ಅಂದೇ ಆ ಹೋಟಲು ಬಿಟ್ಟು ಹೋಗುವ ನಿರ್ಧಾರವನ್ನು ಮಾಡಿ ಆ ಸೂಳೆ ನನಗೆ ಬರೆದ ಹತ್ತಾರು ಪ್ರೇಮ ಪತ್ರಗಳನ್ನು ಒಂದು ಕವರಿನಲ್ಲಿಟ್ಟು 'ಇವನ್ನು ಓದಿ ನೋಡಿ. ನಿಮ್ಮ ಅಮ್ಮನವರ ಆಡಳಿತಕ್ಕೆ ಬೇಸತ್ತು, ಮೇಲಾಗಿ ಅವರ ಈ ಒತ್ತಾಯಕ್ಕಾಗಿ ನೊಂದು ನಾನು ನಿಮ್ಮ ಕೆಲಸದಿಂದ ದೂರವಾಗಿದ್ದೇನೆ. ನೀವು ಚೆನ್ನಾಗಿ ಬಾಳಿ ಬದುಕಿ' ಎಂದು ಕಾಗದ ಬರೆದಿಟ್ಟು ಮತ್ತೆ ಹೊರಟುಬಿಟ್ಟೆ.

"ಅಷ್ಟೊತ್ತಿಗೆ ಯುದ್ಧದ ಬಿಸಿ ಏರುತ್ತಿತ್ತು. ರಿಕ್ರೂಟಿಂಗ್ ಕಾರ್ಯ ಆರಂಭವಾಗಿತ್ತು. ಪ್ರತಿದಿನವೂ ಪ್ರಚಾರ ಭಾಷಣವಾಗುತ್ತಿತ್ತು.

"ಅಂದೇ ನಾನು ಬೆಳಗಾವಿಯಲ್ಲಿ ರಿಕ್ರೂಟಿಂಗ್ ಆಫೀಸಿನಲ್ಲಿ ರಿಕ್ರೂಟ್ ಆಗಿ ಅಲ್ಲಿನ ಅಲ್ಪಮಟ್ಟಿನ ಶಿಕ್ಷಣವನ್ನು ಪಡೆದು ಮುಂದೆ ಎಲ್ಲಗೋ ಹೋಗಬೇಕಾಗುತ್ತೆಂಬ ವಾರ್ತೆಯನ್ನು ಕೇಳಿದೆ. ನನಗೆ ಪ್ರಾರಂಭದಲ್ಲಿ ದೊರೆತ ಸಂಬಳ ೪೦ ರೂ. ಊಟ ಬಟ್ಟೆ ಎಲ್ಲ ಸರ್ಕಾರದ್ದು.

"ಹದಿನೈದು ದಿನಗಳನ್ನು ಬೆಳಗಾವಿಯಲ್ಲಿ ಕಳೆದ ನಂತರ ನನ್ನ ಜೊತೆಗಾರರ ತಂಡವೊಂದನ್ನು ವಾಲ್ಟರ್ ಕ್ಯಾಂಪಿಗೆ ಸಾಗಿಸಿದರು.

"ಲಾಹೋರಿಗೆ ಸುಮಾರು ೪-೫ ಮೈಲುಗಳ ಮೇಲಿರುವ ಈ ಕ್ಯಾಂಪಿನಲ್ಲಿ ೪ ತಿಂಗಳು ಕಳೆಯಿತು. ಇಲ್ಲಿ ಸೈನಿಕರಿಗಿರಬೇಕಾದ ಸಾಮಾನ್ಯ ಶಿಕ್ಷಣವೆಲ್ಲ ಪೂರೈಸಿತು.

"ನಿಮಗೆ ಬಂದೂಕಿನ ಉಪಯೋಗವನ್ನು ಕಲಿಸಿದ್ದರೋ ?" ಎಂದು ಚಂದ್ರೂ ಕೇಳಿದ.

"ಸಾಮಾನ್ಯವಾಗಿ ಎಲ್ಲ ಶಿಕ್ಷಣವನ್ನು ಕೊಡುತ್ತಾರೆ. ಶಿಸ್ತುಪಾಲನ ಅತಿಮುಖ್ಯ. ನಾವೆಲ್ಲ ಬೆಳಗಿನ ನಾಲ್ಕುಗಂಟೆಗೆ ಎದ್ದು ಮೊದಲು ಪ್ರಾತರ್ವಿಧಿಯನ್ನು ತೀರಿಸಿಕೊಂಡು ಮುಖ ಕ್ಷೌರ ಮಾಡಿಸಿಕೊಂಡು ಡ್ರಿಲ್‌ಗೆ ತೆರಳಬೇಕು. ಕ್ಷೌರ ಮಾಡಿಕೊಂಡಿದ್ದಾರೋ ಇಲ್ಲವೋ ಎಂದು ಪರೀಕ್ಷಿಸಲು ಅಧಿಕಾರಿ ಗಲ್ಲದ ಮೇಲೆ ಕೈಯಾಡಿಸಿ ನೋಡುತ್ತಾರೆ. ಉರುಟು ಹತ್ತಿದರೆ ಶಿಕ್ಷೆ ನಿಶ್ಚಯ. ಬೂಟು ಪಾಲಿಷ್ ಮಾಡಬೇಕು. ಬಟ್ಟೆ ನೀಟಾಗಿ ಇಟ್ಟುಕೊಳ್ಳಬೇಕು. ಇವೆಲ್ಲ ಅತಿ ಮುಖ್ಯ. ಪ್ರಾರಂಭದ ಹಲವು ದಿನಗಳಲ್ಲಿ ಆ ಭಾರದ ಬೂಟುಗಳನ್ನು ಹೊತ್ತು ಡ್ರಿಲ್ ಮಾಡುವುದೇ ಒಂದು ಪ್ರಚಂಡಕಾರ್ಯ ಎನಿಸುತ್ತದೆ. ಬರಬರುತ್ತ ಅದೆಲ್ಲ ರೂಢಿಯಾಗಿ ಬಿಡುತ್ತದೆ.

"ಲಾಹೋರಿಗೆ ಪ್ರತಿ ಭಾನುವಾರ ನಾವು ತಪ್ಪದೆ ಹೋಗುತ್ತಿದ್ದೆವು. ಸಿನೀಮಾ ನೋಡುವುದು ಹೋಟೆಲುಗಳಿಗೆ ಹೋಗಿ ತಿಂಡಿ ತಿನ್ನುವುದು ಇವು ಪ್ರಾಮುಖ್ಯವಾದ ಕೆಲಸಗಳು.

"ಲಾಹೋರಿನಿಂದ ನಮ್ಮ ಕ್ಯಾಂಪ್ ಬದಲಾಯಿಸಲ್ಪಟ್ಟಿತು. ಸಿಕಂದ್ರಾಬಾದಿಗೆ ನಾನು ಮತ್ತೆ ಕೆಲವು ಹೊಸ ಮಿತ್ರರೊಡನೆ ಬರಬೇಕಾಯಿತು."

"ಕನ್ನಡ ಮಾತನಾಡುವವರು ಇದ್ದರೋ ನಿಮ್ಮ ಲಾಹೋರ್ ಶಿಬಿರದಲ್ಲಿ" ಎಂದು ಚಂದ್ರೂ ಪ್ರಶ್ನೆ ಹಾಕಿದ.

"ಇದ್ದರು ಒಂದಿಬ್ಬರು ಮೈಸೂರಿನವರು. ಮತ್ತೆ ಕೆಲವರು ಬಾಗಲಕೋಟೆಯವರು. ಕನ್ನಡ ಮಾತನಾಡುವವರೆಲ್ಲ ಒತ್ತಟ್ಟಿಗೆ ಸೇರಿ ಮಾತನಾಡುವುದು, ಹರಟೆ ಹೊಡೆಯುವುದು ಮಾಡುತ್ತಿದ್ದೆವು. ಕನ್ನಡ ಮಾತನಾಡುವವರನ್ನು ಕಂಡರೆ ನಮಗೆ ಅದೊಂದು ಹೆಮ್ಮೆ ಎನಿಸುತ್ತಿತ್ತು.

"ನೂರಾರು ಸುದ್ದಿಗಳು ನಮ್ಮ ಹರಟೆಯಲ್ಲಿ ಸಮಾವೇಶವಾಗುತ್ತಿದ್ದುವು. ಸಾಮಾನ್ಯವಾಗಿ ಯುದ್ಧಕ್ಕೆ ಸಂಬಂಧಪಟ್ಟ ವಿಷಯಗಳು ನಮಗೆ ಹೆಚ್ಚು ಕುತೂಹಲವನ್ನು ಉಂಟುಮಾಡುತ್ತಿದ್ದುದು ಸ್ವಾಭಾವಿಕ. ಆದರೆ ನಮ್ಮ ಮಿತ್ರವರ್ಗದಲ್ಲಿ ಒಮ್ಮೆ ಕಾಂಗ್ರೆಸ್ ನಾಯಕರ ಬಗ್ಗೆ ಹರಟೆಯ ಮುಖ ಹೊರಳಿತೆಂದರೆ ತೀರಿಯೇ ಹೋಯ್ತು. ನಮ್ಮ ಅಚ್ಚು ಮೆಚ್ಚಿನ ನಾಯಕ ಪಂಡಿತ ಜವಹರಲಾಲರ ಬಗ್ಗೆ ನಮಗೆಲ್ಲ ಭಾರಿ ಅಭಿಮಾನ. ಗಾಂಧೀಜಿ ಬಗ್ಗೆ ೧೫ ನಿಮಿಷ ಮಾತನಾಡಿದರೆ ನೆಹರು ಬಗ್ಗೆ ಒಂದು ಗಂಟೆಯಾಗುತ್ತಿತ್ತು.

"ನನ್ನ ಮಿತ್ರನೊಬ್ಬನ ಹತ್ತಿರ ನೆಹ್ರೂ ಅವರ ಆಂಗ್ಲ ಭಾಷೆಯ ಆತ್ಮ ಚರಿತ್ರೆಯ ಪ್ರತಿಯೊಂದಿತ್ತು. ಅದನ್ನಾತ ಓದಿ ಹೇಳಿ, ಕನ್ನಡದಲ್ಲಿ ಆ ಬಗ್ಗೆ ಕೊಂಚ ಪ್ರಸ್ತಾಪಿಸುತ್ತಿದ್ದ. ಅದನ್ನೆಲ್ಲ ನಾವು ವಿಶೇಷ ಕುತೂಹಲದಿಂದ ಕೇಳುತ್ತಿದ್ದೆವು. ಗಾಂಧೀಜಿಯ 'ಅನಾಸಕ್ತಿಯೋಗ' ವನ್ನೂ ಆತ ನಮಗಾಗಿ ಓದಿ ಹೇಳಬೇಕು. ನಮಗೆ ಏನಾದರೂ ಕೇಳಬೇಕೆಂದು ಎನಿಸಿದರೆ ನಾವು ಪ್ರಶ್ನೆ ಹಾಕಬೇಕು."

"ನಿಮ್ಮ ಹತ್ತಿರ ಈ ಎಲ್ಲ ಪುಸ್ತಕಗಳನ್ನು ಇಟ್ಟುಕೊಳ್ಳಲು ಸಾಧ್ಯವಿತ್ತೋ ?" ಎಂದು ಚಂದ್ರೂ ಪ್ರಶ್ನಿಸಿದ.

"ಇದನ್ನೇನು ಹೇಳುತ್ತೀರಿ. ಇನ್ನೂ ಎಂಥೆಂಥವೋ ಪುಸ್ತಕಗಳು ಅಲ್ಲಿನವರ ಹತ್ತಿರ ಇದ್ದುವು. ಸಿಕಂದ್ರಾಬಾದಿನಲ್ಲಿ ಒಂದು ಬಾರಿ ನಾವೆಲ್ಲ ಮಿಲಿಟರಿ ಟ್ರಕ್‌ನಲ್ಲಿ ನಮ್ಮ ಕ್ಯಾಂಪಿನ ಕಡೆಗೆ ಹೋಗುತ್ತಿದ್ದಾಗ ಒಂದು ಭಾರಿ ಅನಾಹುತವೊದಗಿತು. ಅದರಲ್ಲಿ ಮೂರು ನಾಲ್ಕು ಜನ ಮರಣ

ಹೊಂದಿದರು. ಸತ್ತವರ ದೇಹಗಳನ್ನು ಅದೇ ಟ್ರಕ್‌ನಲ್ಲಿ ಹಾಕಿಕೊಂಡು ಆಸ್ಪತ್ರೆಗೆ ಸಾಗಿಸಿದ್ದಾಯಿತು. ಆದರೆ ಆ ನೆತ್ತರು ; ಆ ಗಾಯ ; ಆ ದುರ್ಮರಣ ; ಪ್ರಾಣೋತ್ಕ್ರಮಣದಲ್ಲಿನ ಅವರ ಚೀತ್ಕಾರ ! ಅಯ್ಯೋ ! ಬೇಡ ಅದನ್ನು ನೆನೆದುಕೊಳ್ಳುವುದು" ಎಂದು ಚೆಲುವರಾಜ್ ಸಿಗರೇಟ್ ಹೊತ್ತಿಸಿದ.

"ಸಿಕಂದ್ರಾಬಾದಿನಲ್ಲಿ ನೀವೆಷ್ಟು ದಿನ ಇದ್ದಿರಿ ?" ಎಂದು ನಾನು ಕೇಳಿದೆ.

"೬ ತಿಂಗಳು. ನಂತರ ನಮ್ಮ ಕ್ಯಾಂಪು ಮತ್ತೆ ಬದಲಾಯಿತು. ಅಲ್ಲಿಂದ ಡಮ್ ಡಮ್ ಶಿಬಿರಕ್ಕೆ ವರ್ಗ ಹೊಂದಿದೆವು.

"ಕಲಕತ್ತಾ ನಗರಕ್ಕೆ ಸಮೀಪದಲ್ಲಿದೆ ಈ ಶಿಬಿರ. ಇಲ್ಲೂ ಕೂಡ ಉಳಿದೆಲ್ಲ ಕ್ಯಾಂಪಿನಂತೆಯೇ ಇತ್ತು ಸ್ಥಿತಿ. ಪ್ರತಿ ಭಾನುವಾರ ತಪ್ಪದೆ ಸಿನೀಮಾಕ್ಕೆ ಹೋಗುವುದು. ಊರಿನಲ್ಲೆಲ್ಲ ತಿರುಗಾಡುವುದು. ಕಲಕತ್ತಾ ನಗರ ಹೊಲಸು. ಅಷ್ಟು ವಿಸ್ತೃತ ಬೀದಿಗಳೂ ಇಲ್ಲ. ಕೆಲವು ಕಡೆಗಳಲ್ಲಿ ಮಾತ್ರ ರಮಣೀಯ ನೋಟಗಳಿವೆ.

"ಸಾಮಾನ್ಯವಾಗಿ ಹೌರಾ ಬ್ರಿಡ್ಜ ನೋಡಲು ಯಾರೂ ಮರೆಯುವದಿಲ್ಲ. ಸಾಯಂಕಾಲದ ಅಲ್ಲಿನ ದೃಶ್ಯ ಎಂಥವರನ್ನಾದರೂ ಮುಗ್ಧರನ್ನಾಗಿ ಮಾಡುವುದು. ಸಮಯ ಸಿಕ್ಕಾಗಲೆಲ್ಲ ನಾವು ಅಲ್ಲಿ ಹೋಗಿ ಆನಂದ ಪಡುತ್ತಿದ್ದೆವು.

"ಡಮ್ ಡಮ್ ಶಿಬಿರದಲ್ಲಿ ಎಲ್ಲದಕ್ಕಿಂತಲೂ ಒಂದು ವಿಶೇಷ. ಆಗಾಗ ರೇಡಿಯೋ ಕೇಳಲು ಸಿಗುತ್ತಿತ್ತು. ನಾವೆಲ್ಲರು ಸೇರಿದಾಗ ಕನ್ನಡದ ಹಾಡುಗಳು, ಭಾಷಣಗಳು ಇತ್ಯಾದಿ ಇದ್ದಾಗ ಆ ಸ್ಟೇಷನ್‌ಗೆ ಟ್ಯೂನ್ ಮಾಡುತ್ತಿದ್ದೆವು. ಅನೇಕ ಬಾರಿ ಮೈಸೂರು ಆಕಾಶವಾಣಿ ಕೇಳಿದ್ದೇವೆ."

"ಅಲ್ಲ ಚೆಲುವರಾಜ್, ಬಾಬು ಸುಭಾಸ್ ಚಂದ್ರಬೋಸ್ ಬರ್ಲಿನ್ ರೇಡಿಯೋದಿಂದ ಆಕಾಶವಾಣಿ ಭಾಷಣ ಮಾಡುತ್ತಿದ್ದರಂತಲ್ಲ. ನೀನು ಕೇಳಿದ್ದೀಯೋ ಅವರ ಭಾಷಣ ?" ಎಂದು ನಾನು ಕುತೂಹಲದಿಂದ ಪ್ರಶ್ನೆ ಹಾಕಿದೆ.

" ಎಲ್ಲಿಯ ಸುಭಾಷ್ ಬಾಬು ಭಾಷಣ ಶೀನೂ. ಅದೆಂದಾದರೂ ಸಾಧ್ಯವೇನಯ್ಯ. ನಾವೆಷ್ಟು ಯತ್ನ ಮಾಡಿದರೂ ಬರ್ಲಿನ್ ಸ್ಟೇರ್ಷ ಟ್ಯೂ ಮಾಡುವಹಾಗಿರಲಿಲ್ಲ. ಒಂದುವೇಳೆ ಮಾಡಿದ್ದರೂ ಏನೂ ಕೇಳದಂತೆ ತೊಡಕಿರುತ್ತಿತ್ತು. ಅಲ್ಲದೆ ಅದು ಶುದ್ಧ ಮಿಲಿಟರಿ ಕ್ಯಾಂಪು. ಸರ್ಪ ಕಾವಲು ಬೇರೆ. ಏನಾದರೂ ತಪ್ಪು ಸಿಕ್ಕರೆ ಸಾಕು ಎಂದು ಕಾಯ್ದು ಕುಳಿತ ಅಧಿಕಾರಿಗಳಿಗೆ ಇಂಥ ಅಪರಾಧ ಸಿಕ್ಕರೆ ಕೇಳಬೇಕೆ. ?

" ಬೊಂಬಾಯಿ, ಮದ್ರಾಸ್, ಟ್ರಿಚಿ ಆಕಾಶವಾಣಿಗಳನ್ನು ಎಷ್ಟೋ ಬಾರಿ ಕೇಳಿದೆವು. ಪರದೇಶದ ವಾರ್ತೆಗಳನ್ನು ನಮ್ಮ ಶಿಬಿರದಲ್ಲಿಯೇ ಎಷ್ಟು ಹೇಳುತ್ತಾರೋ ಅಷ್ಟನ್ನೇ ಕೇಳಿ ತೃಪ್ತಿಹೊಂದುತ್ತಿದ್ದೆವು."

"ಕಲಕತ್ತಾದ ಮೇಲೆ ಜಪಾನೀ ವಿಮಾನಗಳು ಬಾಂಬು ಹಾಕಿದಾಗ ನೀವು ಡಮ್ ಡಮ್‌ನಲ್ಲಿ ಇದ್ದಿಲ್ಲವೇ ?" ಎಂದು ಚಂದ್ರೂ ಕುತೂಹಲದಿಂದ ಪ್ರಶ್ನೆ ಮಾಡಿದ.

"ಇಲ್ಲ, ಅಷ್ಟೊತ್ತಿಗಾಗಲೇ ನಾವು ಬರ್ಮದ ಹೃದಯದಲ್ಲಿ ಹೊಕ್ಕಿದ್ದೆವು."

"ರಂಗೂನಿಗೆ ಹೋಗಿದ್ದಿರಿ ಅನ್ನು", ಎಂದು ನಾನು ಮೆತ್ತಗೆ ಉಸಿರು ಬಿಟ್ಟೆ.

"ಹೌದು ರಂಗೂನಿಗೆ ಸಮೀಪದಲ್ಲೇ ಇದ್ದೆವು. ಏನು ಹೇಳಲಿ ಅಂದಿನ ಆ ಭಯಂಕರ ಅನುಭವವನ್ನು !!" ಎಂದು ಚೆಲುವರಾಜ್ ಮೈ ಮುದುಡಿಕೊಂಡ.

"ಅಲ್ಲ ಚೆಲುವರಾಜ್, ನಿಮ್ಮನ್ನು ರಂಗೂನಿಗೆ ಕರೆದು ಒಯ್ಯುವಾಗ ಹೋಗುವ ಮುಂದೆ ಮೊದಲೇ ಸೂಚನೆ ಕೊಡಲಿಲ್ಲವೇನು ?" ಎಂದು ನಾನು ಮತ್ತೆ ಪ್ರಶ್ನೆ ಹಾಕಿದೆ

"ನಾಲ್ಕು ದಿನಗಳ ಮೊದಲಿಗೆ ನಮ್ಮ ಶಿಬಿರದ ೫೦ ಜನರು ಪ್ರಯಾಣಕ್ಕೆ ಸಿದ್ಧರಾಗಬೇಕೆಂದು ಆಜ್ಞೆಯ ಚೀಟಿಯೊಂದು ಬಂದಿತ್ತು. ಅದನ್ನು ಓದಿ ಹೇಳಿದವರು ಮತ್ತೇನನ್ನು ಹೇಳಲಿಲ್ಲ. ನಾವು ಎತ್ತಹೋಗುತ್ತೇವೆಂಬುದು ಸೂಚಿಸಲ್ಪಡಲಿಲ್ಲ. ಯಾವ ಬಗೆಯ ತಿಳುವಳಿಕೆಯೂ ನಮಗಿರಲಿಲ್ಲ.

" ಅಂದು ಬೆಳಗಿನ ಜಾವ ಇನ್ನು ೩ ಘಂಟೆಯಾಗಿತ್ತೆಂದು ತೋರುತ್ತದೆ. ನಾವೆಲ್ಲ ಏಳಬೇಕೆಂದು ಕಹಳೆ ಕೂಗಿತು. ಎಲ್ಲರೂ ಲಗುಬಗೆಯಿಂದ ಎದ್ದೆವು. ವಿಪರೀತ ಚಳಿ ಬೇರೆ. ಪ್ರಾತರ್ವಿಧಿಯನ್ನು ತೀರಿಸಿಕೊಂಡು ಟೀ ಕುಡಿದು ಪಯಣಕ್ಕೆ ಸರ್ವಸಿದ್ಧತೆಯನ್ನು ಮಾಡಿ ಆಜ್ಞೆಗಾಗಿ ಕಾದಿದ್ದೆವು.

" ಆಚೆ ಟ್ರಕ್ಕುಗಳು ಬಂದ ಸದ್ದಾಯಿತು. ಒಬ್ಬೊಬ್ಬರೇ ಸಾಮಾನುಗಳನ್ನು ಅದರಲ್ಲಿ ತುಂಬಿ ನಾವೂ ಅದರ ಮೇಲೇರಿ ಕುಳಿತುಕೊಂಡೆವು. ಆರಂಭವಾಯಿತು ಮೊದಲ ಪಯಣ ಟ್ರಕ್‌ನಲ್ಲಿ.

" ಸ್ವಲ್ಪ ಹೊತ್ತಿನಲ್ಲೇ ನಾವೆಲ್ಲರೂ ಡಮ್ ಡಮ್ ವಿಮಾನ ನಿಲ್ದಾಣಕ್ಕೆ ಬಂದೆವೆಂದು ಗೊತ್ತಾಯಿತು. ಆಶ್ಚರ್ಯ, ಕುತೂಹಲ, ಭಯ, ಚಿಂತೆ, ಅಧೀರತೆ ಇತ್ಯಾದಿಗಳು ನನ್ನ ತಲೆಯಲ್ಲಿ ಒಮ್ಮೆಗೇ ನುಗ್ಗಿದವು. ಎತ್ತ ಹೊರಟಿದ್ದೇವೋ ಎಂಬ ಸಮಸ್ಯೆಯಂತೂ ನನ್ನ ತಲೆಯಲ್ಲಿ ಒಂದೇ ಸಮನೆ ಕೊರೆಯುತ್ತಿತ್ತು

" ಬರ್ಮ ರಣರಂಗದ ಪರಿಸ್ಥಿತಿ ದಿನೇ ದಿನೇ ಭೀಕರವಾಗುತ್ತ ನಡೆದಿತ್ತು. ಎಲ್ಲಿ ನಾವೆಲ್ಲ ಬರ್ಮಾ ಫ್ರಂಟಿಗೆ ಹೋಗಬೇಕಾಗುತ್ತದೋ ಎಂಬೋದು ಅಂಜಿಕೆ. ಎದೆಯೆಲ್ಲ ಗಡಗಡನೆ ನಡುಗುತ್ತಿತ್ತು. ಮತ್ತೆ ನೂರು ಯೋಚನೆಗಳು ನನ್ನ ಕಣ್ಣಮುಂದೆ ಬಂದುವು.

" ನನ್ನ ಜೊತೆಗೆ ಹೊರಟ ಮಿತ್ರರಲ್ಲಿ ಇಬ್ಬರು ಮಾತ್ರ ಕನ್ನಡಿಗರಿದ್ದರು. ಇಬ್ಬರೂ ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ ಯಾವುದೋ ಹಳ್ಳಿಯವರು. ಅವರು ಕನ್ನಡಮಾತನಾಡುವುದು ತೀರ ಅಪರೂಪ. ಉಳಿದವರೆಲ್ಲ ಸರ್ವಸಾಮಾನ್ಯವಾಗಿ ತಮಿಳು ಮಾತನಾಡುವವರು.

" ನಮ್ಮ ವಿಮಾನ ಪ್ರಯಾಣಕ್ಕೆ ಇನ್ನು ಅರ್ಧಗಂಟೆ ಇದೆಯೆಂದೂ, ಯಾರಾದರೂ ಕಾಫಿ ತೆಗೆದುಕೊಳ್ಳುವವರಿದ್ದರೆ ತಿಳಿಸಬೇಕೆಂದು ಸೂಚಿಸಲಾಯಿತು.

" ಎದ್ದರು ಅನೇಕರು. ನಾನು ಮಾತ್ರ ಕುಳಿತ ಸ್ಥಳದಿಂದ ಕದಲಲಿಲ್ಲ. ಯಾರೋ ಬಂದು 'ಕಾಫಿ ಬೇಡವೆ?' ಎಂದರು. ನನಗೆ ಯಾರು ಬಂದರು ಏನು ಕೇಳಿದರು ಎಂಬ ಪ್ರಜ್ಞೆಯೇ ಇರಲಿಲ್ಲ.

“ ವಿಮಾನ ಸಿದ್ಧವಾಗಿರುವ ಸೂಚನೆಯಾಯಿತು. ಪಕ್ಕದ ಗೆಳೆಯರೆಲ್ಲ ಲಗುಬಗೆಯಿಂದ ಸಾಮಾನುಗಳನ್ನು ಹೊತ್ತು ವಿಮಾನದ ಕಡೆಗೆ ಧಾವಿಸಲಾರಂಭಿಸಿದರು. ನಾನೂ ಎದ್ದೆ. ದೇಹ ತೀರ ಭಾರವೆನಿಸಿತು. ದೇಹದ ನೂರು ಮಡಿ ಮನಸ್ಸು ಭಾರವಾಗಿತ್ತು.

“ ನನ್ನ ನಿಸ್ತೇಜ ಮುಖವನ್ನು ಕಂಡು ನಮ್ಮ ಪಡೆಯ ನಾಯಕರು ‘ ನಿನಗೆ ಚೆನ್ನಾಗಿಲ್ಲವೋ ? ’ ಎಂದು ಪ್ರಶ್ನಿಸಿದರು. ನಾನು ಏನೂ ಇಲ್ಲ ಎಂದು ಉತ್ತರಿಸಿ ಸಾಮಾನು ಹೊತ್ತು ನಡೆದೆ.

“ ಸ್ವಲ್ಪ ದೂರದಲ್ಲಿಯೇ ಮೂರು ಆರ್. ಎ. ಎಫ್. ವಿಮಾನಗಳು ನಿಂತಿದ್ದವು. ಗಗನಯಾತ್ರೆಯ ಮೊತ್ತ ಮೊದಲನೆಯ ಅನುಭವ ಇಂದಾಗಲಿದೆಯೆಂಬ ಸಂತೋಷ ಒಂದುಕಡೆ, ವಿಮಾನದಲ್ಲಿ ಕುಳಿತರೆ ಏನೋ? ರಂಗೂರ್ ಪ್ರದೇಶಗಳಲ್ಲಿ ಘೋರ ಸಂಗ್ರಾಮ ನಡೆಯುತ್ತಿದೆ ಎಂಬುದು ಮತ್ತೊಂದು ಕಡೆ. ಸಾವು, ನೋವು, ಘಾಯ, ರಕ್ತದ ಕಾಲುವೆ, ಹೆಣಗಳ ರಾಶಿ, ಅಗ್ನಿವರ್ಷ, ಗುಂಡುಗಳ ಪ್ರಚಂಡ ಧ್ವನಿ, ಬಾಂಬಿನ ಭಯಂಕರ ಆಸ್ಫೋಟನ, ಉರುಳುವ ಕಟ್ಟಡಗಳು ದುರಂತದೃಶ್ಯ, ಪ್ರಾಣ ರಕ್ಷಣೆಗಾಗಿ ಹಾಹಾರಿ ಓಡುವ ನಿರಾಶ್ರಿತರ ಗಂಡಾಂತರಸ್ಥಿತಿ, ಹೆಂಗಸರು ಮಕ್ಕಳ ಆರ್ತನಾದ, ಮುದುಕರ ದುಸ್ಥಿತಿ, ಕಂದಮ್ಮಗಳ ಆಕ್ರೋಶ, ಸಾಯುವವರ ನರಳಾಟ ಈ ಎಲ್ಲ ರಣತಾಂಡವದ ರುದ್ರದೃಶ್ಯವೇ ನನ್ನ ಕಣ್ಮನಗಳಲ್ಲಿ ಮೂರ್ತಿವೆತ್ತಿತ್ತು. ನಾನು ಎಲ್ಲಿ ‘ ಹೆರಾ ’ ಎನ್ನುತ್ತೇನೋ ಎಂಬೊಂದು ಬೆದರಿಕೆ. ಸೈನ್ಯದಲ್ಲಿ ಸೇರಿದರೇನಾಯಿತು. ನಮಗೂ ಜೀವ ಭಯ ಇದ್ದೇ ಇತ್ತು. ಎಷ್ಟು ಬೆದರಿದರೇನು ? ಎಷ್ಟು ಯೋಚಿಸಿದರೇನು ? ಪ್ರಯಾಣ ಗೈಯ್ಯಲೇ ಬೇಕೆಂದು ಕಟ್ಟಾಜ್ಞೆಯಾಗಿತ್ತು. ನಮ್ಮ ನಮ್ಮ ಶಸ್ತ್ರಗಳು, ನಮ್ಮ ಹಾಸಿಗೆ, ನಮ್ಮ ತಿಂಡಿ, ನಮ್ಮ ಪರಿವಾರ ಎಲ್ಲವೂ ನಮ್ಮನ್ನು ರಕ್ಷಿಸುತ್ತೇವೆಂಬ ಭರವಸೆ ಕೊಡುತ್ತಿದ್ದವು.

“ ಸಹಸ್ರ ಯೋಚನೆಗಳು ತಲೆಯಲ್ಲಿ ಚಿತ್ರಭೀಮನ ಕೋಟೆಯನ್ನು ಕಟ್ಟುತ್ತಿದ್ದಾಗಲೇ ನಾವೆಲ್ಲ ಸಾಲಾಗಿ ನಿಲ್ಲಬೇಕಾಗಿ ಬಂತು. ನಿಂತೆವು. ಒಬ್ಬೊಬ್ಬರಾಗಿ ವಿಮಾನವನ್ನೇರಿದೆವು.

5

೬

"ಐದು ಗಂಟೆಗೆ ಸರಿಯಾಗಿ ವಿಮಾನವು ಡಮ್ ಡಮ್ ನಿಲ್ದಾಣ ದಿಂದ ಮೆಲ್ಲಗೆ ಹಾರಲಾರಂಭಿಸಿತು. ಕುಳಿತವರಲ್ಲಿ ಕೆಲವರಿಗೆ ಪ್ರಾಯಶಃ ಅದೇ ಮೊತ್ತ ಮೊದಲನೆಯ ವಿಮಾನ ಪ್ರಯಾಣ.

"ಪ್ರೊಪೆಲರಿನ ಶಬ್ದ ಒಂದೇ ನಮುನೆ ಕೇಳುತ್ತಿತ್ತು. ನಾವೆಲ್ಲ ಪಕ್ಕದ ಕಿಡಿಕಿಯಲ್ಲಿ ಮೋರೆಯಿಟ್ಟು ತುಂಬ ಕುತೂಹಲದಿಂದ ನೋಡುತ್ತಿದ್ದೆವು.

"ಎಲ್ಲರ ಮುಖವನ್ನೊಮ್ಮೆ ನಾನು ನೋಡಿದೆ ನನ್ನಷ್ಟೇ ಉತ್ಸಾಹ ಎಲ್ಲರಲ್ಲೂ ಕಂಡು ಬಂತು ಆದರೆ ಅದೇನು ಕಾರಣವೋ ಯಾರು ಬಲ್ಲರು? ನನ್ನ ಮುಖ ಮುದ್ರೆ ತೀರ ಗಾಬರಿಯಾದವನಂತಾಗಿತ್ತೆಂದು ತೋರುತ್ತದೆ. ನನ್ನ ಪಕ್ಕದ ಗೆಳೆಯ 'ಇದೇನು ಇಷ್ಟು ಚಿಂತೆಗೊಳಗಾಗಿದ್ದೀಯಾ?' ಎಂದು ಕೇಳಿದ. ಅವನಿಗೆ ಏನೋ ಉತ್ತರ ಹೇಳಿದೆ.

"ವಿಮಾನ ಕಲಕತ್ತಾ ನಗರದ ಮೇಲೆ ರಮ್ಯವಾಗಿ ಹಾರುತ್ತಿತ್ತು. ಅದೊಂದು ಅಪೂರ್ವ ನೋಟ. ವಿಮಾನದ ಕಿಡಿಕಿಯಿಂದ ಸುಂದರ ನಗರ ಹೇಗೆ ಕಾಣುತ್ತದೆಂಬುದನ್ನು ಈ ನೀರಸ ವಾಕ್ಯಗಳಲ್ಲಿ ನಾನು ವರ್ಣಿಸ ಲಾರೆ. ದೊಡ್ಡ ದೊಡ್ಡ ಕಟ್ಟಡಗಳ, ದೇವಾಲಯಗಳ ಗೋಪುರಗಳ, ಚರ್ಚಿನ ತುದಿಗಳ, ಎತ್ತರವಾಗಿ ಬೆಳೆದು ನಿಂತ ಸುಂದರ ಮರಗಳ ತುದಿ ಯನ್ನು ನೋಡುವ ಸೌಭಾಗ್ಯ ಎಷ್ಟುಮಂದಿಗೆ ಸಿಕ್ಕುತ್ತದೆ. ಅದು ಸಾಧ ವಿಲ್ಲದ ಮಾತು ಆದರೆ ಗಗನಯಾಮಿಗಳಾದ ನಾವು ಎಲ್ಲ ಸುಂದರ ಕಟ್ಟಡ ಗಳ ಮೇಲ್ತುದಿಯನ್ನು ಕಂಡೆವು

"ಬೀದಿಯಲ್ಲಿ ತಿರುಗಾಡುವ ವಾಹನಗಳು, ಜನರು ಏನೋ ಒಂದು ಬಗೆಯಲ್ಲಿ ಕಂಡರು ನಾವು ನೋಡುತ್ತಿದ್ದ ಹಾಗೆ ಕೆಳಗಡೆಗೆ ನೀರಿನ ಹೊನಲು ಹರಿದುಹೋಗುತ್ತಿದ್ದುದನ್ನು ಈಕ್ಷಿಸಿದೆವು. ಕಣ್ಣಿಗೆ ಕಾಣುವಷ್ಟು ದೂರ ಹಚ್ಚನೆಯ ಹಸಿರು ಮಲಗಿ ನಿದ್ರಿಸುತ್ತಿತ್ತು. ಮುಂದೆ ಕೊಂಚ ಹೊತ್ತಿನಲ್ಲಿ ಬಿಸಿಲು ಬಿದ್ದು ಅದೊಂದು ಬಗೆಯ ಸೌಂದರ್ಯ ಹೆಚ್ಚಿತು.

"ಗುಡ್ಡ ಬೆಟ್ಟಗಳ ತಲೆಮೆಟ್ಟಿ ನಮ್ಮ ವಿಮಾನ ಹಾರಿಹಾರಿ ಎಷ್ಟೋ ಮೈಲುಗಲ್ಲುಗಳನ್ನು ಹಿಂದುಳಿಸುತ್ತಿತ್ತು. ಸೂರ್ಯನಾರಾಯಣ ಮೂಡಿ

ಬರುತ್ತಿದ್ದ. ಆ ಅಭೂತಪೂರ್ವ ನೋಟವನ್ನು ಇನ್ನು ಎಷ್ಟು ಜನ್ಮಕ್ಕೋ ಏನೋ ನೋಡುವುದು. ದಟ್ಟವಾದ ಅಡವಿಯ ಗುಂಪೊಂದು ನಮ್ಮ ಕೆಳಗೆ ವೇಗವಾಗಿ ಓಡುತ್ತಿತ್ತು. ಮತ್ತೆ ಭಾರಿ ಬೆಟ್ಟಗಳ ಸಾಲು ಕಾಣಿಸಿಕೊಂಡಿತು. ಯಾರೋ ಅಂದರು 'ಅದೋ ಹಿಮಾಲಯ ಪರ್ವತ' ಎಂದು. ಮತ್ತೊಬ್ಬರು ಉತ್ತರ ಕೊಟ್ಟರು 'ಹಿಂದೂಸ್ಥಾನದಲ್ಲಿ ಹಿಮಾಲಯವೆಲ್ಲಿ ಬಂತು. ಅದು ಆಲ್ಪ್ಸ್' ಎಂದು ಅದು ಆಲ್ಪ್ಸ್ ಪರ್ವತಗಳ ಸಾಲೋ ಅಥವಾ ಹಿಮಾಲಯದ ಶ್ರೇಣಿಯೋ ನನಗೆ ಬೇಕೆ ಅರ್ಥವಾಗಲಿಲ್ಲ ಚಿಕ್ಕಂದಿನಲ್ಲಿ ಸ್ಕೂಲಿನಲ್ಲಿ ಚೆನ್ನಾಗಿ ಓದಿದ್ದರೆ ಇದಾವುದು ಎಂಬುದನ್ನು ತಿಳಿಯುವ ಶಕ್ತಿಯುಂಟಾಗುತ್ತಿತ್ತೇ ಎಂದು ಚಿಂತಿಸಿದೆ.

"ಅಂತೂ ಯಾವುದೋ ಪರ್ವತಾವಳಿ ಸಾಗಿತ್ತು ನಮ್ಮ ವಿಮಾನ ಮತ್ತೆ ಮತ್ತೆ ಮೇಲೇರುತ್ತಿರುವಂತೆ ಭಾಸವಾಗುತ್ತಿತ್ತು ಹಲವಾರು ನಿಮಿಷಗಳಲ್ಲಿ ಕೆಳಗೆ ಏನಿದೆ ಎಂಬುದು ಕೂಡ ಕಾಣಿಸದಂತಾಯಿತು.

"ದಟ್ಟವಾದ ಮೋಡ ಕವಿದು ಬರುತ್ತಿರುವಂತೆ ಭಾಸವಾಯಿತು. ಮೋಡಗಳನ್ನು ಭೇದಿಸಿಕೊಂಡು ನಡೆದಿತ್ತು ನಮ್ಮ ಆರ್ ಎ. ಎಫ್ ವಾತನಾವೆ.

"ಅದೋ ಊರು, ಎಂದು ಯಾರೋ ಅಂದರು. ನಾನು ಅಚೆ ಮುಖ ತಿರುಗಿಸಿದ್ದವನು ಮತ್ತೆ ಕಿಟಿಕಿಯಲ್ಲಿ ನೋಡಿದೆ ನಿಜವಾಗಿಯೂ ಯಾವುದೋ ಊರೊಂದು ಕಾಣಿಸಿತು ನಮ್ಮ ವಿಮಾನ ಮತ್ತೆ ನಗರದ ಸಮೀಪದಲ್ಲಿ ಇಳಿಯುತ್ತಿರುವಂತೆ ಭಾಸವಾಯಿತು. ಒಳಗೆ ಕುಳಿತವರೆಲ್ಲ ಒಂದೇ ಸಮನೆ ನೆಟ್ಟ ನೋಟದಿಂದ ಕೆಳಗೇ ನೋಡುತ್ತಿದ್ದರು."

"ಅಲ್ಲ ಚೆಲುವರಾಜ, ಅಲ್ಲಿ ಮೂರು ವಿಮಾನಗಳು ಇದ್ದುವು. ಡಮ್ ಡಮ್ ನಿಲ್ದಾಣದಲ್ಲಿ ಎಂದು ಹೇಳಿದೆ. ಆದರೆ, ಎರಡು ವಿಮಾನಗಳು ಎತ್ತ ಹೊರಟವು?" ಎಂದು ಕುತೂಹಲದಿಂದ ಪ್ರಶ್ನಿಸಿದೆ.

"ಆ ಎರಡು ವಿಮಾನಗಳೂ ನಮ್ಮೊಡನೆಯೇ ಹೊರಟವು. ಒಂದರ ಹತ್ತಿರವೊಂದು ಹಾರಿ ಬರುತ್ತಿದ್ದುವು. ಮೂರು ನಾಲ್ಕು ವಿಮಾನಗಳು ಆಕಾಶದಲ್ಲಿ ಹಾರುವ ನೋಟ ನಿಜವಾಗಿಯೂ ರಮಣೀಯವಾದುದು.

"ಹೀಗೆ ಹಾರಿ ಬಂದ ನಮ್ಮ ಮೂರು ವಿಮಾನಗಳು ಚಿತ್ತಗಾಂಗ್ ವಿಮಾನ ನಿಲ್ದಾಣದಲ್ಲಿ ಬಂದಿಳಿದುವು. ನಾವೆಲ್ಲ ಕೆಳಗಿಳಿಯಲು ಆಜ್ಞೆ ಯಾಯಿತು."

"ಆಗ ಎಷ್ಟು ಗಂಟೆಯಾಗಿತ್ತು ?" ಎಂದು ಚಂದ್ರೂ ಪ್ರಶ್ನಿಸಿದ.

"೯ ಗಂಟೆಯಾಗಿತ್ತು. ಸೂರ್ಯ ಸೊಗಸಾಗಿ ಹೊಳೆಯುತ್ತಲಿದ್ದ. ಚಿತ್ತಗಾಂಗ್ ನಗರವನ್ನು ನಾವು ನೋಡಲು ಸಾಧ್ಯವಿದ್ದಿಲ್ಲ. ನಮ್ಮ ವಿಮಾನ ಇಳಿದು ಅರ್ಧ ಗಂಟೆಯ ನಂತರವೇ ನಾವು ಮತ್ತೆ ಅದೇ ವಿಮಾನ ಏರಬೇಕೆಂದು ನಮಗೆ ತಿಳಿಸಲಾಗಿತ್ತು

"ಯಾರಾದರೂ ಟೀ—ಕಾಫಿ ತೆಗೆದುಕೊಳ್ಳುವವರಿದ್ದರೆ ಅದನ್ನಿಷ್ಟು ಮುಗಿಸಲು ತಿಳಿಸಲಾಯಿತು. ಅಲ್ಲಿಯೇ ಟೀ ಕುಡಿದೆವು. ಇನ್ನೊಂದು ಆಶ್ಚರ್ಯದ ಸಂಗತಿಯೆಂದರೆ ನಮ್ಮ ವಿಮಾನದ ಜೊತೆಗೆ ಈಸಲ ಇನ್ನೂ ೬ ವಿಮಾನಗಳು ಹಾರಿ ಬರಲಿವೆಯೆಂದು ಗೊತ್ತಾಯಿತು. ಆ ವಿಮಾನ ಗಳೂ ಕೂಡ ನಾವು ಹೋಗುವ ದಿಕ್ಕಿನಲ್ಲಿಯೇ ಹೋಗುತ್ತವೆಂಬುದು ಮಾತ್ರ ತಿಳಿದಿತ್ತಷ್ಟೇ.

"ಚಿತ್ತಗಾಂಗ್ ಎಂಬುದು ಎಲ್ಲಿದೆ ಎಂದು ನನಗೆ ಬೇರೆ ಇನ್ನೂ ಅರ್ಥ ವಾಗಿಲ್ಲ. ನಕ್ಷೆಯಲ್ಲಿ ನೋಡುವ ತಿಳುವಳಿಕೆ ನನಗೆ ಇದ್ದಿದ್ದರೆ ಎಷ್ಟು ಚೆನ್ನಾಗಿತ್ತೆಂದು ಈಗ ಎನಿಸುತ್ತದೆ. ಹೋಗಲಿ. ಅರ್ಧಗಂಟೆಯಾಗುವು ದೆಷ್ಟು ಹೊತ್ತು. ಎಲ್ಲರೂ ವಿಮಾನವನ್ನೇರಿದೆವು.

"ಹಾರಿತು ನಮ್ಮೆಲ್ಲರನ್ನು ಹೊತ್ತ ಆ ಪುಷ್ಪಕ. ನಮ್ಮ ವಿಮಾನ ಗಳು ದೊಡ್ಡ ದೊಡ್ಡ ಹದ್ದುಗಳಂತೆ ಕಾಣುತ್ತಿದ್ದುವು. ಸಪ್ಪಳವೂ ವಿಪ ರೀತವಾಗಿ ಕೇಳ ಬರುತ್ತಿತ್ತು.

"ಡಮ್ ಡಮ್ ನಿಲ್ದಾಣದಲ್ಲಿ ನಾವೆಲ್ಲ ವಿಮಾನವೇರಿದಾಗ, ಅದು ಮೊದಲ ಬಾರಿಗೆ ಹಾರಿದಾಗ ಎಷ್ಟು ಆಶ್ಚರ್ಯ, ಕುತೂಹಲ, ಉಂಟಾ ಯಿತೋ ಅಷ್ಟು ಈ ಬಾರಿ ಆಗಲಿಲ್ಲ. ತಲೆಯಲ್ಲಿ ಮತ್ತೆ ಆಲೋಚನಾ ಲಹರಿ ಚಿಗುರಿತು.

"ಮನದ ಕಣ್ಣೆದುರು ನನ್ನ ಚೆಂದೂರು. ಆ ನನ್ನ ಮನೆ. ಆ ನನ್ನ ತೆಂಗಿಯುರು. ನಾನು ಅನೇಕ ಬಾರಿ ಬಿಸಿಲು ಹೊತ್ತಿನಲ್ಲಿ ಹೋಗಿ ಮಲಗು

ತ್ತಿದ್ದ ಆ ಗಾಳಿ ಹನುಮಂತರಾಯನ ದೇವಸ್ಥಾನ, ಆ ವರದಾ ನದಿ, ಆ ಗಿಡಗಳ ತೋಪು, ಆ ಹೊಲದ ಮುಂಬದಿಯ ಮಾವಿನ ಮರ, ತೋಟದ ಭಾವಿ, ಪೇರಲಕಾಯಿಯ ಗಿಡಗಳ ಆ ಮರಗಳ ಸಾಲು, ಚಿಗುರು ವೀಳೆಯ ದೆಲೆಯ ಆ ಬಳ್ಳಿಗಳು, ಗೌಡರ ತೋಟದ ಗೊರಟಗೆ, ಮಲ್ಲಿಗೆ ಹೂವಿನ ಬೇಟೆ, ಪ್ರೀತಿಯ ಓಣಿಯ ನಾಯಿ ಇನ್ನೂ ಎಷ್ಟೆಷ್ಟೋ ಸುಳಿದವು.

"ಕೋಪದಿಂದ ನನ್ನ ತಂದೆ ನನ್ನನ್ನು ಬೈದರು. ನನ್ನ ತಲೆಗೆ ದೊಣ್ಣೆಯೆತ್ತಿ ಹೊಡೆಯಲು ಬಂದರು. ನಾನು ಗಾಬರಿಯಾಗಿ 'ಹಾ' ಎಂದು ಚೀರಿ ಕೆಳಗೆ ಉರುಳಿದೆ. ನಾನು ಕುಳಿತದ್ದು ವಿಮಾನದ ಖುರ್ಚಿ ಯಲ್ಲಿ. ಹೊಟ್ಟೆಗೆ ಬಲವಾಗಿ ಪಟ್ಟಿಯನ್ನು ಬಿಗಿದುಕೊಂಡಿದ್ದೆ. ಅಂತೆಯೇ ನಾನು ಕೆಳಗೆ ಸರಿಯುವ ಭೀತಿಯಿರಲಿಲ್ಲ. ಎಚ್ಚರ ಬಂತು. ನೋಡಿದೆ. ನನ್ನ ಹಗಲುಗನಸಿಗಾಗಿ ಮರುಗಿದೆ. ಎಂಥ ಹುಚ್ಚುತನ ಇದು ಎಂದು ನನ್ನಷ್ಟಕ್ಕೆ ನಾನೇ ಅಂದುಕೊಂಡೆ.

"ವಿಮಾನ ಹಾರಿ ಹಾರಿ ತನಗೆ ಹಸಿವೇ ಇಲ್ಲವೆಂದು ತೋರಿಸು ತ್ತಿತು. ನಮ್ಮ ವಿಮಾನ ಈಗ ರಂಗೂನಿಗೆ ಹೋಗುತ್ತಿದೆ ಎಂದು ಹಲವರು ಮಾತನಾಡಿದ ಮಾತಿನಲ್ಲಿ ಗೊತ್ತಾಯಿತು. ರಂಗೂನ್ ಎಂದೊಡನೇ ನಮ್ಮ ಹೃದಯಗಳೆಲ್ಲ ಒಡೆದು ನೀರಾದವು. ಯಾಕೆಂದರೆ ರಂಗೂನ್‌ನಲ್ಲಿ ಜಪಾನಿ ಗಳು ಭಾರಿ ವಿಮಾನ ಧಾಳಿ ನಡೆಯಿಸುತ್ತಿದ್ದಾರೆಂಬ ವಿಷಯ ನಮಗೆ ಗೊತ್ತಾ ಗಿತ್ತು. ಅಲ್ಲದೆ ಜಪಾನಿಗಳ ಕ್ರೌರ್ಯದ ಬಗ್ಗೆ ನಮಗೆ ಅನೇಕಾನೇಕ ಕತೆಗಳು ಆಗಲೇ ಕೇಳ ಬಂದಿದ್ದವು. ಜಪಾನಿಗಳ ಸಮಾನ ಯಾವ ಯಮ ಧರ್ಮರಾಯನ ಸೃಷ್ಟಿಯೂ ಆಗಿಲ್ಲವೆಂದು ನಮಗೆ ತಿಳಿದಿತ್ತು. ಎಂಥ ಧೈರ್ಯಶಾಲಿಯೇ ಇದ್ದರೂ ಜಪಾನೀ ಸೈನಿಕರು ಅಧಿಕಾರಿಗಳ ಮಾತು ಕೇಳಿದರಾಯಿತು. ಥರಥರ ನಡುಗುತ್ತಿದ್ದರು.

"ನಮ್ಮ ವಿಮಾನಗಳು ಯಾವ ಜಪಾನಿಗೂ ಹೆದರೆವೆಂಬ ಧೈರ್ಯ ದಿಂದ ಮೈಲಿ ಗಟ್ಟಲೆ ಪ್ರದೇಶವನ್ನು ಹಿಂದೆ ಉಳಿಸಿ ಮುಂದೆ ಹೋಗುತ್ತಿ ದ್ದವು. ಕ್ಷಣಾರ್ಧದಲ್ಲಿಯೇ ಗಂಡಾಂತರವಿದೆ ಎಂಬ ಸೂಚನೆಯಾಯಿತು. ನಮ್ಮ ವಿಮಾನಗಳ ರಭಸದಿಂದ ಅತಿ ಮೇಲಕ್ಕೆ ಹಾರಿ ಹೋಗಹತ್ತಿದವು.

ನಮಗಾರಿಗೂ ಇದರ ಅರ್ಥವಾಗಲಿಲ್ಲ ಕೆಲಹೊತ್ತು ಅತಿ ಎತ್ತರದಲ್ಲೇ ಹಾರುತ್ತಿದ್ದು ಕೊನೆಗೊಮ್ಮೆ ಕೆಳಗಿಳಿಯಲು ನಿರ್ಧರಿಸಿದುವು

"ನಾವು ಮಿಂಗಲಡಾನ್ ವಿಮಾನ ನಿಲ್ದಾಣದಲ್ಲಿ ಬಂದಿಳಿದೆವು. ಅಲ್ಲಿಗೆ ಬಂದೊಡನೆ ನಮಗೆ ನಮ್ಮ ವಿಮಾನಗಳು ಆಕಾಶದಲ್ಲಿ ಮೇಲೆ ಮೇಲೆ ಹಾರಿದ ಕಾರಣ ತಿಳಿಯಿತು 'ಜಪಾನೀ ಬಾಂಬರುಗಳು ಬೆನ್ನಟ್ಟಲು ಬಂದು ಅದೇಕೋ ಹಿಂದಿರುಗಿದವು' ಇದೇ ಆ ಕಾರಣ ಮೊದಲೇ ಎದೆ ಗೆಟ್ಟಿದ್ದ ನನ್ನ ಎದೆ ಢಬಾ ಢಬಾ ಬಡಿದುಕೊಳ್ಳ ಹತ್ತಿತು

"ಎಲ್ಲರನ್ನೂ ಶಿಬಿರಕ್ಕೆ ಕರೆದೊಯ್ದರು. ಅಲ್ಲದೆ ಇಂದು ರಂಗೂನ್ ರಕ್ಷಣೆಗೆ ತೆರಳಬೇಕೆಂದು ನಮಗೆಲ್ಲ ಸೂಚಿಸಲಾಯಿತು "

"ನೀವು ಆಗಲೇ ರಂಗೂನಿಗೆ ಹೋಗಲಿಲ್ಲವೇ ?" ಎಂದು ಚಂದ್ರೂ ಪ್ರಶ್ನಿಸಿದ.

"ಆಗಲೇ ಅಂದರೇನು, ನಮಗೆ ಅಲ್ಲಿ ಒಂದು ಗಂಟೆ ಅವಕಾಶ ಕೊಡಲಾಗಿತ್ತು ಅನಂತರ ರಂಗೂನಿಗೆ ತೆರಳಬೇಕಾಗಿತ್ತು ಆ ಹೊತ್ತಿಗಾಗಲೇ ಬ್ರಿಟಿಷ್ ಸೈನಿಕ ಪಡೆ, ಆರ್ ಎ ಎಫ್ ಪಡೆ, ಗುರ್ಖಾ ಸೈನಿಕರ ತಂಡ ಎಲ್ಲವೂ ಶಸ್ತ್ರ ಸಜ್ಜಿತವಾಗಿ ಸಿದ್ಧವಾಗಿತ್ತು ಬಾಂಬರ್ ವಿಮಾನಗಳು ಯಾವ ದಿಕ್ಕಿನಿಂದ ಬರುತ್ತವೆ—ಬಂದ ಕೂಡಲೇ ಸಿಗನಲ್ ಗಂಟೆ ಹೇಗಾಗುತ್ತದೆ—ದಾಳಿಯಾಗುವ ಕಾಲದಲ್ಲಿ ಏನು ಮಾಡಬೇಕು. ಇತ್ಯಾದಿಗಳ ಬಗ್ಗೆ ಸಾಕಷ್ಟು ಶಿಕ್ಷಣವನ್ನು ನಮಗೆಲ್ಲ ಕೊಡಲಾಗಿತ್ತು ಆದರೆ ಜೀವದ ಅಂಜಿಕೆ ಹೇಗೆ ಹೋಗುತ್ತದೆ ?"

"ಅಲ್ಲ ಚೆಲುವರಾಜ್, ಸೈನ್ಯದಲ್ಲಿ ಸೇರಿದ ನಿನಗೂ ಅಂಜಿಕೆಯೇ?" ಎಂದು ನಾನು ಪ್ರಶ್ನಿಸಿದೆ.

"ನಿನಗೆ ತಿಳಿದಿಲ್ಲ ನೋಡು. ಅಲ್ಲಯ್ಯ ನಾನು ಸೈನ್ಯ ಸೇರಿದ್ದು ಶೌರ್ಯ ತೋರಿಸಿ ವಿಕ್ಟೋರಿಯಾ ಕ್ರಾಸ್ ದೊರಕಿಸಲಿಕ್ಕಿಲ್ಲ. ಎತ್ತಾದರೂ ಹೊಟ್ಟೆಪಾಡು ನಡೆದರೆ ಸಾಕು ಎಂದು. ನನ್ನ ಹಾಗೆಯೇ ಸುಮಾರು ನೂರಕ್ಕೆ ೫೦ ರ ಮೇಲ್ಪಟ್ಟು ಸೈನ್ಯ ಸೇರಿದವರ ಹಣೆಬರಹ ಇದೆ. ಇಲ್ಲದೆ ಹೋಗಿದ್ದರೆ ನಾವೆಲ್ಲ ಗುರ್ಖಾ ಸೈನಿಕರಂತೆ ಶೂರರಾಗಿದ್ದರೆ ಬ್ರಿಟಿಷರಿಗೆ ಈ ಯುದ್ಧ ಗೆಲ್ಲುವುದು ಇಷ್ಟು ತಡವಾಗಬೇಕಾಗಿತ್ತೆ ?

"ಇರಲಿ. ಮಿಲಿಟರಿ ಟ್ರಕ್ಕುಗಳು ಸಿದ್ಧವಾಗಿದ್ದುವು. ನಾವೆಲ್ಲ ಶಸ್ತ್ರಪಾಣಿಗಳಾಗಿ ಹೊರಟೆವು ಇನ್ನೂ ಊರಿಗೆ ತಲ್ಪಿರಲಿಲ್ಲ ಆಗಲೇ "ಸೈರ್ಪ" ಧ್ವನಿ ಕೇಳ ಹತ್ತಿತು. ಬಂತು ವಿಮಾನ ಧಾಳಿ ಎಂದು ನಿರ್ಧಾರವಾಯಿತು. ತಕ್ಷಣವೇ ನಾವೆಲ್ಲ ರಸ್ತೆಯ ಪಕ್ಕದಲ್ಲಿ ಮುಖ ಕೆಳಗೆ ಮಾಡಿ ಮಲಗಲು ಸಿದ್ಧರಾದೆವು. ಕಿವಿಯಲ್ಲಿ ಬಟ್ಟೆಯ ಸುರುಳಿ ಮಾಡಿ ಇಟ್ಟುಕೊಂಡು, ಬಾಯಲ್ಲಿ ಹ್ಯಾಂಡ್ ಕರ್‌ಚೀಫ್ ಇಟ್ಟುಕೊಂಡು ಮಲಗಿಬಿಟ್ಟೆವು

"ಮುಂದೆ ಒಂದೆರಡು ನಿಮಿಷಗಳಲ್ಲಿ "ಆಲ್ ಕ್ಲಿಯರ್" ಧ್ವನಿ ಕೇಳ ಬಂತು ಮತ್ತೆ ಎಲ್ಲರೂ ಎದ್ದು ಟ್ರಕ್‌ನಲ್ಲಿ ಹತ್ತಿ ಕುಳಿತೆವು ಆದರೆ, ನಮ್ಮ ಜೀವದಲ್ಲಿ ಜೀವವಿರಲಿಲ್ಲ"

"ನೀವು ಡಮ್ ಡಮ್‌ನಿಂದ ಹೊರಟಿರಲ್ಲ ಆ ಎಲ್ಲರೂ ನಿನ್ನ ಜೊತೆಗೆ ಇದ್ದರೋ ?" ಎಂದು ನಾನು ಕೇಳಿದೆ.

"ಅವರೆಲ್ಲರೂ ಇದ್ದರು ಇನ್ನೂ ಹೆಚ್ಚಾಗಿ ಆ ಆರು ವಿಮಾನದಲ್ಲಿ ಬಂದವರೂ ನಮ್ಮನ್ನು ಹಿಂಬಾಲಿಸಿದ್ದರು. ~~ಎಲ್ಲರೂ ರಂಗೂನ್ ತಲ್ಪಿದೆವು.~~ ಹಲವರನ್ನು ಹಲವು ದಿಕ್ಕಿಗೆ ಸಾಗಿಸಿದರು.

"ಅವರೆಲ್ಲರೂ ಇದ್ದರು. ಇನ್ನೂ ಹೆಚ್ಚಾಗಿ ಆ ಆರು ವಿಮಾನದಲ್ಲಿ ಬಂದವರೂ ನಮ್ಮನ್ನು ಹಿಂಬಾಲಿಸಿದ್ದರು. ಎಲ್ಲರೂ ರಂಗೂನ್ ತಲ್ಪಿದೆವು. ಹಲವರನ್ನು ಹಲವು ದಿಕ್ಕಿಗೆ ಸಾಗಿಸಿದರು.

"ಮಧ್ಯಾಹ್ನದ ಬಿಸಿಲು ಇಳಿಮುಖವಾಗುತ್ತಿತ್ತು. ರಂಗೂನ್ ನಗರದಲ್ಲಿ ಒಂದು ಬಗೆಯ ಗಾಬರಿ. ನಾಗರಿಕರೆಲ್ಲ ಹೌಹಾರಿ ಹೋಗಿದ್ದರು. ಯಾರ ಮಾತಿನಲ್ಲೂ ಭಯದ ಉಲ್ಲೇಖಗಳು. ಎಲ್ಲಿ ಜಪಾನೀ ವಿಮಾನಗಳು ಬರುತ್ತವೋ ಬಾಂಬು ಹಾಕಿ ಜನಗಳನ್ನು ಕೊಲ್ಲುತ್ತವೋ ಎಂಬ ಭೀತಿ.

"ಸರಿ ಮತ್ತೆ ಮರಣದ ರಣ ರಹಳೆಯಂತೆ ಕೇಳಬಂತು ಸೈರನ್ ಸದ್ದು. ಜನರೆಲ್ಲ ಭಯಾಕ್ರಾಂತರಾಗಿ ಅತ್ತಿತ್ತ ಓಡಲಾರಂಭಿಸಿದರು. ಎಷ್ಟು ಭಾರಿ ಹೇಳಿದರೂ ಒಳಗಡೆ ಅವಿತುಕೊಳ್ಳುವುದನ್ನು ಅವರು ಲಕ್ಷಿಸಲೇ ಇಲ್ಲ.

"ಜಪಾನೀ ವಿಮಾನಗಳು ಬಂದವು, ಬಂದವು ಎಂದು ಕೂಗಿದ ಸದ್ದು ಕೂಡ ಕೇಳ ಬಂತು. ಈ ವಾರ್ತೆ ಬಂದುದೇ ತಡ ಸಿಡಿಲಿನ ಸದ್ದಾಯಿತು. ಮಿಂಚು ನೂರುಸಟ್ಟು ಶಕ್ತಿ ತಾಳಿ ಒಮ್ಮೆಗೆ ಸಳಕ್ಕನೆ ಮಿಂಚಿದಂತಾಯಿತು.

"ಕರ್ಣ ಪಟಲ ಹರಿಯುವಂತಾಯಿತು. ನಮ್ಮಲ್ಲಿ ಅನೇಕರು ಕಿವುಡಾದರು. ಬಹಳ ಹೊತ್ತು ನನಗೂ ಏನೂ ಕೇಳದಾಯಿತು.

"ಜಪಾನೀ ವಿಮಾನಗಳನ್ನು ನೋಡಿದ್ದು ಅಂದೇ ಮೊದಲು. ಸೂರ್ಯಚಿತ್ರವನ್ನು ಧರಿಸಿದ ಆ ಚಿಕ್ಕ ಚಿಕ್ಕ ವಿಮಾನಗಳು. ಏಳೆಂಟು ವಿಮಾನಗಳು ಒಂದೆ ಸಮನೆ ಬಾಂಬು ಸುರಿಸಿದುವು. ಅನೇಕ ಕಟ್ಟಡಗಳು ಧಗದ್ಧಗಿಸಿದುವು. ಸಹಸ್ರಗಟ್ಟಲೆ ನಾಗರಿಕರು ಹೌಹಾರಿ ಚೀರಿಕೊಂಡರು.

"ನಾವೆಲ್ಲ ಟ್ರೆಂಚಿನಲ್ಲಿ ಅವಿತುಕೊಂಡಿದ್ದೆವು ಸುಮಾರು ಒಂದು ಗಂಟೆಕಾಲ ಆಚೆ ಈಚೆ ಕೈಕಾಲುಗಳನ್ನು ಸಡಿಲಿಸದೆ ಹಾಗೇ ಪ್ರಾಣವಿಲ್ಲದ ದೇಹಗಳಂತೆ ಬಿದ್ದುಕೊಂಡಿದ್ದೆವು.

"ಎರಡು ಗಂಟೆಯಾದರೂ ನಮ್ಮ ತಲೆಯನ್ನು ಮೇಲಕ್ಕೆತ್ತುವುದು ಸಾಧ್ಯವಿರಲಿಲ್ಲ. ಅರ್ಧ ಸತ್ತಂತಾಗಿತ್ತು ನಮ್ಮ ಸ್ಥಿತಿ. ಯಾರೂ ಗಟ್ಟಿಯಾಗಿ ಉಸಿರಾಡಲು ಧೈರ್ಯ ತಂದುಕೊಳ್ಳಲಿಲ್ಲ.

"ಬಾಂಬು ಹಾಕುವುದು ಹೇಗೆ? ಬಾಂಬು ಹೇಗಿರುತ್ತದೆ? ಜಪಾನೀ ವೈಮಾನಿಕರು ನಿಮಗೆ ಕಾಣಿಸುತ್ತಿದ್ದರೆ? ಎಷ್ಟು ಎತ್ತರದಲ್ಲಿ ಜಪಾನೀ ವಿಮಾನಗಳು ಬರುತ್ತಿದ್ದವು? ಕೇವಲ ಸಮೀಪಕ್ಕೆ ಬಂದೇ ಜಪಾನಿಗಳು ಬಾಂಬು ಹಾಕಿ ಮತ್ತೆ ಮೇಲೇರಿ ಹೋಗುತ್ತಿದ್ದರಂತಲ್ಲ" ಎಂದು ಚಂದ್ರೂ ನಡುವೆ ಕೇಳತೊಡಗಿದ.

"ಹೌದು. ಜಪಾನಿಗಳು ಪ್ರಾಣದ ಹಂಗು ದೊರೆದು ಎಷ್ಟು ಕೆಳಗೆ ಬೇಕು ಅಷ್ಟು ಬರುತ್ತಾರೆಂದು ನಮಗೆ ಆಗ ತಿಳಿದಿರಲಿಲ್ಲ ಮುಂದೆ ಇಂಥವೇ ಹಲವಾರು ಬಾಂಬು ಧಾಳಿಗಳನ್ನು ಪ್ರತ್ಯಕ್ಷ ಕಂಡಾಗ ನಮಗೆ ನಿಜವೆನಿಸಿತು.

" ನೀವು ನೂರಾರು ಧಾಳಿಗಳನ್ನು ಕಣ್ಣಾರ ಕಂಡಿರಾ? " ಎಂದ ಚಂದ್ರೂ ಮತ್ತೆ ಆಶ್ಚರ್ಯದಿಂದ ಕೇಳಿದ.

“ಇದೇನು ಆಶ್ಚರ್ಯ ಪಡಬೇಕಾದ ವಿಷಯವಲ್ಲ. ನಾವು ಇದ್ದದ್ದು ಪ್ರತ್ಯಕ್ಷ ರಣಭೂಮಿ, ರುದ್ರಭೂಮಿ, ಪ್ರತಿ ನಿಮಿಷಕೊಮ್ಮೆ ಎಲ್ಲಿ ಏನಾಗುತ್ತದೋ ಎಂಬ ಭಯ. ಎಷ್ಟು ಧೈರ್ಯ ತಂದುಕೊಂಡರು ಎದೆ ಝಲ್ಲೆನ್ನುತ್ತಿತ್ತು

“ನಾವೆಲ್ಲ ಹೇಗೆ ವರ್ತಿಸಬೇಕೆಂಬ ಬಗ್ಗೆ ಆಗಾಗ ತಿಳಿಯ ಹೇಳುವ ಕಾರ್ಯವನ್ನು ನಮ್ಮ ಮೇಲಧಿಕಾರಿಗಳು ಸಾಗಿಸಿಯೇ ಇದ್ದರು ಒಂದು ದಿನ ಧಾಳಿಗೆ ಸಿಕ್ಕರೆ ಸಾಕು, ನಮಗೆಲ್ಲ ಆ ಧಾಳಿಯಿಂದ ಕಲಿಯ ಬೇಕಾದ ಪಾಠಗಳನ್ನು ಅವರು ಕಲಿಸುತ್ತಿದ್ದರು.”

“ಅಂದು ರಂಗೂನ್ ಮೇಲೆ ದಾಳಿಯಾಯಿತಲ್ಲಾ ? ಎಷ್ಟೊತ್ತಿಗೆ ಆಯಿತು ಅಂದು ತಾರೀಕೆಷ್ಟು ? ” ಎಂದು ನಾನು ಕೇಳಿದೆ.

“ರಂಗೂನ್ ಮೇಲೆ ದಾಳಿಯಾದದ್ದು ನನಗೆ ನೆನಪಿದ್ದಮಟ್ಟಿಗೆ ೧೯೪೨ ನೇ ಇಸವಿಯ ಜನವರಿ ೨೩ನೇ ತಾರೀಖು, ಅಂದು ಹಚ್ಚ ಹಗಲೇ ದಾಳಿಯಾದದ್ದು

“ಮಧ್ಯಾಹ್ನ ಇನ್ನೂ ೨ ಗಂಟೆಯಾಗಿರಲಿಲ್ಲ “ಸೈರನ್” ಹೊಡೆದು ಕೊಳ್ಳಲಾರಂಭಿಸಿದವು. ಸರಿ. ನಾನು ಆಗಲೇ ಹೇಳಿದಂತೆ ಬಾಂಬುಗಳು ಬಿದ್ದುವು.

“ಪ್ರಚಲಿತಯುಗದಲ್ಲಿ ಒಂದು ದೃಷ್ಟಿಯಿಂದ ಬದುಕದಿರುವುದೇ ಮೇಲೆನಿಸುತ್ತದೆ. ಈ ವಿಚಾರ ನನಗೆ ರಂಗೂನ್ ಬೀದಿಯಲ್ಲಿ ನಾನು ಕಂಡ ದುರಂತ ನೋಟಗಳನ್ನು ನೋಡಿ ಬಂದಿತು.

“ಬಾಂಬುದಾಳಿ ಏನು ಮಾಡುವುದೆಂಬುದನ್ನು ನಾನು ನನ್ನ ಈ ನೀರಸ ಶಬ್ದಗಳಲ್ಲಿ ಹೇಳಲಾರೆ. “ಆಲ್ ಕ್ಲಿಯರ್” ಧ್ವನಿಯಾದ ಮೇಲೆ ನಾವೆಲ್ಲ ಊರ ಬೀದಿಗಳಲ್ಲಿ ಹೊರಟೆವು. ಯಾವ ದಿಕ್ಕಿನಲ್ಲಿ ಮುಖ ತಿರುಗಿಸಲಿ ಕರ್ಣ ಕರ್ಕಶವಾದ ಆರ್ತನಾದ. ಎಷ್ಟೋ ಜನ ಎದೆ ಎದೆ ಬಡಿದುಕೊಳ್ಳುವರು ; ಅನೇಕ ಕಡೆಗಳಲ್ಲಿ ಜನಗಳ ಗುಂಪೇ ಗುಂಪು, ಮತ್ತೊತ್ತಟ್ಟಿಗೆ ಬೆಂಕಿಗಾಹುತಿಯಾದ ದೊಡ್ಡ ದೊಡ್ಡ ಕಟ್ಟಡಗಳು ; ಹೊಗೆ ಆಕಾಶಕ್ಕೆ ಮುದ್ದಿಡಲು ಹೊರಟ ದೃಶ್ಯ ; ರೆಡ್‌ಕ್ರಾಸ್ ಸಂಸ್ಥೆ

ಯುವರ ಉಸ್ತುವಾರಿ ; ಸಹಾಯಕ ಪಡೆಯ ಕಾರ್ಯ ತತ್ಪರತೆ ; ಸೈನಿಕ ತಂಡದವರು " ಫೈರ್ ಫೈಟರ್ " ಹಿಡಿದು ಬೆಂಕಿಯನ್ನು ಉಪಶಮನಗೆಯ್ಯುವ ರೀತಿ ; ಇನ್ನೂ ಎಷ್ಟೆಷ್ಟೋ ರುದ್ರನೋಟಗಳು. ಅಬ್ಬಾ ಕರುಳು ಹಿಸುಕಿಕೊಳ್ಳುವಂಥ ನೋಟ !

" ನನ್ನ ಮಿತ್ರರ ಪಡೆಯೊಂದಿಗೆ ನಾನು ಹೊರಟಿದ್ದೆ. ನಮ್ಮನ್ನು ಆ ಗಂಡಾಂತರ ಸಮಯದಲ್ಲೂ ಟ್ರಕ್ಕಿನಲ್ಲಿ ಕರೆದೊಯ್ದರು. ನಗರದ ನೂರಾರು ಕಡೆಗಳಲ್ಲಿ ಕಟ್ಟಡಗಳು ಉರಿಯುತ್ತಿದ್ದವು. ಅಸಂಖ್ಯಾತ ಜನ ಬೀದಿಯಲ್ಲಿ ಸತ್ತು ಬಿದ್ದಿದ್ದಾರೆಂಬ ವಾರ್ತೆ ನಮಗೆ ಬಂದಿತ್ತು. ಈ ಗಂಡಾಂತರವನ್ನೆಲ್ಲ ಕಣ್ಣಾರೆ ನೋಡುವುದು ಹೇಗಪ್ಪಾ ಎಂದು ಚಿಂತಿಸುತ್ತಿರುವಾಗಲೇ ನಮ್ಮ ಟ್ರಕ್ ನಿಂತಿತು. ನಾವೆಲ್ಲ ಕೆಳಗಿಳಿದೆವು ; ಇದಿರು ನೋಡುತ್ತೇವೆ ನಮ್ಮ ಎದೆ ಧಸಕ್ಕೆಂದಿತು "

" ಏನು ? ಏನಿತ್ತು ಅಲ್ಲಿ ? ಏನಾಗಿತ್ತು ? " ಎಂದು ಕೇಳಿದೆ.

" ಭಾರಿ ಕಟ್ಟಡವೊಂದು ಕರಾಳ ಅಗ್ನಿಗೆ ತುತ್ತಾಗಿದೆ. ಮೂರಂತಸ್ತಿನ ಸುಂದರ ಭವನವದು. ಎಷ್ಟು ಜನ ಹೆಂಗಸರು ಮಕ್ಕಳಿದ್ದರೋ ಒಳಗೆ ! ಉರಿ ಹೆಚ್ಚುತ್ತಲೇ ಇತ್ತು. ಫೈರ್ ಫೈಟರ್‌ನವರು ತಮ್ಮ ಕೈಲಾದದ್ದನ್ನೆಲ್ಲ ಮಾಡುತ್ತಿದ್ದರು.

" ಕಟ್ಟಡಗಳಲ್ಲೇ ಅನೇಕರು ಅರೆಬೆಂದು ಹೋಗಿದ್ದರು. ಹಲವು ದೇಹಗಳನ್ನು 'ರೆಡ್‌ಕ್ರಾಸಿನವರು ಹೊರತಂದು ಪ್ರಥಮ ಚಿಕಿತ್ಸೆ ನಡೆಯಿಸುತ್ತಿದ್ದರು. ಆ ಗಾಯಾಳುಗಳ ಸುತ್ತೆಲ್ಲ ಅಪರಿಮಿತ ಜನ. ಎಲ್ಲರ ಮುಖದಲ್ಲೂ ಕಣ್ಣೀರು ; ಗಾಬರಿಯ ತಾಂಡವ. ಮಾತನಾಡಲು ಹೋದವರಿಗೆ ಬಾಯಿಕೂಡ ಬಾರದು.

" ಇನ್ನೊಂದು ಕಡೆಗೆ ಸಾಗಿದೆವು. ಬೀದಿಯಲ್ಲೆಲ್ಲ ಹೆಣಗಳು ಅಸ್ತವ್ಯಸ್ತವಾಗಿ ಬಿದ್ದಿವೆ. ತಲೆ ಇದ್ದರೆ ಕಾಲಿಲ್ಲ. ಕೈಯಿದ್ದರೆ ತಲೆಯಿಲ್ಲ. ಅಬ್ಬಾ ಅದನ್ನು ನೋಡುವುದೇ ಸಾಧ್ಯವಿಲ್ಲದ ಮಾತು.

" ಈ ದೃಶ್ಯಗಳನ್ನು ಹೇಗಾದರೂ ನೋಡಬಹುದು; ಆದರೆ ಹೆಂಡಿರು ಮಕ್ಕಳನ್ನು ಕಳೆದುಕೊಂಡವರ, ತಂದೆ ತಾಯಿಗಳನ್ನು ಕಳೆದುಕೊಂಡವರ,

ಅಣ್ಣ ತಮ್ಮಂದಿರನ್ನು ಕಳಿದುಕೊಂಡವರ; ಕಯ್ಯಾರ ಕಟ್ಟಿದ ಮನೆಯನ್ನು ಕಳೆದುಕೊಂಡವರ ಸ್ಥಿತಿಯನ್ನು ನೋಡಲಾಗಿಲ್ಲ. ಅವರ ಧ್ವನಿಯನ್ನು ಕೇಳಿದ ಮೇಲಂತೂ ನಮಗೆಲ್ಲ ಪ್ರಾಣವೇ ಹಾರಿದಂತಾಯಿತು.

" ಮತ್ತೊಂದು ಕಡೆಗೆ ಸಾಗಿದೆವು. ಈ ವರೆಗೆ ನೋಡಿದ ಎಲ್ಲ ದೃಶ್ಯಗಳನ್ನು ಮೀರಿಸಿತ್ತು ಆ ನೋಟ. ಪರದೇಶಿಯಾದ ಸುಮಾರು ೪ ವರ್ಷದ ಹೆಣ್ಣುಮಗುವೊಂದು ತನ್ನ ತಾಯಿಯ ಮೃತದೇಹದ ಹತ್ತಿರ ನಿಂತು ಒಂದೇ ಸಮನೆ ಅಳುತ್ತಿತ್ತು. ತಾಯಿಯ ದೇಹ ಸುಟ್ಟುಹೋಗಿತ್ತು. ಬರಿ ಮಾಂಸದ ಮುದ್ದೆ. ಯಾರು ಹೇಳಿದರೋ ಆ ಮಗುವಿಗೆ ಈ ಮಾಂಸದ ಮುದ್ದೆ ತನ್ನ ತಾಯಿಯೆಂದು. ಮಾತಿಗೊಮ್ಮೆ ಹೇಳುತ್ತಿತ್ತು 'ಏಳಮ್ಮ ಏಳು; ಎಷ್ಟು ಜನ ಸೇರಿದ್ದಾರೆ ನೋಡು. ನಾನೆಲ್ಲಿ ಮಲಗ ಬೇಕಮ್ಮ! ನನಗೆ ತುಂಬ ಹಸಿವು. ತಿಂಡಿಕೊಡು ಅಮ್ಮ. ಯಾಕೆ ಮಾತನಾಡುತ್ತಿಲ್ಲವಲ್ಲಮ್ಮ? ಹೋಗಮ್ಮ ನಾನೇನು ಮಾಡಿದೆನಮ್ಮ" ಎಂದು ಒಂದೇ ಸಮನೆ ಅಂಗಲಾಚುತ್ತಿತ್ತು.

" ನಮ್ಮ ಕರುಳುಗಳು ಮುದ್ದೆಯಾದವು. ಅಯ್ಯೋ ಪಾಪವೇ! ಎಂದು ನಿಟ್ಟುಸಿರುಹಾಕಿ ಮುಂದೆ ಸಾಗಿದೆವು. ಎತ್ತಕಡೆಗೆ ಹೋದರೂ ಇಂಥ ಭೀಕರ ದೃಶ್ಯಗಳೇ. ಬರಿಯ ಆರ್ತನಾದ, ಕೋಲಾಹಲ, ಚೀತ್ಕಾರ, ಶಾಂತಿ, ನೆಮ್ಮದಿಗಳೆಲ್ಲ ಎತ್ತೋದೋ ಹಾರಿಹೋಗಿದ್ದವು.

" ಬಾಂಬುದಾಳಿ ಒಂದು ಬಾರಿ ನಡೆದರೆ ಅದರಿಂದಾದ ನಾಶ ವರ್ಣ ನಾನೀತ. ನಾವೆಲ್ಲ ಹಲವಾರು ಕಡೆಗಳಲ್ಲಿ ಸುತ್ತಿಕೊಂಡು ದೂರದ ಮೂಲೆ ಯಲ್ಲಿ ಒಂದು ಕಡೆಗೆ ಸ್ವಲ್ಪ ವಿಶ್ರಾಂತಿಗಾಗಿ ಕುಳಿತೆವು.

" ಟೀ ಕುಡಿಯಲು ಕೂಡ ವೇಳೆ ಸಿಕ್ಕಲಿಲ್ಲ. ಈ ಬಗೆಯ ದುರಂತ ದೃಶ್ಯಗಳನ್ನು ನೋಡಿದ ನಮ್ಮ ಮನಕ್ಕೆ ತಿಂಡಿ, ಊಟ, ಏನೂ ಬೇಡವೆನ್ನಿ ಸಿತು. ಆದರೆ ನಾವು ಮಿಲಿಟರಿಯಲ್ಲಿದ್ದವರು. ಏನಿದ್ದರೂ ನಮಗೆ ಎಲ್ಲ ಸೌಕರ್ಯ ದೊರೆತದ್ದು ಭಾಗ್ಯ ಅಶ್ಚರ್ಯವಲ್ಲ.

" ವಿಶ್ರಾಂತಿಯನ್ನು ಅನುಭವಿಸಲು ಮನಸಿಲ್ಲದಿದ್ದರೂ ನಿರ್ವಾಹ ವಿಲ್ಲದೆ ಕಾಲವನ್ನು ನೂಕಲು ನಾವು ಅಣಿಯಾದಾಗ ಮತ್ತೊಮ್ಮೆ

ಜಪಾನೀ ವಿಮಾನಗಳ ಸದ್ದು ಕೇಳಬಂತು. ಎದೆಯೊಡೆದು ನೀರಾಯಿತು. ದಾಳಿಯ ಮರ್ಸೂಚನೆಯಾಗುವ ಪೂರ್ವದಲ್ಲಿಯೇ "ಸೂರ್ಯ" ಸಾಮ್ರಾಜ್ಯದ ವಿಮಾನಗಳು ವೇಗ ವೇಗವಾಗಿ ಹಾರಿ ಬರುತ್ತಿದ್ದುದು ಕಂಡು ಬಂತು.

"ಆ ವಿಮಾನಗಳ ಸದ್ದು ಕೇಳುವುದೊಂದೇ ಬಾಕಿ ರಂಗೂನಿನ ಜನವೆಲ್ಲ ಮತ್ತೊಮ್ಮೆ ಹೌಹಾರಿದರು ಈ ಬಾರಿಯಂತೂ ಅಲ್ಲಿನ ಆ ಆರ್ತನಾದವನ್ನು ಕೇಳುವುದು ತೀರ ಅಸಾಧ್ಯವಾಯಿತು.

"ವಿಮಾನಗಳು ತೀರ ಹತ್ತಿರ ಬಂದವು. ನಮ್ಮ ಶಕ್ತಿ, ಉತ್ಸಾಹ, ಆಶೆ ಎಲ್ಲ ಕಾದ ಹಂಚಿನ ಮೇಲೆ ಸುರಿದ ನೀರ ಪನಿಯಾದುವು. ಆದರೆ ಎಷ್ಟು ಅಧೈರ್ಯ ಅಂತರಂಗವನ್ನು ಆವರಿಸಿದ್ದರೂ ಬಂದ ಗಂಡಾಂತರಕ್ಕೆ ತಲೆಕೊಡದೆ ಗತ್ಯಂತರವಿರಲಿಲ್ಲ

"ಒಮ್ಮೆಗೇ 'ಸೈರನ್' ಗಳು ಘೋರ್ಗರೆಯಲಾರಂಭಿಸಿದುವು. ನಗರದ ಅಸ್ತವ್ಯಸ್ತ ಸ್ಥಿತಿ ಮೇರ್ಲ್ಮಟ್ಟವನ್ನು ಮುಟ್ಟಿತು. ಸೈನಿಕರೆಲ್ಲ ಸಿಕ್ಕ ಟ್ರೆಂಚುಗಳಲ್ಲಿ ಮತ್ತೆ ಅವಿತುಕೊಂಡರು. ರೆಡ್‌ಕ್ರಾಸ್‌ನವರು ತಮ್ಮ ಕಾರ್ಯಗಳಿಗೆ ಸಿದ್ಧರಾದರೆಂದು ತೋರುತ್ತದೆ.

"ಎರಡು ನಿಮಿಷಗಳು ಕಳೆದುವು. ಆದರೆ ಈ ಸಲ ಬಂದ ವಿಮಾನ ಗಳು ಜಪಾನೀ ವಿಮಾನಗಳಲ್ಲವೆಂಬುದು ಆಮೇಲೆ ತಿಳಿದು ಬಂತು. ಮತ್ತೆ 'ಆಲ್‌ಕ್ಲಿಯರ್' ಶಬ್ದ.

"ಈ ರೀತಿಯ ಭಯಾಕ್ರಾಂತ ಪರಿಸ್ಥಿತಿಯಲ್ಲಿ ಒಂದು ದಿನವನ್ನು ನೂಕುವುದೇ ಅಸಾಧ್ಯವಾಗಿ ತೋರಿದಾಗ ಇದೇ ರೀತಿಯಲ್ಲಿಯೇ ತಿಂಗಳ್ಗ ತಿಂಗಳು ವರ್ಷಗಳು ನಡೆದರೆ ಗತಿ ಏನು ಎಂಬು ನನ್ನ ಯೋಚನೆಗೆ ಕೊಂಚ ಕೊನರೊಡೆಯಿತು.

"ಪಕ್ಕದ ಸಿಪಾಯಿ ಹೇಳಿದ 'ಇಲ್ಲಿಂದ ಬದುಕಿ ಹೋಗುವುದು ಎಂಥ ಮಾತೋ ? ಸಾವು ನಮ್ಮನ್ನು ಇನ್ನೆಷ್ಟು ದಿನ ಉಳಿಸುತ್ತದೋ ನಾ ಬೇರೆ ಕಾಣೆ' ಅದಕ್ಕೆ ಮತ್ತೊಬ್ಬ 'ಸಾವು ಎಲ್ಲಿದ್ದರೂ ಬರುತ್ತೆ; ಆದರೆ ಯುದ್ಧ ಭೂಮಿಯಲ್ಲಿ ಸತ್ತವರಿಗೆ ಸ್ವರ್ಗವೇ ಸಿಕ್ಕುವುದಂತೆ.' ಏನು

ಸ್ವರ್ಗವೋ ಏನು ಪಾತಾಳವೋ ನಾವು ಅನುಭವಿಸುವುದು ಮಾತ್ರ ಪ್ರತ್ಯಕ್ಷ ನರಕ ಎಂದು ನಾನು ನುಡಿಗೊಟ್ಟೆ.

" ನಾವೆಲ್ಲ ನಮ್ಮ ಕ್ಯಾಂಪಿನ ಕಡೆಗೆ ಹೋಗಲು ಆಜ್ಞೆಯಾಯಿತು. ಈ ಹೊತ್ತಿಗಾಗಲೇ ಸಾಯಂಕಾಲದ ಸೂರ್ಯ ಮರೆಯಾಗಿ ಹೋಗಿದ್ದ ವಿಶಾಲ ಗಗನದಲ್ಲಿ ಚುಕ್ಕೆಗಳ ಹಿಂದುಬಂದು ನೆರೆಯುತ್ತಿತ್ತು. ಒಮ್ಮೆ ಇಂದ್ರನ ಅಮರಾವತಿಯಂತೆ ಮೆರೆದು, ಕಣ್ಣಿಗೆ ಹಬ್ಬವನ್ನುಂಟುಮಾಡು ತ್ತಿದ್ದ ರಂಗೂನ್ ನಗರ ಅಗ್ನಿಗೆ ತುತ್ತಾಗಿ, ಬಾಂಬಿಗೆ ಈಡಾಗಿ ಸ್ಮಶಾನ ಸದೃ ಶವಾದುದನ್ನು ಕಂಡು ಆಶ್ಚರ್ಯವನ್ನು ವ್ಯಕ್ತಪಡಿಸುತ್ತಿರುವಂತೆ ನಕ್ಷತ್ರ ಗಳು ಪಿಳಪಿಳನೆ ಕಣ್ಣು ಬಿಡುತ್ತಿದ್ದವು

" ಕ್ಯಾಂಪಿನತ್ತ ಸಾರುತ್ತಿದ್ದಾಗ ಗಾಳಿ ಬೀಸುತ್ತಲೇ ಇತ್ತು. ಊರ ಕಡೆಗೆ ಹಿಂದಿರುಗಿ ನೋಡಿದೆವು ಕಟ್ಟಡಗಳಿಂದ ಉರಿಹಾಗೇ ಚಿಮ್ಮಿ ಚಿಮ್ಮಿ ಆಕಾಶಕ್ಕೆ ನೆಗೆಯುತ್ತಿತ್ತು ಗಾಳಿಯಿಂದ ಉರಿ ಕಡಮೆಯಾಗುವು ದರ ಬದಲು ಇನ್ನು ಪ್ರಜ್ವಲಿತವಾಗುತಲಿತ್ತು

" ಲಂಡನ್ನಿನ ಮೇಲೆ ಒಂದೇ ಸಮನೆ ಬಾಂಬು ದಾಳಿಯಾಗುತ್ತಿದೆ ಎಂಬುದನ್ನು ಪತ್ರಿಕೆಯೋದುವವರಿಂದ ಕೇಳಿದ್ದೆ. ಬಾಂಬು ದಾಳಿಯೆಂದ ರೇನೆಂಬುದನ್ನು ಪ್ರತ್ಯಕ್ಷವಾಗಿ ಕಂಡೆ. ಆಗ ನನಗೆ ಲಂಡನ್ನಿನ ನಾಗರಿಕರ ಕಷ್ಟ, ತ್ಯಾಗ, ಸಹಿಷ್ಣುತೆ ಎಂಥದೆಂಬುದು ತಿಳಿಯಬಂತು.

" ಇನ್ನೂ ಎಷ್ಟೆಷ್ಟೋ ಯೋಚನಾತರಂಗಗಳು ತಾವೇ ತಾವಾಗಿ ಸುಳಿಯುತ್ತಿದ್ದವು. ನನ್ನ ಜೊತೆಗಾರರೆಲ್ಲ ತೀರದಣಿದಂತೆ ತೋರಿಬಂದರು. ಅವರಿಗೂ ಮಾತು ಬೇಡವಾಗಿತ್ತು. ಸ್ವಲ್ಪ ಆಹಾರ ತಿಂದು ಹಾಸಿಗೆಗೆ ಬೆನ್ನು ಹಚ್ಚಿದರೆ ಸಾಕು ಎಂದೆನಿಸಿ ಹೋಗಿತ್ತು.

" ಕ್ಯಾಂಪಿಗೆ ಬಂದು ಆಹಾರ ಸ್ವೀಕರಿಸಿದ್ದಾಯಿತು. ಬ್ರೆಡ್ಡು ಗಂಟ ಲಲ್ಲಿಳಿಯಲಿಲ್ಲ. ನೀರು ಕುಡಿಯಹೋದರೆ ಅದೂ ಬೇಡವಾಯಿತು. ನಿರ್ವಾಹವಿಲ್ಲದೆ ಬಿಸಿಬಿಸಿ ಟೀ ಯನ್ನು ಮಾತ್ರ ಕುಡಿದೆ. ಎದೆ ಆಗಾಗ ಜೋರಿನಿಂದ ಹಾರುತ್ತಿತ್ತು.

"ರಾತ್ರಿ ೧೦ ಘಂಟೆಯಾಗಿರಬೇಕು. ನಾವು ಮಲಗಿಕೊಳ್ಳುವ ಸಿದ್ಧತೆಯಲ್ಲಿದ್ದೆವು. ಆದರೆ ನಮಗೆಲ್ಲ ನಮ್ಮ ಶಿಬಿರದ ಮುಖ್ಯಾಧಿಕಾರಿಗಳಿಂದ ಕರೆ ಬಂದಿತ್ತು. ಎಲ್ಲರೂ ಎದ್ದು ಹೋದೆವು. ರಂಗೂನ್ ಮೇಲಾದ ಧಾಳಿಯ ವಿವರಗಳನ್ನೆಲ್ಲ ಅವರು ತಿಳಿಸಿದರು. ಅಲ್ಲದೆ ಸಾರ್ವಜನಿಕರು ಎಷ್ಟು ಹೇಳಿದರೂ ಕೇಳದೆ ಬಾಗಿಲಲ್ಲಿ ಬಂದು ಬೀದಿಯಲ್ಲಿ ಕಲೆತು ತಮಾಷೆನೋಡಲು ಬಂದುದರಿಂದಲೇ ಅಂಥ ಭಾರಿ ಅಪಾಯವಾಗಲು ಕಾರಣವಾಯಿತೆಂದು ತಿಳಿಸಿದರು. ಅಲ್ಲದೆ ನಮ್ಮ ಶಿಬಿರದಲ್ಲಿ ಎರಡು ತಂಡಗಳನ್ನು ಸಿಂಗಾಪುರಕ್ಕೆ ಕಳಿಸುವ ಏರ್ಪಾಡು ಮಾಡಲಾಗುತ್ತಿದೆಯೆಂದು ತಿಳಿಸಲಾಯಿತು.

"ಮತ್ತೆ ನಮ್ಮ ನಮ್ಮ ಸ್ಥಳಗಳಿಗೆ ನಾವು ಹಿಂದಿರುಗಿ ಬಂದೆವು. ನನ್ನ ಪಕ್ಕದಲ್ಲಿಯೇ ಹಾಸಿಗೆ ಹಾಕಿದ ಶೀಖ್ ಸಿಪಾಯಿ ಹೇಳಿದ 'ಅದೇಕೆ ನೀನು ತುಂಬ ಅಂಜಿದ ಹಾಗೆ ಕಾಣಿಸುತ್ತೀಯೆ, ನಾವೆಲ್ಲ ಇರುವಾಗ ನಿನಗೇಕೆ ಇಷ್ಟು ಭೀತಿ ? ಸಾವು ಬದುಕಿಗಾಗಿ ಮಾನವಜೀವ ಇಷ್ಟು ಅಂಜಿದರೆ ಅವನಿಂದ ಏನು ಕಾರ್ಯವಾದೀತು. ಹುಲಿಯಹಾಗೆ ಬದುಕಬೇಕು. ಹುಲಿಯಹಾಗೆ ವೈರಿಯ ಮೇಲೆ ಬಿದ್ದು ಕೊಲ್ಲಬೇಕು. ಸುಮ್ಮನೆ ಮಲಗು. ಚಿಂತೆಮಾಡಿ ಸಣ್ಣಗಾಗಬೇಡ' ಎಂದು.

"ಆತನ ತತ್ವಜ್ಞಾನ ನನಗೆ ಅರ್ಥವಾಗಲಿಲ್ಲವೆಂದಲ್ಲ. ಆದರೆ ಶೂರರ ವಂಶದಲ್ಲಿ ಜನ್ಮವೆತ್ತ ಆ ಶೀಖ ಸಿಪಾಯಿಯ ಧೈರ್ಯ ಸ್ಥೈರ್ಯಗಳೆತ್ತ ? ನಾನೆತ್ತ ! ಆದರೂ ಉಸಿರೆಳೆದುಕೊಂಡು 'ಅಂತಹದೇನೂ ಇಲ್ಲ' ಎಂದು ಉತ್ತರಿಸಿದೆ. ಮನಸ್ಸುಮಾತ್ರ ವ್ಯಾಕುಲತೆಯ ಮಡಿಲಲ್ಲಿ ಸೋತು ಬಿದ್ದಿತ್ತು. ಇದ್ದುದರಲ್ಲಿಯೇ ನನಗೆ ಧೈರ್ಯ ಬರುವಂತೆ ಆ ಶೀಖ್ ಸಿಪಾಯಿ ಹೇಳಿದ್ದರಿಂದ ಏನೋ ಒಂದು ಬಗೆಯ ಆಶೆಮೂಡಿತು. ಆಯುಷ್ಯವಿದ್ದರೆ ಏಕೆ ಬದುಕಬಾರದು ಎಂಬ ಕಲ್ಪನೆಯೊಂದು ಆಗಾಗ ಸುಳಿಯುತ್ತಲೇ ಇತ್ತು.

ಶಿಬಿರದ ಗಂಟೆ ನಾಲ್ಕು ಬಾರಿ ಸದ್ದುಮಾಡಿ ಸುಮ್ಮನಾಯಿತು." ಎಂದು ಚೆಲುವರಾಜ ಸುಮ್ಮನಾದ.

ನಮ್ಮ ಮನೆಯ ಗಡಿಯಾರದಲ್ಲೂ ನಾಲ್ಕು ಬಾರಿಸಿತು. ಬೆಳಗಿನ ಜಾವದ ನಾಲ್ಕುಗಂಟೆ. ಇಲ್ಲಿಯವರೆಗೆ ನಿದ್ರೆಗೆಟ್ಟು ಅದ್ಭುತ ಕತೆಯನ್ನು ಕೇಳಿದ್ದರೂ ನಮಗೆ ನಿದ್ರೆಯೂ ಬರಲಿಲ್ಲ; ಆಯಾಸವೂ ಎನಿಸಲಿಲ್ಲ. ಚೆಲುವರಾಜನಿಗೆ ಕೂಡ ಉತ್ಸಾಹ ಇಳಿದಂತೆ ತೋರಲಿಲ್ಲ.

" ತಮಗೆ ತುಂಬ ಆಯಾಸವಾಗಿರಬಹುದು ", ಎಂದು ಚಂದ್ರೂ ಮಾತೆತ್ತಿದ.

" ಏನು ಭಯಂಕರ ಕತೆಯಪ್ಪ ಇಲ್ಲಿಯವರೆಗೆ ಕೇಳಿದರೂ ಕುತೂಹಲ ಕಡಮೆಯಾಗುವುದರ ಬದಲು ಕೆರಳುತ್ತಿದೆ. ಇನ್ನು ಎಲ್ಲರೂ ಮಲಗಿಕೊಳ್ಳೋಣ. ನಾಳೆ ಬೆಳಿಗ್ಗೆ ಮತ್ತೆ ಕಾಫಿ ಕುಡಿದು ಪ್ರಾರಂಭಿಸುವೆಯಂತೆ " ಎಂದು ನಾನೆಂದೆ.

" ನಿಮಗೆಲ್ಲ ಆಯಾಸವಾದೀತು, ನಿದ್ರೆ ಮಾಡಿ. ನಾಳೆಗೆ ಮುಂದುವರಿಸೋಣ. ಇದನ್ನೆಲ್ಲ ಕೇಳುವವರಿದ್ದಾರಲ್ಲಾ ಎಂಬುದು ನನಗೆ ಹೆಮ್ಮೆ. ಅದೆಲ್ಲ ಇರಲಿ, ನೇತಾಜಿಯ ಹೆಸರು ಎತ್ತಿದರೆ ಸಾಕು. ಮೈರಕ್ತ ಚಿಮ್ಮುತ್ತದೆ. ಮೈ ಕಾವು ಏರುತ್ತದೆ. ಮೈ ರೋಮಾಂಚಿಕವಾಗುತ್ತದೆ. ಸುಭಾಸ್ ಎಂದು ನಾಮಸ್ಮರಣೆ ಮಾಡಿದರೆ ಸಾಕು. ಕಲ್ಲುಕೂಡ ಮಾತನಾಡಬಲ್ಲುದು " ಎಂದು ಚೆಲುವರಾಜ್ ಎದ್ದು ಮೈಮುರಿದ.

## ೭

ನಾವೆಲ್ಲ ಎದ್ದಾಗ ೧೦ ಗಂಟೆಯಾಗಿತ್ತು. ಒಳಗಡೆ ನೀರು ಕಾದು ಸ್ನಾನದ ಸಿದ್ಧತೆಯೂ ಆಗಿತ್ತು. ಎಲ್ಲರೂ ಸ್ನಾನವನ್ನು ತೀರಿಸಿಕೊಂಡು ಹೋಟಲಿಗೆ ಹೋಗಿ ಚೆನ್ನಾಗಿ ತಿಂಡಿ ತಿಂದು ಒಂದೆರಡು ಸಿಗರೇಟ್ ಪ್ಯಾಕುಗಳನ್ನು ಕೊಂಡು ಮತ್ತೆ ಗೃಹಾಭಿಮುಖವಾಗಿ ಬಂದೆವು.

"ಚೆಲುವರಾಜ್, ಊಟದ ಹೊತ್ತಿನವರೆಗೆ ಎಷ್ಟು ಸಾಧ್ಯವೋ ಅಷ್ಟನ್ನು ಮುಂದುವರೆಯಿಸು" ಎಂದು ನಾನೆಂದೆ.

"ನೆನಪಿದೆ ತಾನೆ ನೆನ್ನೆ ಎಲ್ಲಿಗೆ ನಿಲ್ಲಿಸಿದ್ದೆಂಬುದು" ಎಂದು ಚಂದ್ರೂ ಪ್ರಶ್ನಿಸಿದ.

"ಚೆನ್ನಾಗಿ ಜ್ಞಾಪಕದಲ್ಲಿದೆ. ಶಿಬಿರದಲ್ಲಿ ಮಲಗಿದ್ದೆವು. ಮೇಲೆ ನಕ್ಷತ್ರ ಗಡಣ ನೆರೆದಿತ್ತು. ಇದೇ ಅಲ್ಲವೇ ?" ಎಂದು ಚೆಲುವರಾಜ ಮತ್ತೆ ನಿಲ್ಲಿಸಿದ.

"ಹೌದು. ಮುಂದುವರೆಯಿಸಿ" ಎಂದು ಚಂದ್ರೂ ಸ್ಫೂರ್ತಿ ತುಂಬಿದ.

"ಪ್ರಾಯಶಃ ಮುಂದೆ ಒಂದು ಗಂಟೆಯುವರೆಗೆ ನನಗೆ ನಿದ್ರೆ ಹತ್ತಲಿಲ್ಲ. ನನ್ನ ಪಕ್ಕದ ಆ ಶೀಖ್ ಸಿಪಾಯಿಗೂ ಕೂಡ ನಿದ್ರೆ ಬಂದಿರಲಿಲ್ಲ. ಅವನೂ ನನ್ನೊಡನೆ ಏನೋ ಹೇಳಬೇಕೆಂದು ಕುತೂಹಲ ಪಡುತ್ತಿದ್ದಂತೆ ತೋರಿತು ನಾನು ಕೂಡ ಅವನನ್ನು ಪುಸಲಾಯಿಸಿದೆ. ಅವನು ಮೆಲ್ಲಗೆ ಆರಂಭಿಸಿದ

"ಮೊದಲಿಂದ ನಾನು ಸೈನ್ಯದಲ್ಲಿದ್ದವನು. ಈಗಾಗಲೇ ಇಟಲಿ, ಫ್ರಾನ್ಸ್, ಡೆನ್ಮಾರ್ಕ್, ಹಾಲೆಂಡ್, ಸಿಸಿಲಿ ಮೊದಲಾದ ಕಡೆಗಳಲ್ಲಿ ತಿರುಗಿ ಬಂದಿದ್ದೇನೆ. ಜರ್ಮನರು ಪ್ಯಾರಿಸ್ ನುಗ್ಗಿದಾಗ ನಮ್ಮನ್ನು ಸುರಕ್ಷಿತ ಸ್ಥಳಕ್ಕೆ ಸಾಗಿಸಲಾಗಿತ್ತು ಆಗಿನ ನಮ್ಮ ಸೈನ್ಯದವರು ತೋರಿದ ಧೈರ್ಯ ಸಾಹಸಗಳನ್ನು ಎಷ್ಟು ಪ್ರಶಂಸಿಸಿದರೂ ತೀರದು. ಆದರೆ ಜರ್ಮನ್ ರಾಕ್ಷಸರ ಅಮಾನುಷ ಕೃತ್ಯಗಳನ್ನು ನೋಡಿ, ಕೇಳಿ ನಮಗೆ ರೋಷ ಉಕ್ಕುತ್ತಿತ್ತು. ಎಷ್ಟು ಕಡೆಗೆ ಸಾಧ್ಯವೋ ಅಷ್ಟು ಕಡೆಗೆಲ್ಲ ಬಂದೂಕನ್ನು ತಿರುಗಿಸಿ ಗುಂಡು ಹಾರಿಸಿ ಜರ್ಮನರನ್ನು ಕೊಲ್ಲಲು ಯತ್ನಿಸುತ್ತಿದ್ದೆವು."

"ಜರ್ಮನ್ ಸೈನಿಕ ಹೇಗಿರುತ್ತಾನೆ?" ಎಂದು ನಾ ಪ್ರಶ್ನಿಸಿದೆ.

"ಹೇಗೆಂದರೇನು ? ನಮ್ಮ ಹಾಗೆಯೇ ಇರುತ್ತಾನೆ. ಆದರೆ, ನಾವು ಮನುಷ್ಯರು, ಅವರು ಪಶುಗಳು. ಅಷ್ಟೇ ವ್ಯತ್ಯಾಸ. ನೂರೆಂಟು ಕಡೆಗಳಲ್ಲಿ ಸುತ್ತಿ, ಎಷ್ಟೋ ರಾತ್ರಿಗಳನ್ನು ನಿದ್ರೆಯಿಲ್ಲದೆ, ಹಾಸಿಗೆ ಹೊದಿಕೆಗಳಿಲ್ಲದೆ ಕಳೆದೆ. ನನ್ನ ಆಪ್ತಮಿತ್ರರನೇಕರು ಜರ್ಮನರ ರಕ್ತ ದಾಹಕ್ಕೆ ಬಲಿಯಾದರು. ನನಗೂ ಕೂಡ ಕಾಳಗದಲ್ಲಿ ಕಾಲುಗಳಿಗೆ ಗುಂಡು ತಗಲಿ ಕೆಲವು ಕಾಲ ಆಸ್ಪತ್ರೆಯಲ್ಲಿದ್ದೆ. ಗುಣವಾದ ಮೇಲೆ ಮತ್ತೆ ರಣರಂಗಕ್ಕೆ ನುಗ್ಗಬೇಕಾಯಿತು. ಪ್ರತಿ ನಿಮಿಷದಲ್ಲೂ ರಣ ತಾಂಡವದ ಭೀಕರ ನೃತ್ಯ. ಎತ್ತ ಕಣ್ಣು ಹೊರಳಿಸಿದರೂ, ಸಾವು ನೋವುಗಳ ನಗ್ನ ಚಿತ್ರ

"ಸೈನಿಕ ಒಂದು ರೀತಿಯಲ್ಲಿ ತತ್ವ ಜ್ಞಾನಿ. ಅವನಿಗೆ ಸಾವು ಬದುಕು ಎಲ್ಲ ಒಂದೆ. ಆತನಿಗೆ ಕಾರ್ಯ ತತ್ಪರತೆ ಮುಖ್ಯ. ಎಂಥ ಗಂಡಾಂತರ ಪ್ರಸಂಗದಲ್ಲೂ ಶಿಸ್ತು, ಸಂಯಮಗಳನ್ನು ಕಳೆದುಕೊಳ್ಳಬಾರದು. ಹೇಳುತ್ತ ಹೋದರೆ ಬೆಳೆಯುತ್ತದೆ. ಸಾಕು ಮಲಗು. ನಿದ್ರೆ ಮಾಡು. ನಾಳೆಗೆ ಮತ್ತೆಲ್ಲೋ ಪ್ರಯಾಣ ಮಾಡಬೇಕು" ಎಂದು ಸುಮ್ಮನಾದ.

"ಆತನ ಮಾತು ಕೇಳಿ ನನಗೆ ಒಂದು ರೀತಿಯ ಧೈರ್ಯ ಬಂದ ಹಾಗಾಯಿತು. ಅನುಭವಿಕನ ಮಾತೇ ಬೇರೆ.

''ರಾತ್ರಿ ತನ್ನ ಪಾಡಿಗೆ ತಾನು ಸರಿಯುತ್ತಲೇ ಇತ್ತು. ನನ್ನ ಸಮೀಪದ ಸಿಪಾಯಿಗಳು ಕೆಲವರು ಗೊರಕೆ ಹೊಡೆಯುತ್ತಿದ್ದರು. ರಣರಂಗದಲ್ಲಿದ್ದರೂ ನಿದ್ದೆ ಮಾಡುವ ಧೀರರಿದ್ದಾರಲ್ಲಾ ಎಂದು ನನಗೆ ಸೋಜಿಗವೆನಿಸಿತು. ಅನೇಕರಿಗೆ ಸುಪ್ಪತ್ತಿಗೆಯಲ್ಲಿ ಮಲಗಿದರೂ, ಏನು ಬೇಕು ಅದನ್ನು ತಿಂದರೂ, ಕುಡಿದರೂ ನಿದ್ರೆ ಬರುವುದಿಲ್ಲವಂತೆ ; ಆದರೆ ಇವರೆಂಥ ಧೀರರು ಎಂದು ನಾನೆಂದುಕೊಂಡೆ.

''ಇನ್ನೂ ಎರಡು ಗಂಟೆ ಇತ್ತು ಬೆಳಗು ಹರಿಯಲು. ನಾವೆಲ್ಲ ಏಳಬೇಕೆಂದೂ, ಪ್ರಯಾಣಕ್ಕೆ ಸನ್ನದ್ಧರಾಗಬೇಕೆಂದೂ ಸೂಚನೆ ಈಯಲಾಯಿತು. ನಿರ್ವಾಹವಿಲ್ಲದೆ ಎದ್ದಾಯಿತು. ಸಿದ್ಧತೆಯನ್ನೂ ಮಾಡಿದ್ದಾಯಿತು.

''ಮತ್ತೆ ನಾಗಿತು ಆಕಾಶಯಾನ. ಈ ಬಾರಿ ಆ ಕುತೂಹಲ ಆಶ್ಚರ್ಯಗಳು ಎಲ್ಲೋ ಮರೆಯಾಗಿದ್ದುವು. ಯಾರೋ ಅಂದರು 'ಸಿಂಗ್‌ಪುರಕ್ಕೆ ಹೊರಟಿರುವುದು' ಎಂದು. ನಮಗೇನು ಗೊತ್ತು. ಸಿಂಗ್‌ಪುರ ಅಂದರೇನೋ— ರಂಗೂನ್ ಅಂದರೇನೋ. ಬೆರಳು ತೋರಿಸಿದತ್ತ ಹೆಜ್ಜೆಯಿಕ್ಕುವುದೊಂದು ನಮಗೆ ಗೊತ್ತು.

''ಐದಾರು ಗಂಟೆಗಳ ಪ್ರವಾಸಾನಂತರದಲ್ಲಿ ನಮ್ಮ ವಿಮಾನಗಳು ನಮ್ಮನ್ನು ನೆಲಕ್ಕೆ ಇಳಿಸಿದುವು. ಇಳಿದವರೇ, ಟ್ರಕ್‌ನಲ್ಲಿ ಕುಳಿತು ಎತ್ತೋ ಸಾಗಿದೆವು. ಎಷ್ಟು ಹೊತ್ತಾದರೂ ಯಾವ ಆಹಾರ ಸಾಮಗ್ರಿಯೂ ಬಾರ

ದಾಯಿತು. ಟೀ ಕುಡಿಯುವ ಸಮಯವಾಗಿತ್ತು. ಊಟ ಬೇರೆ ಇರಲಿಲ್ಲ. ಮೈಯ್ಯಲ್ಲಿ ವಿಪರೀತ ಆಯಾಸ ತೋರುತ್ತಿತ್ತು.

''ಒಂದೇ ಒಂದು ಗಂಟೆಯಲ್ಲಿ ನಮ್ಮ ಪಡೆಯ ನಾಯಕರು ಬಂದರು. ನಮ್ಮೆಲ್ಲರನ್ನು ಕುರಿತು ನಾಲ್ಕು ಮಾತು ಹೇಳಿದರು. ಸರಿ ಏಳಿರಿ ಎಂದರು.

''ನಾವೆಲ್ಲ ಸಿಂಗ್‌ಪುರದ ಹೋರಾಟಕ್ಕೆ ತೆರಳಬೇಕಾಗಿತ್ತು. ಅಂದಿನ ಸಿಂಗ್‌ಪುರದ ಸ್ಥಿತಿ ವರ್ಣನಾತೀತವಾಗಿತ್ತು. ಜಪಾನಿಗಳು ಪ್ರಖರವಾಗಿ ಮುತ್ತಿದ್ದರು. ದಿನದಲ್ಲಿ ನೂರಾರು ಸಲ ವಿಮಾನದಾಳಿ. ಇಡೀ ನಗರದಲ್ಲಿ ರಂಗೂನಿನಲ್ಲಿ ನೂರು ಪಟ್ಟು ದುರಂತಗಳು ನಾಗಿದ್ದುವು. ಆದರೆ ನಮ್ಮ ಸೈನ್ಯದವರು, ಬ್ರಿಟಿಷ್, ಅಮೆರಿಕನ್ ಸೈನಿಕರು ತೋರ್ಪಡಿಸಿದ ಶೌರ್ಯ ಸಾಹಸಗಳು ಸುವರ್ಣಾಕ್ಷರದಲ್ಲಿ ಬರೆದಿಡ ತಕ್ಕಂಥವುಗಳು.

''ಒಮ್ಮುಖರಾಗಿ ಹೋರಾಟ ನಡೆಯಿಸಬೇಕು. ಯಾರೂ ಎದೆಯೊಡೆಯ ಬಾರದು. ವಿಜಯ ನಮ್ಮದು ಎಂದು ನಮ್ಮನ್ನು ಆಕಾಶವಾಣಿ ಮೂಲಕ ಕಮಾಂಡರುಗಳು ಜಾಗ್ರತ ಗೊಳಿಸುತ್ತಿದ್ದರು ; ಸ್ಫೂರ್ತಿ ತುಂಬುತ್ತಿದ್ದರು.

"ಬಾಂಬು ದಾಳಿಯ ಭೀತಿ ಒಮ್ಮೆ ತೊಲಗಿತು. ಸಿಂಗ್‌ಪುರದ ಆ ರುದ್ರ ಚಿತ್ರವನ್ನು ಪ್ರತಿದಿನ ಕಣ್ಣಾರ ಕಂಡೆವು. ಆದರೆ ಮಾಡಬೇಕೇನು ? ಜಪಾನಿಗಳ ಈ ಕ್ರೌರ್ಯವನ್ನು ವರ್ಣಿಸುವುದು ಸಾಧ್ಯವಿಲ್ಲ. ಏನಾದರೂ ಆಗಲಿ ಅವರ ಕೈಗೆ ಮಾತ್ರ ಸಿಕ್ಕಬಾರದೆಂದು ನಮ್ಮ ತೀರ್ಮಾನವಾಗಿತ್ತು.

"ಸಿಂಗಪುರದ ಹೋರಾಟ ದಿನೇ ದಿನೇ ಪ್ರಬಲವಾಗುತ್ತ ನಡೆಯಿತು. ಒಂದು ವಾರವಂತೂ ಎಂದೂ ಕಾಣದ, ಭಾರತ, ರಾಮಾಯಣಗಳನ್ನು ಮೀರಿಸಿದ ಕಾಳಗ ನಡೆಯಿತು. ಲೆಕ್ಕವಿಲ್ಲದಷ್ಟು ಜನರು ಪ್ರಾಣ ನೀಗಿದರು. ಅಸಂಖ್ಯಾತ ಕಟ್ಟಡಗಳು ನಾಮಾವಶೇಷವಾದುವು. ಅಪರಿಮಿತವಾದ ಹಾನಿ ಕಾಲಿಟ್ಟಿತು.

"ಎಂಥ ಪ್ರಸಂಗದಲ್ಲೂ ನಮ್ಮ ಸಿಬಿರದವರಿಗೆ ಮಾತ್ರ ಎಲ್ಲಿಂದಲೋ ಆಹಾರ ಅಲ್ಪ ಪ್ರಮಾಣದಲ್ಲಾದರೂ ಬರುತ್ತಿತ್ತು. ಅದೊಂದು ಜೀವನ

ವೆಂದು ಹೇಳಬೇಕೆ? ಕೇವಲ ಸಾಹಸಕ್ಕಾಗಿ ಬದುಕು ಎಂದು ನಾವು ಅರಿತೆವು.

"ಫೆಬ್ರವರಿ ೧೫ನೇ ತಾರೀಖು. ೧೯೪೨ನೇ ಇಸವಿ. ಅಂದು ಅದ್ಭುತ ಕದನಾನಂತರದಲ್ಲಿ ಸಿಂಗ್‌ಪುರ ಬ್ರಿಟಿಷರ ಕೈ ಬಿಟ್ಟಿತು. ಜಪಾನಿಗಳು ಅಪರಿಮಿತ ರಣೋತ್ಸಾಹದಿಂದ, ಜಯಭೇರಿ ಹೊಯ್ಯುತ್ತ ನಗರವನ್ನು ಪ್ರವೇಶಿಸಿದರು. ಅಂದಿನ ಆ ಜಪಾನೀ ಸೈನಿಕರ ತಾಂಡವವನ್ನು ನೋಡಬೇಕಿತ್ತು."

"ನಿಮ್ಮ ಗತಿ ಏನಾಯ್ತು?" ಎಂದು ಚಂದ್ರೂ ಕೇಳಿದ.

"ನಮ್ಮ ಗತಿ ಏನು? ನಾವು ಪಿಟಕ್ಕೆಂದು ಮಾತನಾಡದೆ ಸೆರೆಯಾಳುಗಳಾಗಬೇಕಾಯಿತು. ನಮ್ಮೆಲ್ಲರ ಇದಿರು ಜಪಾನೀ ಸೈನ್ಯಾಧಿಕಾರಿಯೋರ್ವ ಹತ್ತಿಪ್ಪತ್ತು ಸೈನಿಕರೊಂದಿಗೆ ಏನೋ ಕರ್ಕಶ ಧ್ವನಿಯಲ್ಲಿ ಕೂಗಿದ. ನಮಗೆ ಅದು ಅರ್ಥವಾಗಲಿಲ್ಲ. ಅವನೇ ತನ್ನ ಬಂದೂಕನ್ನು ಕೆಳಗಿಟ್ಟು ನಮಗೆ ಅಸ್ತ್ರಗಳನ್ನು ಕೆಳಗಿಡುವಂತೆ ಸೂಚಿಸಿದ. ಮರು ಮಾತನಾಡದೆ ನಾವೆಲ್ಲ ನಮ್ಮ ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟೆವು. ಹೊತ್ತ ಭಾರ ಇಳಿದಂತಾಯಿತು.

"ನಾವು ಕಣ್ಣೆತ್ತಿ ಆ ಜಪಾನೀ ಅಧಿಕಾರಿಯನ್ನು ನೋಡಿದೆವು. ಆ ಕ್ರೂರಮುಖ; ಕಣ್ಣಿನ ಬೆಳಕಿನಲ್ಲಿ ರೌದ್ರತೆಯೇ ಮೂಡಿ ನಿಂತಿತ್ತು. ಮುಖದಲ್ಲಿ ಸುಕ್ಕುಗಳು. ಗುಳಿಬಿದ್ದ ಗಲ್ಲಗಳು. ಆದರೂ ದಪ್ಪನೆಯ ಮೈಕಟ್ಟು. ಅಗಲವಾದ ಮೂಗಿನ ಹೊರಳೆಗಳು. ಅಚ್ಚುಕಟ್ಟಾಗಿ ಖಾಕಿ ಉಡುಪು ಧರಿಸಿದ್ದನಾತ. ನಿಲ್ಲುವಿಕೆ, ಕೈಯೆತ್ತುವಿಕೆ, ಬೆರಳು ತೋರುವಿಕೆ, ಮಾತನಾಡುವಿಕೆ ಎಲ್ಲದರಲ್ಲೂ ಶ್ರೀಮದ್ಗಾಂಭೀರ್ಯ. ಯಮದರ್ಶನವಾದಂತೆಯೇ ನಾವೆಲ್ಲ ಈ ರಾಕ್ಷಸನನ್ನು ಕಂಡು ಬೆದರಿ ಬೆಂಡಾದೆವು.

"ನಾವೆಲ್ಲ ಶಸ್ತ್ರಗಳನ್ನಿಟ್ಟು ಮುಂದಿನ ಆಜ್ಞೆಗಾಗಿ ಕಾದಿದ್ದಾಗಲೇ ಆ 'ಪ್ರಾಣಿ'ಗೆ ಕೋಪ ಹೆಚ್ಚಾದಂತೆ ತೋರಿತು. ಆತ ಬಂದಾತನೇ ನಮ್ಮೆಲ್ಲರ ಕೆನ್ನೆಗೆ ನಾಲ್ಕು ನಾಲ್ಕು ಬಾರಿ ಬಾರಿಸಿದ. ಅಬ್ಬಾ ಆ ಏಟು. ಮೊದಲೇ ಒರಟು ಮನುಷ್ಯ. ಇನ್ನು ಕೋಪದಿಂದ ಹೊಡೆದರೆ ಕೇಳ

ಬೇಕೇ? ನಿರ್ವಾಹವಿಲ್ಲದೆ ಸುಮ್ಮನಿದ್ದೆವು. ಕೆನ್ನೆಗೆ ಬಾರಿಸಿದ ಆ ಜಪಾನೀ ಅಧಿಕಾರಿಗೆ ತೃಪ್ತಿಯಾಗಲಿಲ್ಲ. ಬೆನ್ನುಗಳ ಮೇಲೆ ಬಲವಾಗಿ ಗುದ್ದಿಸಿದ. ಸರಿ ಆಗುವ ಸೌಭಾಗ್ಯವೆಲ್ಲ ಆಗಲಿ ಎಂದೆವು.

"ಗೆದ್ದೆವೆಂದು ಉಬ್ಬಿದ ಆ ಜಪಾನಿಗಳು ನಮಗಿತ್ತ ಹಿಂಸೆಯನ್ನು ಇನ್ನು ಹೆಚ್ಚಿಗೆ ಹೇಳುವುದು ಬೇಡ. ಅಂದು ನಮ್ಮನ್ನು ಸಿಂಗ್‌ಪುರ ಬೀದಿಗಳಲ್ಲಿ ದರದರನೆ ಎಳೆದೊಯ್ದು ಎಲ್ಲೋ ಒತ್ತಟ್ಟಿಗೆ ಕುರಿಗಳನ್ನು ತುಂಬಿದಂತೆ ತುಂಬಿದರು.

"ನಾವಿದ್ದ ಆ ಸ್ಥಳ ಮನೆಯೂ ಅಲ್ಲ, ಮಠವೂ ಅಲ್ಲ, ಜೈಲಲ್ಲ, ಧರ್ಮಶಾಲೆಯಲ್ಲ—ಏನೂ ಅಲ್ಲ—ಬರಿ ಬೈಲು. ಸುತ್ತೆಲ್ಲ ತಂತಿ ಬೇಲಿ. ಏನು ಯತ್ನಮಾಡಿದರೂ ಹಾರಿ ಹೋಗದಂತೆ ಬಲವಾದ ಉಸ್ತುವಾರಿ. ಪ್ರಾರಂಭವಾಯಿತು ಕೈದಿಗಳ ಘೋರ ಬಾಳು.

"ಯುದ್ಧ ಭೂಮಿಗೆ ತೆರಳಿದ್ದು ನಿಜ. ಯುದ್ಧವನ್ನು ನೋಡಿದ್ದು ನಿಜ. ಆದರೆ ನಾವು ಮಾತ್ರ ಎಷ್ಟು ಜನರನ್ನು ಕೊಂದೆವೆಂದು ಹೇಳುವುದು ಕಷ್ಟ.

"ನಾವು ಕೈದಿಗಳ ಸಿಬಿರಕ್ಕೆ ಬಂದಮೇಲಂತೂ ನಮ್ಮ ಪಾಡು ನಾಯಿಪಾಡಾಯಿತು. ಪ್ರತಿದಿನವೂ ಒಂದಿಲ್ಲೊಂದು ರೀತಿಯಿಂದ ಏಟುಗಳನ್ನು ತಿನ್ನಬೇಕಾಗಿತ್ತು. ಚಿಕ್ಕ ಪುಟ್ಟ ತಪ್ಪುಗಳಿಗಾಗಿ ಜಪಾನೀ ಕಾವಲುಗಾರರು ನಮ್ಮ ಕೆನ್ನೆಗೆ ಬಲವಾಗಿ ತೃಪ್ತಿಯಾಗುವವರೆಗೆ ಹೊಡೆಯಬೇಕು. ನಾವು ಆಗ ಕೊಂಚ ಅಲುಗಿದರೆ ಕತೆಯೇ ಮುಗಿಯಿತು.

"ಒಂದು ಬಾರಿ ನಮ್ಮ ಪಕ್ಕದ ಶೂರ ಶೀಖ್ ಸಿಪಾಯಿ ಜಪಾನಿಗಳ ಈ ಅವಮಾನಕರವಾದ ಹೊಡೆತವನ್ನು ಪ್ರತಿಭಟಿಸಿದ. ಸರಿ. ಮತ್ತೆ ನಾಲ್ವರು ಬೇರೆ ಸಿಪಾಯಿಗಳು ಬಂದರು. ಎಲ್ಲರೂ ಸೇರಿ ಆ ಶೀಖನನ್ನು ಒಂದು ಕಂಬಕ್ಕೆ ಕಟ್ಟಿದರು. ಪ್ರತಿಯೊಬ್ಬರೂ ಅವನ ಕೆನ್ನೆಗೆ ನೂರು ನೂರು ಬಾರಿ ಬಿಗಿದರು. ಆ ಕೆನ್ನೆಗಳಿಂದ ರಕ್ತ ಹೊಮ್ಮಿತು. ಅವನು ಅಷ್ಟೊತ್ತಿಗೆ ನಿಶ್ಚೇಷ್ಟಿತನಾಗಿದ್ದ. ಇಷ್ಟಕ್ಕೇ ಅವನನ್ನು ಬಿಟ್ಟರೆ ಅವರು? ಇಲ್ಲ. ಆತನನ್ನು ಬಿಚ್ಚಿದರು. ಎಲ್ಲರೂ ಬೂಟುಗಾಲಿನಿಂದ ಆ ಸಿಪಾ

-ಯಿಯ ದೇಹವನ್ನು ತುಳಿದರು. ನಂತರ ತಲೆ ಕೆಳಗೆ ಮಾಡಿ ಜೋತಾಡು ವಂತೆ ಕಟ್ಟಿದರು. ಭಾರಿ ಬೆತ್ತವೊಂದನ್ನು ತರಿಸಿ ಇಬ್ಬರೂ ಹೊಡೆದರು. ಆ ಹೊಡೆತವನ್ನು ಇನ್ನೆಂದೂ ಕಣ್ಣಿನಿಂದ ನೋಡಲಾಸಲ್ಲ.

"ಈ ಕ್ರೂರ ಶಿಕ್ಷೆಯನ್ನು ನೋಡಲಾರದೆ ಯಾರಾದರೂ ಕಣ್ಣು ಮುಚ್ಚಿಕೊಂಡರೆ ಮುಗಿಯಿತು. ಅವನನ್ನು ಯಮರಾಯ ಸ್ವಾಗತಿಸಿದ ನೆಂದೇ ತಿಳಿಯಬೇಕು. ಅವನಿಗೂ ಇದೇ ಶಿಕ್ಷೆಯ ಪುನರಾವರ್ತನೆ.

"ಆ ರೀತಿ ಹೊಡೆದ ಆ ಶಿಪಾಯಿಗೆ ಅಂದು ಇಡೀ ದಿನ ಆಹಾರ ಕೊಡಲಿಲ್ಲ. ಹೇಗೋ ಚೇತರಿಸಿಕೊಂಡ. ಮುಂದೆ ಒಂದು ತಿಂಗಳು ಕಳೆಯಿತು. ಅಷ್ಟರಲ್ಲಿ ನಮ್ಮಲ್ಲಿ ಅನೇಕರು ಕೆನ್ನೆಯ ಹೊಡೆತಕ್ಕೆ ಸಿಕ್ಕೆವು. ಆದರೆ ಹೇಗೋಮಾಡಿ ವ್ಯಥೆಯನ್ನು ತಡೆದುಕೊಳ್ಳುವುದನ್ನು ಕಲಿತೆವು. ಇಲ್ಲದಿದ್ದರೆ ಬದುಕುವುದು ಹೇಗೆ ಸಾಧ್ಯವಾಗುತ್ತಿತ್ತು.

"ನಾನು ಹೇಳಿದ್ದು ತೀರ ಸಾಮಾನ್ಯ ರೀತಿಯ ಶಿಕ್ಷೆ. ಇನ್ನೂ ಅನೇಕ ಕಡುತರ ಶಿಕ್ಷೆಗಳನ್ನು ಜಪಾನಿಗಳು ಕೈದಿಗಳಾಗಿ ಸಿಕ್ಕ ನಮ್ಮಂಥವರ ಮೇಲೆ ಪ್ರಯೋಗಿಸುತ್ತಿದ್ದರು.

" ಇನ್ನೊಂದು ದಿನ ಮಧ್ಯಾಹ್ನದ ಸಮಯ, ಜಪಾನೀ ಅಧಿಕಾರಿ ಗಳು ಎತ್ತೊ ಕೊಂಚ ಮರೆಯಾಗಿದ್ದರು. ಒಬ್ಬನೇ ಬಾಗಿಲಲ್ಲಿ ಕುಳಿತಿದ್ದ. ಸರಿ, ನಮ್ಮ ಶೀಖ್ ಸಿಪಾಯಿಗೆ ಕೋಪ ಏರಿತು. ಹೋಗಿದ್ದೇ ಅವನ ಕುತ್ತಿಗೆಯನ್ನೇ ಗಟ್ಟಿಯಾಗಿ ಹಿಡಿದ. ಆ ಜಪಾನಿ ಒಮ್ಮೆ ಕೂಗಿದವನೇ ಚಟಪಟ ಒದ್ದಾಡಲಾರಂಭಿಸಿದ. ಪಕ್ಕದಲ್ಲಿದ್ದವರು ಅವನ ಸಹಾಯಕ್ಕೆ ಓಡಿ ಬಂದರು.

" ನಾವೆಲ್ಲ ಸರಿ ಇನ್ನು ಈ ಶೀಖ್ ಸಿಪಾಯಿಯ ಗತಿ ಆಯಿತು ಎಂದೆವು. ಆ ನಾಲ್ವರೂ ಅವನನ್ನು ಹಿಡಿದುಕೊಂಡು ಶಿಬಿರದಿಂದ ಹೊರಗೆ ಒಯ್ದರು. ಆತನಿಗೆ ಯಾವ ಶಿಕ್ಷೆಯಾಯಿತೋ ಏನೋ. ಅಂದು ಹೋದಾತ ತಿರುಗಿ ಬರಲೇ ಇಲ್ಲ.

" ಆಹಾರ ಕೊಡುವಾಗಲು ಕೂಡ ಜಪಾನಿಗಳು ತಮ್ಮ ಹೆಚ್ಚಳ ವನ್ನು ತೋರಬೇಕು. ಪ್ರತಿಕ್ಷಣಕ್ಕೂ ತಮ್ಮ ಘನತೆಗಾಂಭೀರ್ಯಗಳು ವ್ಯಕ್ತವಾಗಬೇಕೆಂದು ಅವರ ಆಶೆ.

"ಯಾರಿಗೂ ಇಂಗ್ಲೀಷ್ ಬರುತ್ತಿರಲಿಲ್ಲ. ಹಿಂದಿ, ಬಂಗಾಳಿ, ತೆಲಗು, ತಮಿಳು ಇತ್ಯಾದಿ ಭಾಷೆಗಳೂ ಬರುತ್ತಿರಲಿಲ್ಲ. ಬರಿ ಜಪಾನೀ ಭಾಷೆ. ನಾವು ಹೇಳಿದ್ದು ಅವರಿಗೆ ಅರ್ಥವಾಗುವ ಹಾಗಿಲ್ಲ. ಅವರ ಅಭಿಮತ ನಮಗೆ ತಿಳಿಯುವಹಾಗಿಲ್ಲ. ಹೀಗಾಗಿ ಅನೇಕಬಾರಿ ಕಲಹಕ್ಕೂ, ಅಶಾಂತಿಗೂ ಕಾರಣವಾಗುತ್ತಿತ್ತು.

"ನಮಗೆ ದಿನಾಲು ಅರೆಹೊಟ್ಟೆಗಾಗುವಷ್ಟು ಒಣ ಅನ್ನ, ಮೀನು, ಏನೋ ಒಂದು ಬಗೆಯ ಸಾರಿನಂಥ ಪದಾರ್ಥ ಕೊಡಲಾಗುತ್ತಿತ್ತು. ಎಷ್ಟೋದಿನ ಅದು ರುಚಿಸಲೇ ಇಲ್ಲ. ಸ್ವಲ್ಪ ರೂಢಿಯಾದಮೇಲೆ ಅದನ್ನೇ ತಿನ್ನಬೇಕಾಯಿತು ಆದರೆ ಹೊಟ್ಟೆ ಮಾತ್ರ ಸರ್ವಕಾಲದಲ್ಲೂ ಹಸಿದೇ ಇರಬೇಕು.

"ಸೂರ್ಯೋದಯಕ್ಕೆ ಒಮ್ಮೆ ಆಹಾರ ಸಿಕ್ಕುತ್ತಿತ್ತು. ಅದು ಅನ್ನದ ಗಂಜಿಯೋ ಅಥವಾ ಮತ್ತೇನೋ ತಿಳಿಯದು. ಮಧ್ಯಾಹ್ನ ೧೨ ಕ್ಕೆ ಅನ್ನ; ಸಂಜೆ ೬ ಗಂಟೆಗೆ ಮತ್ತೆ ಅದೇ ಊಟ. ಒಂದೇ ಒಂದು ತಿಂಗಳಲ್ಲಿ ನಾವೆಲ್ಲ ಸೊರಗಿ ಹೋದೆವು. ನಮ್ಮಿಂದ ಯಾವ ಕಾರ್ಯವೂ ಸಾಗದಷ್ಟು ನಿಶ್ಶಕ್ತಿ ಆವರಿಸಿತು.

"ಕೆಲಸವೇನು ಕಡಮೆಯೋ? ದೇಹ ಶ್ರಮದ ಕಾರ್ಯಗಳನ್ನೆಲ್ಲ ನಮ್ಮಿಂದ ಮಾಡಿಸುತ್ತಿದ್ದರು. ಸ್ವಲ್ಪ ತಪ್ಪಿದರೆ ಮೈ ಎಲುಬು ಮುರಿಯುವಂತೆ ಹೊಡೆತಗಳು. ಇಷ್ಟೆಲ್ಲ ಮಾಡಿದರೂ ಹೊಟ್ಟೆತುಂಬ ಆಹಾರ ವಿಲ್ಲ. ಬಟ್ಟೆಗಳಿಲ್ಲ. ಬಿಸಿಲುಗಾಳಿಗಳಿಂದ ರಕ್ಷಿಸಿಕೊಳ್ಳಲು ಕಟ್ಟಡವಿಲ್ಲ. ಬರಿ ಬೈಲಲ್ಲಿಯೇ ಕೊಳೆಯಬೇಕಾಗಿತ್ತು.

"ಸಾಯಂಕಾಲ, ಜವಾನಿಗಳು ಗೆದ್ದ ಸಮಾಚಾರವನ್ನು ಮಾತ್ರ ನಮ್ಮ ಸಿಬಿರಗಳಿಗೆ ಬಂದು ತಿಳಿಸುವ ಏರ್ಪಾಡಾಗಿತ್ತು. ಹಲವುಸಲ ರೇಡಿಯೋ ಮೂಲಕ ಈ ಸುದ್ದಿಗಳು ನಮ್ಮ ಕಿವಿಗೆ ಬಂದು ಮುಟ್ಟುತ್ತಿದ್ದವು.

"ಟೋಕಿಯೋ ನಗರದಿಂದ ಇಂಗ್ಲಿಷ್, ತಮಿಳು, ತೆಲಗು, ಹಿಂದಿ ಭಾಷೆಗಳಲ್ಲಿ ಬ್ರಾಡ್ ಕ್ಯಾಸ್ಟ್ ಸಮಾಚಾರಗಳು ಬರುತ್ತಿದ್ದವು. ಒಂದು ದಿನ ರಂಗೂನ್—ಪೇಗೂದಿಂದ ಬ್ರಿಟಿಷರು ವಾಪಸಾದರೆಂದು ವಾರ್ತೆ

ಬಂದಿತು. ಏನು ಬಂದರೇನು, ಸುಮ್ಮನೆ ಕೇಳಿ ಬಿಡುವುದಷ್ಟೆ ನಮ್ಮ ಕೆಲಸವಾಗಿತ್ತು.

“ ಪ್ರಪಂಚದ ಯಾವ ಭಾಗದ ಸುದ್ದಿಯೂ ನಮಗೆ ತಲ್ಪದಂತೆ ವ್ಯವಸ್ಥೆಯಾಗಿತ್ತು. ಸಿಂಗ್ ಪುರದಲ್ಲಿ ಸೆರೆ ಸಿಕ್ಕಿದ ನಮ್ಮನ್ನು ಒಂದು ರಾತ್ರಿ ವಿಮಾನದಲ್ಲಿ ಸಾಗಿದರು. ಎಲ್ಲಿ ಎತ್ತ ಎಂಬುದು ತಿಳಿಯಲೇ ಇಲ್ಲ.

“ ಅಂದು ರಾತ್ರಿ ಇನ್ನೊಂದು ವಾರ್ತೆ ಬಂದಿತು. ಜಪಾನರು ಅಂದಮಾನ್ ದ್ವೀಪವನ್ನು ಆಕ್ರಮಿಸಿಕೊಂಡರು, ಸರಿ ಜಪಾನಿಗಳಿಗೆ ಜಯದ ಮೇಲೆ ಜಯವಾಗುತ್ತಿದೆಯೆಂದು ಮಾತ್ರ ನಮಗೆ ತಿಳಿದಿತ್ತಷ್ಟೆ, ಅಂದಮಾನಯೆಂದರೆ ಏನು ಎಂದು ಕೆಲವರು ನಮ್ಮ ಸಿಬಿರದಲ್ಲಿ ಕುತೂಹಲದಿಂದ ಕೇಳುತ್ತಿದ್ದರು.

“ ಜಪಾನಿಗಳ ಜಯವು ಮುಂದು ವರಿಯುತ್ತಿದ್ದಂತೆಯೇ ನಮ್ಮ ಆಹಾರದ, ಬಟ್ಟೆಯ ಅಭಾವ ತೀರ ಹೆಚ್ಚಾಯಿತು. ಅದಕ್ಕೆ ಕಾರಣ ಬೇರೆ ನಮಗೆ ತಿಳಿಯಲಿಲ್ಲ. ಇವರಿಗೆ ಇಷ್ಟು ಜಯವಾಗಿದ್ದರೆ ನಮಗೆಲ್ಲ ಅನ್ನವನ್ನೇಕೆ ಕೊಡುತ್ತಿಲ್ಲ ? ಎಂದು ನಾವು ವಿಚಾರಿಸುತ್ತಿದ್ದೆವು.

“ ಅಡವಿಯಲ್ಲಿ ದಾರಿಗಳನ್ನು ಮಾಡಿಸುವ ಕಾರ್ಯ ಒಮ್ಮೆ ಪ್ರಾರಂಭವಾಯಿತು. ಅಲ್ಲಿಗೆ ನಾವು ನಡೆದುಕೊಂಡೇ ಹೋಗಬೇಕು. ಒಮ್ಮೆ ಅಡವಿಯ ಮುಖಕ್ಕೆ ತೆರಳಿದವರು ಸುಮಾರು ೩ ತಿಂಗಳ ಕಾಲ ಅಲ್ಲಿಯೇ ಇರಬೇಕಾಗಿ ಬಂದಿತು.

“ ಆಹಾರದ ಅಭಾವದಿಂದ ನಮ್ಮ ಶಿಬಿರದವರೆಲ್ಲ ಬರದ ಹೆಣಗಳಾದಂತಾದರು. ಮಾತನಾಡಲು ಕೂಡ ಶಕ್ತಿಯಿಲ್ಲದಂತಾಯಿತು. ಹಲವರಿಗೆ ತೀರ ನಿಶಕ್ತರಾದವರನ್ನು ಜಪಾನಿಗಳು ಕಡುಕರ ಶಿಕ್ಷೆಗೆ ಗುರಿಮಾಡುವುದನ್ನು ಅನೇಕಬಾರಿ ಬಿಡುತ್ತಿದ್ದರು. ಆದರೆ ಅದು ಅವನವನ ಅದೃಷ್ಟ ಅಷ್ಟೇ.

“ಸಾಗಿತ್ತು ಕತೆ. ಕೇಳುತ್ತ ಕುಳಿತ ನಾವು ಮೈಮರೆತಿದ್ದೆವು. ಚಂದ್ರೂ ಅಂತೂ ಕಲ್ಲು ಬೊಂಬೆಯಂತೆ ಕುಳಿತಿದ್ದ. ಅವನ ಕಣ್ಣೆಲ್ಲ ಚೆಲುವರಾಜನ ಮುಖದಲ್ಲಿ ಸುಳಿಯುತ್ತಿದ್ದವು. ಉಸಿರು ಬಿಡದಂತೆ ಆತ ಕೇಳುತ್ತಿದ್ದ. ನಾನೂ ಕೂಡ ಕಥಾಲಹರಿಯಲ್ಲಿ ತೇಲಿ ಹೋಗಿದ್ದೆ.

ಊಟದ ಕರೆ ಬಂತು. ಕತೆ ಅಲ್ಲಿಗೇ ನಿಲ್ಲಬೇಕಾಯಿತು.

ಊಟ ಮುಗಿದುದೊಂದೇ ತಡ ಮತ್ತೆ ಎಲ್ಲರೂ ಸಿದ್ಧರಾದೆವು. ಚೆಲ್ವರಾಜನಿಗೂ ಸ್ವಲ್ಪ ಉತ್ಸಾಹ ಹೆಚ್ಚಿದಂತೆ ತೋರಿತು. ಅವನೂ ಸಿಗರೇಟಿನ ಹೊಗೆಯನ್ನು ಚೆನ್ನಾಗಿ ಎಳೆದುಕೊಂಡು ಪ್ರಾರಂಭಿಸಿದ.

" ಅಂದು ಶುಭದಿನ. ಸೂರ್ಯನಾರಾಯಣ ಅದೇ ಪೂರ್ವದಿಗ್ವಲಯದಲ್ಲಿ ಪರಿಶೋಭಿಸುತ್ತಿದ್ದ, ಎಂದಿನಂತೆ ನಮ್ಮ ಬೆಳಗಿನ ಆಹಾರ ಬಾರದಿದ್ದರೂ ನಮಗೆಲ್ಲ ಒಂದು ಬಗೆಯ ಉತ್ಸಾಹ ತುಂಬಿದ್ದಂತಾಗಿತ್ತು. ಕಾರಣ ಮಾತ್ರ ಯಾರಿಗೂ ತಿಳಿದಿರಲಿಲ್ಲ. ಜಪಾನೀ ಅಧಿಕಾರಿಗಳೂ ಕೂಡ ಅಂದು ಎಂದಿನಂತೆ ನಡೆದುಕೊಳ್ಳಲಿಲ್ಲ. ನಮ್ಮ ಬಗೆಗೆ ಇದ್ದುದರಲ್ಲಿಯೇ ಮಾನವತೆಯನ್ನು ತೋರ್ಪಡಿಸಿದರು. ನಮ್ಮನ್ನು ಕಾಯುತ್ತಿದ್ದ ಆ ಜಪಾನೀ ಅಧಿಕಾರಿಯ ಮುಖದ ಮೇಲೆ ಅಂದಿನ ದಿನವೇ ಮುಗುಳ್ನಗೆಯ ತೆರೆಯನ್ನು ನಾವು ನೋಡಿದ್ದು. ಆದರೂ ಆ ರುದ್ರ ಮುಖದ ಕರಾಳ ದರ್ಶನ ಹೇಗೆ ಬದಲಾದೀತು !

" ನಮ್ಮ ನಮ್ಮಲ್ಲೇ ನೂರು ಮಾತುಗಳು ಆರಂಭವಾದುವು. ಯಾರಿಗೂ ಏನೂ ಗೊತ್ತಾಗಲಿಲ್ಲ ಆದರೆ ಎಲ್ಲರ ಮುಖದಲ್ಲೂ ಒಂದು ಬಗೆಯ ಆನಂದದ ಕಳೆ ಬೆಳಗುತ್ತಿತ್ತು.

" ಮುಂದೆ ಒಂದೆರಡು ಗಂಟೆ ಕಳೆದಮೇಲೆ ನಮ್ಮೆಲ್ಲರ ಬಿಡುಗಡೆಯಾಗಿದೆಯೆಂದೂ, ನಾವು ಇನ್ನುಮೇಲೆ ಜಪಾನಿಗಳ ವೈರಿಗಳಲ್ಲವೆಂದೂ, ನಮ್ಮೆಲ್ಲರನ್ನು ಬಿಡುಗಡೆಮಾಡಿದ ಕಾರಣವನ್ನು ಓರ್ವ ಭಾರತೀಯ ಮಿಲಿಟರಿ ಅಧಿಕಾರಿಗಳು ತಿಳಿಸುತ್ತಾರೆಂದೂ, ಮೊದಲು ನಮಗೆಲ್ಲ ಒಳ್ಳೇ ತಿಂಡಿ ಕೊಡಲಾಗುವುದೆಂದೂ ಒಬ್ಬರು ಬಂದು ತಿಳಿಸಿದರು. ಅವರ ಜೊತೆಗೆ ಮತ್ತೋರ್ವ ಜಪಾನಿ ಅಧಿಕಾರಿ ಬೇರೆ ಇದ್ದ. ಆತನ ನಡೆನುಡಿಯೂ ಅಂದು ಸಂಪೂರ್ಣ ಬದಲಾವಣೆಹೊಂದಿದಂತೆ ಕಂಡಿತು.

" ನಮಗೆ ಇದಾವುದೂ ಅರ್ಥವಾಗಲಿಲ್ಲ. ಸಾಗಿದೆವು ಮೂಕ ಕುರಿಗಳಂತೆ. ನಮ್ಮೆಲ್ಲರನ್ನು ಟ್ರಕ್‌ನಲ್ಲಿ ಕೂರಿಸಿ ಸಾಗಿಸಲಾರಂಭಿಸಿದರು. ಒಂದು

ಒಂದು ಗಂಟೆಯ ಪಯಣದ ನಂತರ ನಾವೆಲ್ಲ ಒಂದು ಭಾರಿ ಬಯಲಲ್ಲಿ ಇಳಿಸಲ್ಪಟ್ಟೆವು. ನೋಡುತ್ತೇವೆ ನಮ್ಮಂತೆಯೇ ಸೆರೆಸಿಕ್ಕಿ ಸಾಯಲಾಗಿದ್ದ ಸಹಸ್ರಾರು ಜನ ನೆರೆದಿದ್ದಾರೆ. ಎಲ್ಲರೂ ಭಾರತ ಸೋದರರು.

"ಅಲ್ಲಿಳಿದ ಮೇಲೆ ಏನು ಸಮಾಚಾರ ಎಂದು ಕೇಳಿದೆವು. ಒಬ್ಬ ಸೈನಿಕ ಹೇಳಿದ: 'ಇಂದಿನಿಂದ ನಾವೆಲ್ಲ ಭಾರತಕ್ಕಾಗಿ ಹೋರಾಡುವ ಸ್ವತಂತ್ರರು. ನಮ್ಮ ನಾಯಕರು ನೇತಾಜಿ ಸುಭಾಸ್ ಚಂದ್ರ ಬೋಸರು' ಎಂದು. ನಮಗೆಲ್ಲ ಅತ್ಯಾಶ್ಚರ್ಯವಾಯಿತು. ಸುಭಾಸ್ ಚಂದ್ರ ಬೋಸರು ಯಾರು ಎಂಬುದು ಕೂಡ ನಮ್ಮವರಿಗೆ ತಿಳಿದಿರಲಿಲ್ಲ. ಆತ ಹೇಳಿದ್ದು ಖಂಡಿತವಾಗಿ ನಮಗೆ ಅರ್ಥವಾಗಲಿಲ್ಲ. ಸರಿಯೆಂದುಕೊಂಡು ನಾವೆಲ್ಲ ಸುಮ್ಮನಾದೆವು.

"ಹೊಸದಾಗಿ ಬಂದ ನಮ್ಮಂಥ ಸೈನಿಕರಿಗೆ ಮೊದಲು ಅಂದು ತಿಂಡಿ ಕೊಡುವ ಏರ್ಪಾಡಾಗಿತ್ತು. ನಾವೆಲ್ಲ ಆ ಬೆಳಗಿನ ಹೊತ್ತಿನಲ್ಲಿ ಅನೇಕ ತಿಂಗಳ ನಂತರ ಅಂದೇ ಹೊಟ್ಟೆತುಂಬ ತಿಂಡಿತಿಂದದ್ದು.

"೧೦ ಗಂಟೆಯ ಹೊತ್ತಿಗೆ ಭಾರತೀಯರೊಬ್ಬರು ಸೈನಿಕ ಪೋಷಾಕಿನಲ್ಲಿ ಬಂದು ನಮ್ಮನ್ನುದ್ದೇಶಿಸಿ ಈ ರೀತಿ ಹೇಳಿದರು.

ಭಾರತದ ವೀರ ಪುತ್ರರೆ,

ಇದು ಮಂಗಳದಿನ. ನಾವೆಲ್ಲ ಇನ್ನು ಸ್ವತಂತ್ರ ಭಾರತದ ಪ್ರಜೆಗಳು. ನಮ್ಮದೇ ಸರ್ಕಾರ ಸ್ಥಾಪನೆಯಾಗಿದೆ. ನಮ್ಮ ನಾಯಕರು ನೇತಾಜಿ ಸುಭಾಸ್ ಚಂದ್ರ ಬೋಸರು. ನಾವೆಲ್ಲ ಅವರ ನೇತೃತ್ವದಲ್ಲಿ ಭಾರತ ಮಾತೆಯ ಸ್ವಾತಂತ್ರ್ಯಕ್ಕಾಗಿ ಹೋರಾಡೋಣ. ಬನ್ನಿ ಮುಂದೆ ಬನ್ನಿ. ನಿಮಗೆಲ್ಲ ಹೊತ್ತಿಗೆ ಸರಿಯಾಗಿ ಸೊಗಸಾದ ಊಟ, ಬಟ್ಟೆ, ಸಂಬಳ ಕೊಡುವ ವ್ಯವಸ್ಥೆಯನ್ನು ನಮ್ಮ ನೇತಾಜಿ ಮಾಡಿದ್ದಾರೆ. ನೀವೆಲ್ಲ ನಾವು ಸ್ಥಾಪಿಸಿರುವ ಭಾರತ ರಾಷ್ಟ್ರೀಯ ಸೈನ್ಯಕ್ಕೆ ಸೇರುತ್ತೀರಾ?

ಎಂದು ಕೇಳಿದರು. - ಸಭೆಯಲ್ಲಿ ಮುಂದೆ ಕುಳಿತಿದ್ದ ಹಲವರು "ನಾವು ನಾವು" ಎಂದು ಕೂಗಿದರು. ಆ ಅಧಿಕಾರಿಗಳು ಬನ್ನಿ ಯಾರು ಮುಂದೆ ಬರುತ್ತೀರೋ ಅವರು. ಇದು ಸುವರ್ಣ ಸಂಧಿ. ಈಗ

ಹಿಂದುಳಿದವರೂ ದೇಶದ್ರೋಹಿಗಳು. ಅವರಿಗೆ ಆ ಮೇಲೆ ಯಾವ ಶಿಕ್ಷೆಯನ್ನು ವಿಧಿಸಲಾಗುತ್ತದೆಂಬುದನ್ನು ಈಗ ಹೇಳಲಾಗುವುದಿಲ್ಲ. ಆದರೆ ಯಾರಿಗೂ ಒತ್ತಾಯವಿಲ್ಲ. ಎಂದು ಅವರು ಮಾತು ಮುಂದುವರಿಸಿದ್ದರು.

" ನಮ್ಮ ಮಿತ್ರರು ಎತ್ತಾದರೂ ಮೊದಲು ಅನ್ನ ಸಿಕ್ಕರೆ ಸಾಕು ಎಂದು ಅಂದೇ ಆ ಸೈನ್ಯಕ್ಕೆ ಸೇರಿದರು. ಹಾಗೆ ಸೇರಿದವರಲ್ಲಿ ನಾನೂ ಒಬ್ಬ.

" ಅಂದು ಭಾಷಣ ಕೇಳಿದ ದಿನಮಾತ್ರ ನಮಗೆ ಏನೂ ಅರ್ಥವಾಗಿರಲಿಲ್ಲ. ಭಾರತ ಸ್ವತಂತ್ರ ಎಂದರೇನು ಕೂಡ ನಮಗೆ ತಿಳಿಯಲಿಲ್ಲ. ಅದು ಹೋಗಲಿ. ನಾನು ರಿಕ್ರೂಟ್ ಆದಾಗ ಯಾರ ಜೊತೆಗೆ ಯುದ್ಧ ? ಬ್ರಿಟಿಷರಿಗೆ ಈ ಯುದ್ಧದ ಹುಚ್ಚೇಕೆ ? ಜಪಾನರೆಂದರೆ ಮನುಷ್ಯರೆ ? ಯುರೋಪು ಅಂದರೇನು ? ಅದು ಹಳ್ಳಿಯೇ ಇತ್ಯಾದಿ ನೂರಾರು ಪ್ರಶ್ನೆಗಳು ನನ್ನ ತಲೆ ತಿಂದಿದ್ದವು. ಸಾಮಾನ್ಯವಾಗಿ ನಾವೆಲ್ಲ ಸೈನ್ಯಕ್ಕೆ ಸೇರಿದ್ದು ಹೊಟ್ಟೆ ಬಟ್ಟೆಗಿಲ್ಲವೆಂದು. ಹಾಗೆಯೇ ಭಾರತದ ಮೂಲೆ ಮೂಲೆಯಿಂದ ಆಹಾರ, ಬಟ್ಟೆಯ ಅಭಾವದ ಪರಿಣಾಮದಿಂದಾಗಿ ಸಹಸ್ರಾರು ನಿರ್ಗತಿಕರು ಸೈನ್ಯಸೇರಿದರು. ಇಂತಹರಿಗೆ ಹೇಗೆ ಅರ್ಥವಾಗಬೇಕು ಈ ಮಾತುಗಳು.

" ಎಲ್ಲಿ ಕರೆದುಕೊಂಡು ಹೋಗುತ್ತಾರೋ ಅಲ್ಲಿಗೆ ಹೋಗುವುದು, ಏನು ಹೇಳುತ್ತಾರೋ ಅದನ್ನು ಮಾಡುವುದು ನಮ್ಮ ಕರ್ತವ್ಯವಾಗಿತ್ತು ಅಷ್ಟೆ. ಜಪಾನೀ ಅಧಿಕಾರಿಗಳು ನಮ್ಮನ್ನು ಅಷ್ಟೇಕೆ ಹಿಂಸೆ ಮಾಡುತ್ತಿದ್ದರೆಂಬುದು ನಮಗೆ ಅನೇಕ ದಿನಗಳವರೆಗೆ ಅರ್ಥವಾಗಲಿಲ್ಲ.

" ನಾವೆಲ್ಲ ಆ ಹೊಸ ಸೈನ್ಯಕ್ಕೆ ಸೇರಿದ ದಿನದಿಂದ ನಮ್ಮ ಸ್ಥಿತಿಯೇ ಬದಲಾಯಿಸಿ ಹೋಯಿತು. ದಿನವೂ ಒಳ್ಳೇ ಊಟ ತಿಂಡಿಗಳು ಸಿಕ್ಕಲಾರಂಭಿಸಿದವು. ಪ್ರತಿದಿನವೂ ಹೊಸ ಹೊಸ ವರ್ತಮಾನಗಳು ತಿಳಿಯಲಾರಂಭಿಸಿದುವು. ಒಟ್ಟಿನಲ್ಲಿ ಅಲ್ಲಿಂದ ನಮ್ಮ ಜೀವನವೇ ಸಂಪೂರ್ಣ ಬದಲಾಯಿಸಿ ಹೋಯಿತು.

" ನಮಗೆ ವಿಶೇಷ ಸಂತೋಷವುಂಟುಮಾಡಿದ ಸಂಗತಿಗಳೆಂದರೆ ಜಪಾನಿಗಳ ಹೊಡೆತಗಳು, ರಾಕ್ಷಸೀ ಕೃತ್ಯಗಳು ತಪ್ಪಿದವು ; ಊಟ ತಿಂಡಿ, ಬಟ್ಟೆ ಬರೆಗಳು ಸಾಕಷ್ಟು ಸಿಗಲಾರಂಭಿಸಿದವು ; ಸ್ವಾತಂತ್ರ್ಯ ಸಿಕ್ಕಿತು.

ಸರಿ ನಾವು ಬಯಸಿದ್ದು ಅಷ್ಟೆ. ಇದನ್ನೆಲ್ಲ ನೋಡಿ, ಇದನ್ನು ಬಳಕೆಗೆ ತಂದಾತ ನಿಜವಾಗಿ ದೇವರೇ ಇರಬೇಕು ಎಂದು ನಮ್ಮೆಲ್ಲರಿಗೆ ಧೃಡ ವಿಶ್ವಾಸ ವಾಯಿತು. ಪ್ರಾಣ ಹೋಗುವಂತಿದ್ದ ನಮ್ಮೆಲ್ಲರನ್ನು ಬದುಕಿಸಿ ಒಳ್ಳೇ ಸ್ಥಿತಿಗೆ ತಂದಾತನಿಗಾಗಿ ನಾವೂ ಪ್ರಾಣ ಅರ್ಪಿಸಬೇಕೆಂದೆನ್ನಿಸಿತು. ಅಂದಿನಿಂದ ಹೇಡಿಯಾಗಿದ್ದವನು ಹುಲಿಯಾಗಲಾರಂಭಿಸಿದ.

" ಬಾಬು ಸುಭಾಸ್ ಚಂದ್ರ ಬೋಸರ ಬಗ್ಗೆಯೇ ೨೪ ಗಂಟೆಮಾತು. ಪ್ರತಿಯೊಬ್ಬ ಸಿಪಾಯಿಯೂ ಆ ಪುಣ್ಯಾತ್ಮನ ಬಗ್ಗೆ ವರದಿ ಸಂಗ್ರಹಿಸಿ ನಮಗೆಲ್ಲ ಹೇಳಲು ಕಾತುರನಾಗಿದ್ದ. ನಾನೂ ಕುತೂಹಲದಿಂದ ಆ ವರ್ತಮಾನವನ್ನು ಕೇಳುತ್ತಿದ್ದೆ.

" ಅಲ್ಲಿನ ಸೈನಿಕರೆಲ್ಲ ಅತ್ಯಂತ ಪ್ರೀತಿಗೌರವಗಳಿಂದ ಸುಭಾಸ್ ಚಂದ್ರರಿಗೆ 'ನೇತಾ' ಎಂದು ಸಂಬೋಧಿಸುತ್ತಿದ್ದರು. ಪ್ರತಿ ಮಾತಿನಲ್ಲೂ ನೇತಾಜಿಗಾಗಿ ಪ್ರಾಣ ಅರ್ಪಿಸುತ್ತೇವೆ, ಎಂದು ಎಲ್ಲರೂ ನುಡಿಯಬೇಕು.

" ಪ್ರತಿದಿನ ಬೆಳಗ್ಗೆ ಡ್ರಿಲ್ ಮಾಡುವಾಗ 'ಜೈ ಹಿಂದ್' ಎಂದು ರಣಘೋಷಮಾಡುವುದು ವಾಡಿಕೆಯಾಯಿತು. ಅಲ್ಲದೆ:

" ಕದಮ್ ಕದಮ್ ಬಢಾಯೆ ಜಾ
ಖುಶೀಕೆ ಗೀತ್ ಗಾಯೆ ಜಾ
ಯಹ್ ಜಿಂದಗೀ ಹೈ ಕೌಮಕೀ
(ತೊ) ಕೌಮ್ ಪೇ ಲುಟಾಯೆ ಜಾ
ತೂಷೇರ್-ಎ-ಹಿಂದ್ ಆಗೇ ಭಡ್
ಮರನೇ ಸೇ ಫಿರ್‌ಭೀ ತೂನಡರ್
ಆಸ್ಮಾನ್ ತಕ್ ಉಡಾಕೆ ಸರ್
ಜೋಶೆ ವತನ್ ಭಢಾಯೆ ಜಾ
ತೇರಿಹಿಮ್ಮತ್ ಭಡೆ ತೀರಹೇ
ಖುದಾ ತೇರಿ ಸುನತಾ ರಹೇ
ಜೋಸಾಮ್‌ನೇ ತೇರೇ ಛಡೇ
ತೂಖಾಕ್ ಮೇಂ ಮಿಲಾಯೆ ಜಾ

ಚಲೋೕದಿಲ್ಲಿ ಪುಕಾರ್ ಕೇ
ಕೌಮಿಾ ನಿಶಾ೯ ಸಮಾಲ್ ಕೇ
ಲಾಲ್ ಕೀಲೇ ಗಾಢ್ ಕೇ
ಲಹರಾಯ್ ಜಾ ಲಹರಾಯ್ ಜಾ

ಎಂದು ಹಾಡುತ್ತಿದ್ದಾಗ ನೋಡಬೇಕು ಆ ಹುರುಪು; ಆ ಹುಮ್ಮಸ್ಸು; ಆ ದೇಶಪ್ರೇಮ, ಆ ತ್ಯಾಗಶೀಲ ಮನೋವೃತ್ತಿಯನ್ನು. ಸಂಜೀವಿನೀ ಕಡ್ಡಿಯಿಂದ ಮೃತ ಶರೀರಕ್ಕೆ ಜೀವಕಳೆ ಪುನಃ ಬರುತ್ತದಂತೆ. ಇದನ್ನು ನಾವು ಅಲ್ಲಿ ಪ್ರತ್ಯಕ್ಷ ನೋಡಿದೆವು.

" ನಮಗಾಗಿ ತೆಲಗು, ಮರಾಠಿ, ಹಿಂದಿ, ಇಂಗ್ಲಿಷ್ ಹಲವುಬಾರಿ ಕನ್ನಡದಲ್ಲಿ ಆಕಾಶವಾಣಿ ಭಾಷಣದ ಮೂಲಕ ಯುದ್ಧದ ದಿನಚರಿಯನ್ನು ತಿಳಿಸಲಾಗುತ್ತಿತ್ತು. ಜರ್ಮನಿಯ ಸೋಲುಗೆಲುವುಗಳನ್ನು ನಾವು ಆಗಾಗ ಅರಿಯುತ್ತಿದ್ದೆವು. ಬ್ರಿಟಿಷರ ಸೋಲನ್ನಂತೂ ನಾವು ಆಗಾಗ ಕೇಳುತ್ತಲೇ ಇದ್ದೆವು

" ಬಾಬು ಸುಭಾಸ್ ಚಂದ್ರಬೋಸರು ಆಗಾಗ ಸಿಂಗಾಪುರ ಆಕಾಶವಾಣಿಯಿಂದ ಮಾತನಾಡುತ್ತಿದ್ದರು. ಅವರ ಪ್ರತಿಯೊಂದು ಭಾಷಣದಲ್ಲೂ ಭಾರತ ಸ್ವತಂತ್ರವಾಗಬೇಕು. ಅದಕ್ಕಾಗಿ ಎಲ್ಲ ಐ. ಎನ್. ಎ. ಸೈನಿಕರೂ ಎಂಥ ತ್ಯಾಗಕ್ಕಾದರೂ ಸಿದ್ಧರಿರಬೇಕೆಂದು ತಿಳಿಸುತ್ತಿದ್ದರು.

" ನಮಗೆಲ್ಲ ಪ್ರತಿದಿನ ಕವಾಯಿತು, ಯುದ್ಧ ಶಿಕ್ಷಣ, ಗರಿಲ್ಲಾ ಯುದ್ಧದ ಚಾಕಚಕ್ಯತೆ, ಅಡವಿಯಲ್ಲಿ ಯುದ್ಧಮಾಡುವ ರೀತಿ ಇವುಗಳ ಬಗ್ಗೆ ಶಿಕ್ಷಣ ಕೊಡಲಾಗುತ್ತಿತ್ತು. ಅದರ ಜೊತೆಗೆ ಜಾಗತಿಕ ಪರಿಸ್ಥಿತಿ ಶಿಕ್ಷಣವೂ ನಮಗೆ ಸಿಕ್ಕುವಂತಾಯಿತು.

" ಭಾರತವೆಂದರೆ ಪರತಂತ್ರದೇಶ. ಅದನ್ನು ಬ್ರಿಟಿಷರೆಂಬುವರು ಸುಮಾರು ೧೫೦ ವರ್ಷಗಳಿಂದ ಆಳುತ್ತಿದ್ದಾರೆ. ಬ್ರಿಟಿಷರ ಆಳಿಕೆಯಿಂದ ಭಾರತ ಸ್ವತಂತ್ರವಾಗಿ ತನ್ನನ್ನು ತಾನೇ ಆಳುವಂತಾಗಬೇಕು, ಇದಕ್ಕಾಗಿ ಕಾಂಗ್ರೆಸ್ಸೆಂಬ ಒಂದು ಸಂಸ್ಥೆ ಕಳೆದ ೫೦ ವರ್ಷಗಳಿಂದ ಹೋರಾಡುತ್ತಿದೆ. ಮಹಾತ್ಮ ಗಾಂಧೀಜೀ ಅದರ ನಾಯಕರು, ಬಾಬು ಸುಭಾಸ್

ಚಂದ್ರ ಬೋಸರು ಕೂಡ ಗಾಂಧೀಜಿಯಂತೆಯೇ ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡುವಂಥವರು ; ಆದರೆ ಗಾಂಧೀಜಿಗೂ ಇವರಿಗೂ ಭೇದವಿದೆ. ಗಾಂಧೀಜಿ ಕೇವಲ ಅಹಿಂಸೆಯಿಂದ ಸ್ವರಾಜ್ಯಬೇಕು ಎನ್ನುತ್ತಾರೆ ; ಸುಭಾಸ್ ಬಾಬು ಅದು ಅಹಿಂಸೆಯಿಂದ ಸಾಧ್ಯವಿಲ್ಲ ಹೋರಾಡಿಯೇ ಸ್ವಾತಂತ್ರ್ಯವನ್ನು ಗಳಿಸಬೇಕು ಎನ್ನುತ್ತಾರೆ.

" ಇದೀಗ ಜಪಾನು ಇಡೀ ಏಷಿಯ ಖಂಡದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದೆ. ಜಪಾನಿಗಳು ನಮ್ಮ ಹೋರಾಟಕ್ಕೆ ಸಹಾಯ ಮಾಡುತ್ತಿದ್ದಾರೆ. ಆದ್ದರಿಂದ ಒಮ್ಮುಖರಾಗಿ ಹೋರಾಡಬೇಕು. ಸ್ವಾತಂತ್ರ್ಯವನ್ನು ಗಳಿಸಬೇಕು ಎಂದು ನಮಗೆ ಜ್ಞಾನೋದಯವಾಯಿತು

" ಇದೇ ರೀತಿಯಲ್ಲಿಯೇ ನಾವು ಜ್ಞಾನಾರ್ಜನೆಯ ಜೊತೆಗೆ ಸೈನಿಕ ಶಿಕ್ಷಣದ ನೈಜ ಪಾಠಗಳನ್ನು ಕಲಿಯಲಾರಂಭಿಸಿದೆವು. ಪ್ರತಿ ಕ್ಷಣದಲ್ಲೂ ನೇತಾಜಿಯ ಬಗ್ಗೆ ಹೊಸ ಹೊಸ ವಾರ್ತೆಗಳನ್ನು ಕೇಳುತ್ತಿದ್ದೆವು.

" ನೇತಾಜಿ ಜರ್ಮನಿಗೆ ಹೋಗಿ ಅಲ್ಲಿ ಯುದ್ಧ ಶಿಕ್ಷಣವನ್ನು ಪಡೆದು, ಅಲ್ಲಿಯೇ ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಐ. ಎನ್. ಎ. ದಳವನ್ನು ಸ್ಥಾಪಿಸಿ, ನಂತರ ಜಪಾನಿಗೆ ಬಂದು, ಜಪಾನ್ ಸರ್ಕಾರದವರ ಮುಖ್ಯಾಧಿಕಾರಿಗಳನ್ನು ಭೇಟಿ ಮಾಡಿ ಅವರಿಗೆ ತಮ್ಮ ಧ್ಯೇಯವನ್ನು ಮನದಟ್ಟು ಮಾಡಿಕೊಟ್ಟು, ಜಪಾನ್ ಸರ್ಕಾರದ ಅನುಮತಿಯ ಮೇರೆಗೇ ಬಾಬು ಸುಭಾಸ್ ಚಂದ್ರ ಬೋಸರು ಆಜಾದ್ ಹಿಂದ್ ಸರ್ಕಾರವನ್ನು ಪ್ರಾರಂಭಿಸಿದರೆಂಬ ಸಂಗತಿ ನಮಗೆ ತಿಳಿದಿತ್ತು. ನೇತಾಜಿಯ ಶೌರ್ಯ, ಸಾಹಸ, ದೇಶ ಪ್ರೇಮ, ತ್ಯಾಗಗಳ ಬಗ್ಗೆ ನಮಗೆಲ್ಲ ಹೆಮ್ಮೆಯೆನ್ನಿಸುತ್ತಿತ್ತು. ಆತನ ಬೆನ್ನ ನೆರಳಾಗಿ ನಾವೆಲ್ಲ ಸಾಗಬೇಕು ; ಡೆಲ್ಲಿಯ ರಕ್ತಕೋಟೆಯ ಮೇಲೆ ನಮ್ಮ ತ್ರಿವರ್ಣ ಧ್ವಜ ಹಾರಬೇಕು ಎಂದು ನಾವೆಲ್ಲ ಇಚ್ಛಿಸುತಿದ್ದೆವು.

" ಸ್ಪೀರ್ಟಹ್ಯಾಂ ಕೋಟೆಯಲ್ಲಿನ ಕೈದಿಗಳೆಲ್ಲ ಕ್ಯಾ. ಷಾ ನವಾಜ್ ಖಾನರ ಭಾಷಣ ಕೇಳಿ ಮುಗ್ಧರಾಗಿ ರಾಷ್ಟ್ರೀಯ ಸೈನ್ಯಕ್ಕೆ ಬಂದರೆಂಬ ವಾರ್ತೆಯನ್ನು ಕೇಳಿದೆವು. ಅಂದಮಾನ್, ನಿಕೋಬರ ದ್ವೀಪಗಳು ಆಜಾದ್ ಹಿಂದ್ ಸರ್ಕಾರದ ಕೇಂದ್ರ ವಲಯಗಳೆಂದು ತಿಳಿದೆವು ; ಬಂಗಾ

ಲದಲ್ಲಿಯೂ, ಮದ್ರಾಸಿನ ಕೆಲವು ಪ್ರದೇಶಗಳಲ್ಲೂ ಜಪಾನಿಗಳು ಬಾಂಬು ಹಾಕುತ್ತಿದ್ದಾರೆಂದೂ ಅದನ್ನು ನೇತಾಜಿ ತೀವ್ರವಾಗಿ ಪ್ರತಿಭಟಿಸಿದರೆಂದೂ ಕೇಳಿದೆವು. ಕೋಲಂಬೋ ಬಂದರಿಗೆ ಭಾರಿ ವಿಮಾನ ಧಾಳಿ ನಡೆಯಿತೆಂದು ನಮಗೆ ಆಕಾಶವಾಣಿಯಲ್ಲಿ ವಾರ್ತೆಬಂದಿತ್ತು. ಅತ್ತ ಯುರೋಪಿನಲ್ಲಿ ಜರ್ಮನರು ನುಗ್ಗುತ್ತಿರುವುದು ; ಅವರ ವಿಜಯ ಪರಂಪರೆಗಳ ಇತಿಹಾಸ ನಮಗೆ ತಿಳಿದಿತ್ತು.

"ರಾಷ್ಟ್ರೀಯ ಸೈನ್ಯಕ್ಕೆ ಸೇರದಿದ್ದವರಿಗೆ ಕ್ರೂರ ಶಿಕ್ಷೆ ಕೊಡಲಾಗುತಿತ್ತೇ?" ಎಂದು ಚಂದ್ರೂ ನಡುವೆ ಪ್ರಶ್ನೆಹಾಕಿದ.

"ಶಿಕ್ಷೆಯನ್ನೇತಕ್ಕೆ ಕೊಡಬೇಕು. ತಂದೆಯಂತೆ ಕಾಪಾಡುತ್ತಿದ್ದ ನೇತಾಜಿ ಇರುವಾಗ ನಮಗೇನು ಬಂದಿದೆ ಎಂದು ಸೈನಿಕರು ಸಂತೃಪ್ತರಾಗಿಯೇ ಇದ್ದರು, ಆ ಶಿಕ್ಷೆಗಿಕ್ಷೆಗಳ ಕಾಲ ಹಿಂದೆಯೇ ಮುಗಿದಿತ್ತು. ಐ. ಎನ್. ಎ. ದ ಪರಿಚಯ ಇಲ್ಲದ ದಿನಗಳಲ್ಲಿ ಹಲವರು ವಿರೋಧ ಗೈದಿರಬಹುದು. ಆಗ ಹಲವರಿಗೆ ಶಿಕ್ಷೆಯೂ ನಡೆದಿರಬಹುದು.

"ಹಲವಾರು ಕಡೆಗಳಲ್ಲಿ ಐ. ಎನ್. ಎ. ಗೆ ಸೈನಿಕರನ್ನು ಸೇರಿಸುವ ಕಾರ್ಯ ಅಖಂಡವಾಗಿ ಸಾಗಿತ್ತು. ಜಿತ್ರಾ ಎಂಬಲ್ಲಿ ಲೇ| ಡಿಲ್ಲಾನ್ ಮೇಜರ್ ಧಾರಾ ಇಬ್ಬರೂ ಐ. ಎನ್. ಎಗೆ ಸೇರಿದರೆ ಎಂಥ ಪಾರಿತೋಷಕಗಳು ಸಿಕ್ಕುತ್ತವೆಂದೂ, ಈ ಸೈನ್ಯ ದ್ರೋಹ ಗೈಯ್ಯುವಂಥಹುದಲ್ಲವೆಂದೂ, ಜಪಾನರು ಒಂದುವೇಳೆ ದ್ರೋಹ ಗೈದರೆ ಅವರ ಮೇಲೂ ಯುದ್ಧ ಹೂಡುವುದೆಂದೂ ತಿಳಿಸಿದರು.

"ರಾಷ್ಟ್ರಿಯ ಸೈನ್ಯದ ಶಕ್ತಿ ಬೆಳೆಯುತ್ತ ನಡೆಯಿತು. ಇನ್ನೇನು ಭಾರತಕ್ಕೆ ಸ್ವಾತಂತ್ರ್ಯ ಖಂಡಿತ ಬರುವುದೆಂದು ಎಲ್ಲರಿಗೂ ನಿಶ್ಚಯವಾಯಿತು. ನೇತಾಜಿ ನಮಗಾಗಿ ಊಟ ನಿದ್ರೆಗಳನ್ನು ಬಿಟ್ಟು ದುಡಿಯುತ್ತಿದ್ದಾರೆಂದು ಕೇಳಿಯಂತೂ ನಮ್ಮ ಮೈ ಜುಂ ಎನ್ನುತಿತ್ತು. ಆ ಪುಣ್ಯಾತ್ಮನಿಗಾಗಿ ನಾವೆಲ್ಲ ಪ್ರಾಣವನ್ನು ಅಂಗೈ ನೆಲ್ಲಿಯಾಗಿ ಮಾಡಬೇಕೆಂಬ ಹುಮ್ಮಸ್ಸು ಪ್ರತಿ ಕ್ಷಣದಲ್ಲಿಯೂ ಅನಿಸುತ್ತಿತ್ತು."

೯

"ಆಜಾದ್ ಸರ್ಕಾರಕ್ಕಾಗಿ ನೇತಾಜಿ ಹಣಬೇಕೆಂದು ಕೊಂಚ ಸೂಚನೆ ಇತ್ತದ್ದೇ ತಡ ಲಕ್ಷಾಂತರ ರೂ. ಬೆಲೆ ಬಾಳುವ ಹೊನ್ನಿನಾಭರಣಗಳ ಮಳೆಯೇ ಸುರಿಯಿತು. ನೇತಾಜಿ ದೇವರು. ಆತನೇ ಕೃಷ್ಣ ಕಲಿಯುಗದಲ್ಲಿ ; ಆತನೇ ಬುದ್ಧ ; ಆತನೇ ಕ್ರಿಸ್ತ ; ಆತನೇ ಅಲ್ಲಾ ; ಎಂದು ಇಡೀ ಪೂರ್ವ ಏಷ್ಯದ ಜನಾಂಗದ ನಂಬಿಕೆಯಾಗಿ ಹೋಗಿತ್ತು. ನೇತಾಜಿಯ ದರ್ಶನ ಮಾಡಿದರೆ ಇಹ ಜನ್ಮದಿಂದ ಮುಕ್ತಿಯಾಗುವುದೆಂದು ಮಲಯ, ಬೋರ್ನಿಯೋ, ಬರ್ಮಾ ಮೊದಲಾದ ಪ್ರದೇಶಗಳಲ್ಲಿನ ಹಿರಿಯ ಸ್ತ್ರೀ ಪುರುಷರ ನಂಬಿಕೆಯಾಗಿತ್ತು. ಬುದ್ಧನ ಪ್ರತಿ ಅವತಾರವೆಂದು ಅನೇಕ ಜಪಾನೀ ಅಧಿಕಾರಿಗಳೂ, ಜಪಾನೀ ಸಾರ್ವಜನಿಕರು ನಮ್ಮ ನೇತಾಜಿಯನ್ನು ಗೌರವಿಸುತ್ತಿದ್ದರು ಜಪಾನ್ ಸಾಮ್ರಾಟರಿಗೆ ಒಂದು ವೇಳೆ ಅಗೌರವವನ್ನು ತೋರಲು ಸಿದ್ಧರಾಗಬಹುದಾಗಿದ್ದ ಜಪಾನ್ ಸೈನ್ಯಾಧಿಕಾರಿಗಳು, ಸೈನಿಕರು ನೇತಾಜಿಯನ್ನು ಪ್ರತ್ಯಕ್ಷ ದೇವರಂತೆ ಕಾಣುತ್ತಿದ್ದರು. ಒಂದು ಬಾರಿ ನೇತಾಜಿ ಟೋಕಿಯೋ ನಗರದಲ್ಲಿ ಜಪಾನ್ ಸಾರ್ವಭೌಮರನ್ನು ಕಂಡು ಮಾತನಾಡಿದರಂತೆ. ಅಲ್ಲಿನ ಮಂತ್ರಿ ಮಂಡಲದ ಮೇಲಧಿಕಾರಿಗಳೆಲ್ಲ ನೇತಾಜಿಗೆ ಅಭೂತಪೂರ್ವ ಗೌರವ ತೋರಿದರಂತೆ. ಅಲ್ಲದೆ ಆತನೂ ಇಡೀ ಏಷ್ಯಾಖಂಡದ ಸಾರ್ವಭೌಮನೆಂದು ಅವರು ತಿಳಿದಿದ್ದರಂತೆ.

"ಜರ್ಮನಿಯಲ್ಲಿ ಇದ್ದಾಗಲೂ ನೇತಾಜಿಯನ್ನು ಹೆರ್ ಹಿಟ್ಲರ್ ಕೂಡ ಅತ್ಯಂತ ಆದರ ಗೌರವದಿಂದ ಸತ್ಕರಿಸಿದನಂತೆ. ಅಲ್ಲದೆ ನೇತಾಜಿ ಭಾರತದ "ಫ್ಯೂರರ್" ಎಂದು ಸಂಬೋಧಿಸಿದನಂತೆ. ಹಿಟ್ಲರ್-ಮುಸೋಲಿನಿಗಳು ಕೂಡ ನೇತಾಜಿಯನ್ನು ಅವರ್ಣನೀಯ ಆದರ ವಿಶ್ವಾಸಗಳಿಂದ ಕಂಡು ಭಾರತ ಸ್ವಾತಂತ್ರ್ಯಕ್ಕೆ ಅವರೂ ತಮ್ಮ ಸೌಹಾರ್ದವನ್ನು ವ್ಯಕ್ತಪಡಿಸಿದ್ದರಂತೆ.

"ಜರ್ಮನಿಯಲ್ಲಿ ನಮ್ಮ ನೇತಾಜಿ ಯುದ್ಧ ಶಿಕ್ಷಣ ಪಡೆದು, ಎಲ್ಲ ಪರೀಕ್ಷೆಗಳನ್ನು ಮುಗಿಸಿಕೊಂಡು ಜಲಾಂತರ್ಗಾಮಿಯಲ್ಲಿ ಜಪಾನಿಗೆ

ಬಂದು ಜರ್ಮನ್ ಸರ್ಕಾರದ ಅನುಮತಿ ಮೇರೆಗೆ ಸ್ವತಂತ್ರ ಭಾರತ ಸರ್ಕಾರ (ಆಜಾದ್ ಹಿಂದ್ ಗವರ್ನ್‌ಮೆಂಟ್) ಸ್ಥಾಪಿಸಿ ಅದಕ್ಕೆ ಅವರೇ ಮುಖ್ಯ ಮಂತ್ರಿಯಾದರು. ಈ ಸರ್ಕಾರ ಜಪಾನೀ ಕೈಕೆಳಗೆ ಇದ್ದುದಲ್ಲ. ಇದೇ ಸ್ವತಂತ್ರವಾದದ್ದು.

"ನೇತಾಜಿಯ ಸರ್ಕಾರ ರಾಮರಾಜ್ಯದಂತಿತ್ತು. ಎಲ್ಲರಿಗೂ ಸರಿಸಮಾನತೆ. ಕರ್ನಲ್ ಅಧಿಕಾರಿಗೂ ಕಸ ಗುಡಿಸುವವನಿಗೂ ಏನೂ ವ್ಯತ್ಯಾಸವಿರಲಿಲ್ಲ. ಕಾರ್ಯ ರಂಗದಲ್ಲಿ ಅವರವರು ತಮ್ಮ ತಮ್ಮ ಕೆಲಸ ಮಾಡಬೇಕು ಅಷ್ಟೇ. ಜಾತಿ ಭೇದವಿಲ್ಲ. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಶೀಖ್ ಮೊದಲಾದ ಜಾತಿಯವರೆಲ್ಲ ಒಂದೇ ಕುಟುಂಬದವರಂತೆ ಇದ್ದೆವು.

"ರೋಗಿಗಳಿಗೆ ವೈದ್ಯ ಸಹಾಯ, ಹಸಿದವರಿಗೆ ಸಾಕಷ್ಟು ಅನ್ನ, ಬಟ್ಟೆಯಿಲ್ಲದವರಿಗೆ ಬಟ್ಟೆ ಎಲ್ಲವೂ ಸರಿಯಾಗಿ ಸಿಕ್ಕುವ ವ್ಯವಸ್ಥೆಯನ್ನು ನೇತಾಜಿ ಮಾಡಿದರು. ಎಲ್ಲೋ ಕೊಳೆಯುತ್ತ ಬಿದ್ದಿದ್ದ, ಜಪಾನಿಗಳ ಕೈಗೆ ಶಿಕ್ಷೆಗಳಿಗೆ ಗುರಿಯಾಗಿ ಚಿತ್ರ ಹಿಂಸೆಗಳನ್ನು ಅನುಭವಿಸುವ ನರಕದಿಂದ ಹೊರ ತೆಗೆದು, ಸ್ವಾತಂತ್ರ್ಯ ವಾತಾವರಣದಲ್ಲಿ ಸಿಂಹಗಳಾಗಿ ತಿರುಗಾಡುವಂತೆ ಮಾಡಿದ ನೇತಾಜಿ ನಮ್ಮ ಪಾಲಿಗೆ ದೇವರಲ್ಲದೆ ಮಾನವರೇನು? ಹೊಟ್ಟೆಗಿಲ್ಲದೆ ಕಂದಿ ಕುಂದಿದಾಗ ನಮಗೆಲ್ಲ ಅನ್ನವಿತ್ತು ಬದುಕಿಸಿ ಪ್ರಾಣದಾನ ಮಾಡಿದ ನೇತಾಜಿ ದೇವರಲ್ಲದೆ ಮತ್ತೇನು? ಆತನ ಪ್ರತಿಯೊಂದು ಕರ್ಮವೂ ದೇವ ಕರ್ಮ ಅಂತೆಯೇ ಆತನಲ್ಲಿ ನಮ್ಮ ಸೈನಿಕರೆಲ್ಲ ಅಷ್ಟು ವಿಶ್ವಾಸವಿಟ್ಟಿದ್ದರು; ನಂಬಿದ್ದರು.

"ಆ ದಿನ ನೇತಾಜಿಯ ಭಾಷಣ ಏರ್ಪಟ್ಟಿತ್ತು. ನಾವೆಲ್ಲ ನೇತಾಜಿಯ ಗುಣ ಕಥನವನ್ನು ಕೇಳಿದ್ದೆವಷ್ಟೆ. ರೇಡಿಯೋ ಮೂಲಕ ಆತನ ಭಾಷಣಗಳನ್ನು ಕೇಳಿ ಹರ್ಷಿತರಾಗುತ್ತಿದ್ದೆವು. ಜನತೆಯ ನಾಡಿನಾಡಿಗಳಲ್ಲೆಲ್ಲ ಅದು ಪ್ರತಿ ಧ್ವನಿತವಾಗುತ್ತಿತ್ತು. ನೇತಾಜಿಯನ್ನು ಒಮ್ಮೆ ಕಣ್ಣಾರ ಕಾಣಬೇಕೆಂದು ನಮ್ಮ ಅಭಿಲಾಷೆಯಾಗಿತ್ತು. ಯಾವ ಹೊತ್ತಿಗೆ ನೋಡೇವೋ ಎಂದು ದಿನಗಳನ್ನು ಎಣಿಸುತ್ತಲಿದ್ದಾಗ ಆ ಶುಭ ದಿನ ಬಂದಿತು.

"ಪ್ರಚಂಡ ಸಭೆ ಮಾನವರ ತಲೆಗಳು ಸಮುದ್ರದಂತೆ ನೆರೆದಿದ್ದವು. ಅಂದು ನೇತಾಜಿ ಸಂಪೂರ್ಣ ಸೈನಿಕ ಪೋಷಾಕಿನಲ್ಲಿ ವೇದಿಕೆಗೆ ಬಂದರು. ಎಲ್ಲರೂ ಒಂದೇ ಬಾರಿಗೆ ಎದ್ದವರೇ **"ಜೈ ಹಿಂದ್"** ಎಂದು ವಂದನೆ ಮಾಡಿದರು. ನೇತಾಜಿ ಪ್ರತಿಯಾಗಿ ವಂದಿಸಿದರು.

"ನೋಡಿದೆ ಹೌದು ಕಣ್ಣು ತುಂಬ ನೋಡಿದೆ ನೇತಾಜಿಯ ಆ ದಿವ್ಯ ವಿಗ್ರಹವನ್ನು—ಮಾನವ ರೂಪದಲ್ಲಿ ಬಂದ ಆ ಪುಣ್ಯ ಪುರುಷನನ್ನು, ನಮ್ಮೆಲ್ಲರನ್ನು ಬದುಕಿಸಿದ ದೇವಮಾತನನ್ನು ನೋಡಿದೆ ಕಣ್ಣು ನೋಯುವ ವರೆಗೆ ನೋಡಿದೆ ಎಷ್ಟು ಬಾರಿ ನೋಡಿದರೂ ತೃಪ್ತಿಯಾಗಲಿಲ್ಲ. ಕಣ್ಣು ಮಿಟುಕಿಸದೆ ಹಾಗೇ ನೋಡುತ್ತಲೇ ಇದ್ದೆ.

"ನೇತಾಜಿ ಎದ್ದರು ಗಗನ ಮಂಡಲ ಹಾರಿ ಹೋಗುವಂತೆ ಸೈನಿಕರು ಜಯಕಾರ ಮಾಡಿದರು. ನೇತಾಜಿ ಭಾಷಣಕ್ಕಾರಂಭಿಸಿದರು

'ದೆಹಲಿಯ ಪ್ರಯಾಣಕ್ಕೆ ನಾವು ಸನ್ನದ್ಧರಾಗಬೇಕು. ತುಂಬ ಕಾಲದಿಂದ ಈ ಯಾತ್ರೆ ಉಳಿದಿದೆ. ಆರಾಕಾನಿನ ಪರ್ವತ ಶ್ರೇಣಿಗಳ ಮೇಲೆ ಶೋಭಾಯಮಾನವಾಗಿ ಹಾರುತ್ತಿರುವ ಈ ತ್ರಿವರ್ಣ ಧ್ವಜ ಡೆಲ್ಲಿಯ ವೈಸ್ರಾಯ್ ಭವನದ ಮೇಲೆ ಹಾರಬೇಕು. ಅಲ್ಲಿಯವರೆಗೆ ನಮ್ಮ ಹೆಜ್ಜೆಗೆ ಶಾಂತಿಯಿಲ್ಲ. ಸ್ಥಿರ ಚಿತ್ತದಿಂದ ಸಾಗಬೇಕು ವೀರ ರಂತೆ ಮುನ್ನುಗ್ಗಬೇಕು "ಚಲೋ ದಿಲ್ಲಿ" ಇದು ನಮ್ಮ ರಣ ಘೋಷಣೆ' ಎಂದರು

"ಪ್ರತಿಯೊಂದು ಅಕ್ಷರವೂ ನಮ್ಮ ಹೃದಯದಲ್ಲಿ ನಿಂತಿತು. ಆವರೆ ನೇತಾಜಿಯ ಮಾತು ಮುಗಿತ್ತು. ಸ್ವಲ್ಪ ಹೊತ್ತಿನ ತರುವಾಯ ನೇತಾಜಿ ತೆರಳಿದರು.

"ಸ್ತ್ರೀಯರಿಗಾಗಿ, ಬಾಲಕರಿಗಾಗಿ ನೇತಾಜಿ ಸೈನಿಕ ತಂಡಗಳನ್ನು ಏರ್ಪಡಿಸಿದ್ದರು. ಎಲ್ಲರಿಗೂ ಅದೇ ಶಿಕ್ಷಣ; ಅದೇ ಮಂತ್ರ ಅಬಾಲ ಸ್ತ್ರೀ ವೃದ್ಧರು ಕನಸು ಮನಸಿನಲ್ಲೂ ಸ್ವಾತಂತ್ರ್ಯ ಸ್ವಾತಂತ್ರ್ಯ ಎಂದು ಕನವ ರಿಸುತ್ತಿದ್ದರು.

"ಒಂದು ಬಾರಿ ನೇತಾಜಿ ಮಲಯದಲ್ಲಿ ಸುತ್ತುತ್ತಿದ್ದರಂತೆ ಅಲ್ಲಿನ ಜನರೆಲ್ಲ ಆಕಾಶವಾಣಿ ಮೂಲಕ ನೇತಾಜಿ ಒಗ್ಗೆ ಸಾಕಷ್ಟು ಕೇಳಿದ್ದರು. ಸರಿ ಊರ ಹೆಂಗಸರು, ಮಕ್ಕಳು, ಹಿರಿಯರು, ಕಿರಿಯರು ಓಡಿಬಂದು ನೇತಾಜಿಗೆ ಮುತ್ತಿದರು ಆತನ ಪಾದ ಮುಟ್ಟಿ ನಮಸ್ಕರಿಸಿ ಧನ್ಯರಾಗಲು ಬಯಸಿದರು.

"ನೇತಾಜಿ ಒಪ್ಪಲಿಲ್ಲ. ಜನ ಸಂದಣಿಯ ಬಯಕೆ ಹೆಚ್ಚಾಯಿತು. ಕೊನೆಗೆ ನೇತಾಜಿ ಕಾಲಲ್ಲಿಯ ಬೂಟು ಬಿಚ್ಚಿ ಜನಗಳ ಮಧ್ಯದಲ್ಲಿ ಬಂದರು. ನಿಂತರು. ಸಹಸ್ರಾರು ಜನ ಒಮ್ಮೆಗೇ ನೇತಾಜಿಯ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಅನೇಕರ ಕಣ್ಣಿನಲ್ಲಿ ದಳದಳನೆ ಆನಂದ ಬಾಷ್ಪಗಳು ಸುರಿದವು.

"ನೇತಾಜಿ ನಡೆದು ಹೋದ ಸ್ಥಳದ ಮಣ್ಣು ಪುನೀತವಾಯಿತು ಅದನ್ನೇ ಲಕ್ಷಾಂತರ ಜನ ವಿಭೂತಿಯಂತೆ ಹಣೆಯಲ್ಲಿ ಪೂಸಿಕೊಂಡರು.

"ಇಷ್ಟಕ್ಕೇ ಮುಗಿಯಲಿಲ್ಲ ಹೆಂಗಸರೆಲ್ಲ ತಮ್ಮ ಬಂಗಾರದ ಆಭರಣಗಳನ್ನು ನೇತಾಜಿಗೆ ಅರ್ಪಿಸಿದರು. ಬರ್ಮಾದಲ್ಲೂ ನಡೆದ ಈ ರೀತಿಯ ಉದಾಹರಣೆಗಳು ಬೇಕಾದಷ್ಟಿವೆ. ಒಂದು ಬಾರಿ ಬರ್ಮಾದ ಭಾರಿ ಸಭೆಯಲ್ಲಿ ನೇತಾಜಿಯ ಕರವಸ್ತ್ರ ಹರಾಜಾದರೆ ೧೦ ಲಕ್ಷ ರೂಪಾಯಿ ಬೆಲೆಬಾಳಬೇಕೆ! ಆತ ಮುಟ್ಟಿದ್ದು ಚಿನ್ನವಾಗುತ್ತಿತ್ತು. ಸತ್ತವಸ್ತು ಸಜೀವವಾಗುತ್ತಿತ್ತು

"ನೇತಾಜಿಗೆ ವಿಶ್ರಾಂತಿ ಎಂಬುದು ಗೊತ್ತೇ ಇರಲಿಲ್ಲ. ಪ್ರಾಯಶಃ ಆತ ಕೇವಲ ೨ ಗಂಟೆಗಳ ಕಾಲ ನಿದ್ರೆ ಮಾಡಿದರೆ ಹೆಚ್ಚೆಂದು ತೋರುತ್ತದೆ. ಯಾವಾಗಲೂ ಸೈನಿಕರ ಶಿಬಿರಗಳನ್ನು ಪರಿಶೀಲಿಸುವುದು, ಆಸ್ಪತ್ರೆಗಳನ್ನು ಸಂದರ್ಶಿಸುವುದು, ಎಲ್ಲರ ಯೋಗ ಕ್ಷೇಮವನ್ನು ವಿಚಾರಿಸುವುದು, ಆಜಾದ್ ಸರ್ಕಾರದ ಆಡಳಿತವನ್ನು ನೋಡಿಕೊಳ್ಳುವುದು—ಇದೇ ಕಾರ್ಯ ಕ್ರಮದಲ್ಲೇ ಆತನ ವೇಳೆಯೆಲ್ಲ ಕಳೆದು ಹೋಗುತ್ತಿತ್ತು. ಊಟ ನಿದ್ರೆ ವಿಶ್ರಾಂತಿಗಾಗಿ ನೇತಾಜಿ ಕೊನೆಯ ತನಕ ಬಯಸಲೇ ಇಲ್ಲ.

"ರಾಷ್ಟ್ರೀಯ ಸೈನಿಕರು ಕೈಕೊಳ್ಳಬೇಕಾದ ಕಾರ್ಯ ಕ್ರಮವನ್ನು ಆಕಾಶವಾಣಿಯಲ್ಲಿ ಹೇಳಲಾಗುತ್ತಿತ್ತು. ಅಲ್ಲದೆ ಆಯಾ ಶಿಬಿರದ ದಂಡ ನಾಯಕರೂ ಆಗಾಗ ಬಂದು ಕಲಿಸುತ್ತಿದ್ದರು. ಎಷ್ಟೋ ಸಲ ನಮ್ಮ ನಾಯಕರೊಂದಿಗೆ ಜಪಾನೀ ದಂಡನಾಯಕರೂ ಬಂದು ನಮ್ಮ ಕಾರ್ಯ ಕ್ರಮಗಳನ್ನು ನೋಡಿಕೊಂಡು ಹೋಗುತ್ತಿದ್ದರು.

"ರಂಗೂನ್ ವಶವಾದ ದಿನ ನಮಗೆಲ್ಲ ವಿಶೇಷ ಭೋಜನ ಕೂಟವೇ-ರ್ಪಟ್ಟಿತ್ತು. ಇನ್ನೇನು ಭಾರತ ಸಮೀಪದಲ್ಲೇ ಉಳಿಯಿತು. ದಿಲ್ಲಿಯ ವೈಸ್ರಾಯ್ ಭವನದ ಮೇಲೆ ತ್ರಿವರ್ಣ ಧ್ವಜ ಹಾರಿಸುವ ದಿನ ಸಮೀಪಿಸಿ ತೆಂದು ನಮ್ಮ ಸೈನಿಕರೆಲ್ಲ ಉತ್ಸುಕರಾಗಿದ್ದರು

"ಸ್ವಲ್ಪ ದಿನಗಳ ನಂತರ ನಮ್ಮನ್ನು ಬರ್ಮಾ ಕ್ಷೇತ್ರಕ್ಕೆ ಸಾಗಿಸ ಲಾಯಿತು. ಅಲ್ಲಿ ಹಲವು ಕಡೆಗೆ ಇನ್ನೂ ಯುದ್ಧ ಸಾಗಿಯೇ ಇತ್ತು. ನಾವೆಲ್ಲ ಈ ಸನ್ನಿವೇಶವಲ್ಲಿ ಯುದ್ಧ ಸಾಗಿಸುತ್ತಿದ್ದಾಗ ಅದೊಂದು ಬಗೆಯ ಹುರುಪು; ಎಷ್ಟು ಹೊಡೆದಾಡಿದರೂ ದಣಿವೆನಿಸುತ್ತಿದ್ದಿಲ್ಲ.

"ರಾತ್ರಿ ಹಗಲುಗಳನ್ನು ನಿರಾಯಾಸವಾಗಿ ಕಳೆಯುತ್ತಿದ್ದೆವು. ನಮ್ಮೆ ಲ್ಲರ ಹತ್ತಿರ ಜಪಾನೀ ವಾಯರ್‌ಲೆಸ್ ಸೆಟ್ಟುಗಳು ಇದ್ದುವು. ಅವುಗಳ ಮೂಲಕ ನೇತಾಜಿಯ ಚಟುವಟಿಕೆಯನ್ನೂ ತಿಳಿಯುತ್ತಿದ್ದೆವು.

"ಚಿಂದ್ವಿನ್ ಪ್ರದೇಶದಲ್ಲಿ ಹೋರಾಡುತ್ತಿದ್ದಾಗಿನ ಒಂದು ಸನ್ನಿವೇಶದ ಬಗ್ಗೆ ಹೇಳದೆ ನನ್ನ ಕತೆಯನ್ನು ಮುಂದುವರಿಸಲಾರೆ.

"ಭಾರಿ ಅಡವಿ. ಆಕಾಶದ ಎತ್ತರ ಬೆಳೆದ ಘೋರ ವೃಕ್ಷರಾಶಿ. ಒಬ್ಬರ ಮುಖ ಒಬ್ಬರಿಗೆ ಕಾಣದಂತೆ ಗಿಡದೆಲೆಗಳು ಹಬ್ಬಿವೆ. ಮನುಷ್ಯನ ಎತ್ತರ ಬೆಳೆದ ಹುಲ್ಲು. ತರತರದ ಕ್ರೂರ ಜಂತುಗಳು. ಒಂದು ಹೆಜ್ಜೆ ಯನ್ನು ಮುಂದಿಕ್ಕಬೇಕಾದರೂ ಗಿಡಗಳನ್ನು ಕಡಿದು ಹಾದಿಮಾಡಿಕೊಳ್ಳ ಬೇಕು. ಆಹಾರ ಹೊರಗಿನಿಂದ ಬರುವುದು ತೀರ ದುಸ್ತರವಾಗಿತ್ತು. ಎಷ್ಟೋ ದಿನ ಅಡವಿ ಗಿಡಗಳ ಕಸುಗಾಯಿಗಳನ್ನೂ, ಹಣ್ಣುಗಳನ್ನೂ ತಿಂದು ಹೊಟ್ಟೆಹೊರೆಯಬೇಕಾಗಿತ್ತು.

"ಈ ಸನ್ನಿವೇಶದಲ್ಲಿ ನಮ್ಮ ಸೈನಿಕರಿಗೆ ವಿಶೇಷವಾಗಿ ಬಟ್ಟೆಯ ಅಭಾವ ವಿಪರೀತವಾಗಿತ್ತು. ವಿಪರೀತ ಚಳಿ. ಮೈ ನಡುಗುತ್ತಿತ್ತು. ಆದರೆ ಯಾರೂ ಹಿಂಜರಿಯಲಿಲ್ಲ. ಬಟ್ಟೆಯ ಅಭಾವವು ಹೇಗೆ ವಿಶೇಷವಾಗಿತ್ತೋ ಹಾಗೆಯೇ ಆಹಾರ ಕೂಡ ಇಲ್ಲವಾಗಿತ್ತು. ಎಷ್ಟೋ ಜನ ಪ್ರಾಣ ನೀಗಿದರು. ಪ್ರಾಣ ನೀಗಿದವರೊಬ್ಬರೂ ತಮ್ಮ ಮರಣಕ್ಕಾಗಿ ಚಿಂತಿಸಲಿಲ್ಲ

"ಒಂದು ಬಾರಿ ನಾವೆಲ್ಲ ಚಿಂದ್ವಿನ್ ಕೊಳದ ಪ್ರದೇಶದಲ್ಲಿ ಸಾಗಿದ್ದೆವು. ಒಬ್ಬ ಸೈನಿಕ ಮೃತ್ಯು ಮುಖನಾಗಿದ್ದ. ಆತ ಹೇಳಿದ ಕೊನೆಯ ಮಾತುಗಳಿವು :

"ನಾನು ಶೀಘ್ರವಾಗಿಯೇ ವೀರಸ್ವರ್ಗವನ್ನು ಸೇರುತ್ತೇನೆ. ಮರಣ ಬರುವ ತನಕ ನಾನು ನೇತಾಜಿಗೆ ನೈಜ ಸೇವಕನಾಗಿ, ಭಾರತ ಮಾತೆಯ ನೈಜ ಪುತ್ರನಾಗಿ, ಸ್ವಾತಂತ್ರ್ಯ ಸಂಗ್ರಾಮದ ನೈಜ ಯೋಧನಾಗಿ ಹೋರಾಡಿ ಸಾಯುತ್ತಿದ್ದೇನೆ. ನಾನು ನನ್ನ ಮರಣಕ್ಕಾಗಿ ಚಿಂತಿಸುತ್ತಿಲ್ಲ. ಬದಲು ನನಗೆ ಹೆಮ್ಮೆ ಎನಿಸುತ್ತದೆ. ನೇತಾಜಿಗೆ ನನ್ನ ಸಂದೇಶವನ್ನು ದಯವಿಟ್ಟು ತಿಳಿಸಿರಿ. ಅಲ್ಲದೆ ದೇವರು ನೇತಾಜಿಗೆ ಸಾವಿರ ವರ್ಷ ಆಯುಷ್ಯ ದಯಪಾಲಿಸಲಿ. ನೇತಾಜಿಗೆ ನನ್ನ ಕೊನೆಯ ವಂದನೆಗಳು. ಜೈ ಹಿಂದ್' ಎಂದು ಕಣ್ಣು ಮುಚ್ಚಿದ.

"ಆತನ ಶ್ರದ್ಧಾಭಕ್ತಿಯನ್ನು ಕಂಡು ನಾವೆಲ್ಲ ಮೂಕ ವಿಸ್ಮಿತರಾದೆವು ಆದರೆ ಐ. ಎನ್. ಎ. ಗೆ ಸೇರಿದ ಪ್ರತಿಯೊಬ್ಬ ಸಿಪಾಯಿ ಇದೇ ರೀತಿಯ ದೇಶಭಕ್ತಿಯುಳ್ಳವನಿದ್ದ. ಸಾಮಾನ್ಯವಾಗಿ ಯಾರನ್ನಾದರೂ ಕೇಳಿದರೆ ನೇತಾಜಿಯನ್ನು ನೋಡಿದರೆ ಅದೇನೋ ಆಗಿ ಬಿಡುತ್ತದೆ. ಆತನ ಮಾತು ಕೇಳಿದರೆ ಅದೇನೋ ಸ್ಫೂರ್ತಿ ಬರುತ್ತದೆ ಎಂದು ಹೇಳುತ್ತಿದ್ದವರನ್ನು ನಾನು ಎಷ್ಟೋ ಬಾರಿ ಕೇಳಿದ್ದೇನೆ.

"ದೇವರ ದಯೆಯಿಂದ ನಾನು ಮಾತ್ರ ಸಿಂಗಪುರದ ಬಳಿ ಶಿಬಿರದಲ್ಲೇ ಹೆಚ್ಚು ಕಾಲ ಇದ್ದವನು. ನನ್ನ ಅನೇಕ ಮಿತ್ರರು ಬೇರೆ ಬೇರೆ

ರಣಕ್ಷೇತ್ರಕ್ಕೆ ತೆರಳಿದ್ದರು. ಆಗಾಗ ಹಲವರು ನಮ್ಮ ಶಿಬಿರಕ್ಕೆ ಬಂದು ಕೆಲಕಾಲ ಇದ್ದು ಮತ್ತೆ ತೆರಳುತ್ತಿದ್ದರು.

“ಜಪಾನೀ ವಿಜಯದ ವಾರ್ತೆ ದಿನದಿನವೂ ಬರುತ್ತಲೇ ಇತ್ತು. ಅದರ ಜೊತೆಗೆ ನಮ್ಮ ಸೈನಿಕರು ಬರ್ಮಾದ ಭೀಕರ ಕದನದಲ್ಲಿ ಪ್ರಾಣದ ಹಂಗು ತೊರೆದು ಹೋರಾಡುತ್ತಿದ್ದ ವಾರ್ತೆಯೂ ನಮಗೆ ತಪ್ಪದೆ ಬರುತ್ತಿತ್ತು.

“ಒಂದು ದಿನ ಒಮ್ಮಿಂದೊಮ್ಮೆಗೆ ಭಾರಿ ಸುದ್ದಿಯನ್ನು ಆಕಾಶವಾಣಿ ಸಾರಿತು. ಅದು ಏಪ್ರಿಲ್ ೨೮ನೇ ತಾರೀಖು. ಮುಸಲೋನಿಯನ್ನು ನಿಲ್ಲಿಸಿ ಗುಂಡಿಕ್ಕಿ ಕೊಲ್ಲಲಾಯಿತು. ಮುಂದೆರಡು ದಿನಗಳಲ್ಲೇ ಹಿಟ್ಲರ್ ಸತ್ತ, ಅವನ ಸ್ಥಾನಕ್ಕೆ ಡೊನೆಟ್ಜ್ ಬಂದ. ೧೯೪೫ರ ಮೇ ೨ ನೇ ತಾರೀಖಿನ ದಿವಸ ಬರ್ಲಿನ್ ರಷ್ಯನ್ನರ ವಶವಾಯಿತೆಂದು ವಾರ್ತೆ ಕೇಳಿದೆವು. ಆದರೆ ನಮ್ಮ ನೇತಾಜಿ ಮಾತ್ರ ಆಗಾಗ ಹೇಳುತ್ತಲೇ ಇದ್ದರು:

> ‘ಜಗತ್ತಿನ ಯಾವ ಶಕ್ತಿಯೂ ಭಾರತವನ್ನು ದಾಸ್ಯ ಕೂಪದಲ್ಲಿ ತಳ್ಳಲು ಸಾಧ್ಯವಿಲ್ಲ. ನಮ್ಮ ಧ್ಯೇಯ, ಗುರಿ ಎಲ್ಲಾ ಭಾರತ ಸ್ವಾತಂತ್ರ್ಯ. ನಾವು ಉಸಿರಾಡುತ್ತಿರುವುದು ಭಾರತ ಸ್ವಾತಂತ್ರ್ಯಕ್ಕಾಗಿ. ದೇವರು ನಮಗೆ ದಾರಿ ತೋರಿದ್ದಾನೆ. ಆತ ನಮ್ಮ ಬೆಂಗಾವಲಿಗಿರುವಾಗ ನಮಗಾವ ಭೀತಿ? ನಮ್ಮ ದಾರಿಯಲ್ಲಿ ಏನು ಅಡ್ಡ ಬಂದೀತು”

“ಈ ಸಮಯಕ್ಕಾಗಲೇ ನಮ್ಮ ಸೈನಿಕರು ವಿಪರೀತ ಕಷ್ಟ ನಷ್ಟಗಳಿಗೊಳಗಾಗುತ್ತಲಿದ್ದರು. ಚಿಡ್ವಿಂ ರಣಕ್ಷೇತ್ರದಲ್ಲಿ ಅದೆಷ್ಟೋ ಘೋರ ಗಂಡಾಂತರಗಳು ಕಾಲಿಗೆ ಮುಳ್ಳಾಗಿ ಮುರಿದವು. ಏನೇ ಬರಲಿ ನಮ್ಮ ಓಟ, ಹೋರಾಟ ನಿಲ್ಲದೆಂದು ರಾಷ್ಟ್ರೀಯ ಸೈನಿಕರು ನಿಶ್ಚಯ ಮಾಡಿದ್ದರು.

“ಜನರಲ್ ಹೋಟಿ ಕುಚಿ (ಜಪಾನೀ ದಂಡನಾಯಕ) ಒಂದು ಬಾರಿ ರಾಷ್ಟ್ರೀಯ ಸೈನಿಕರನ್ನು ನೋಡಿಕೊಂಡು ಹೋದರು. ಅವರ ಜೊತೆಗೆ ಕ್ಯಾ॥ ಷಾನವಾಜ್ ಖಾನ್ ಕೂಡ ಬಂದಿದ್ದರು.

"ಒಂದು ದಿನ ರಾತ್ರಿಯಲ್ಲಿ ನಮ್ಮ ದಂಡನಾಯಕರು ಬಂದು ವಿಮಾನ ಪ್ರಯಾಣಕ್ಕೆ ಸಿದ್ಧರಾಗಬೇಕೆಂದು ತಿಳಿಸಿದರು ಎಲ್ಲಿಗೆ ಹೋಗಬೇಕು ಎಂದು ಯಾರೂ ಪ್ರಶ್ನಿಸಲಿಲ್ಲ. ಸರಿ, ಸಿದ್ಧರಾದೆವು ವಿಮಾನದಲ್ಲಿ ಕುಳಿತು ರಾತ್ರಿಯಲ್ಲಿಯೇ ಸಾಗಿ ಬಂದೆವು ಯಾವುದೋ ನಿಲ್ದಾಣ, ಸರಿಯಾಗಿ ರಸ್ತೆ ಕೂಡ ಇಲ್ಲ. ನಮಗೆ ಆಗ ನಡೆದುಕೊಂಡು ಹೋಗಬೇಕಾದ ಸೂಚನೆ ಮಾಡಲಾಯಿತು.

"ಹಗಲು ರಾತ್ರಿಯಲ್ಲಿ ನೂರಾರು ಮೈಲಿಗಳನ್ನು ಬರ್ಮಾ ಅಡವಿಯಲ್ಲಿ ನಡೆದುಕೊಂಡು ಮಣಿಪುರಕ್ಕೆ ಬಂದು ತಲ್ಪಬೇಕೆಂದು ಯತ್ನಿಸುತ್ತಿದ್ದೆವು. ಯುದ್ಧ ಮುಖವೆಲ್ಲ ನಮ್ಮ ವಿರುದ್ಧವಾಗಿದೆಯೆಂದು ಅಲ್ಪ ಮಟ್ಟಿಗೆ ತಿಳಿದಿತ್ತು ಆ ಘೋರ ಅಡವಿಯಲ್ಲಿದ್ದಾಗ ನಮ್ಮ ಆಕಾಶವಾಣಿ ಕೇಳುವ ಸೆಟ್ ಕೂಡ ಕಳೆದುಹೋಯಿತು. ದಾರಿಯುದ್ದಕ್ಕೂ ಅನೇಕರು ಮರಣ ಹೊಂದಿದರು ಅಗಲಿದವರಿಗಾಗಿ ಅಳುತ್ತ ಕೂಡಲು ನಮಗೆ ಸಮಯವೆಲ್ಲಿತ್ತು? ಗಿಡಗಳ ಎಲೆಗಳ ಮರೆಗಳಲ್ಲಿ ಮೃತದೇಹಗಳನ್ನಿಟ್ಟು ಮುಂದ ಸಾಗುತ್ತಿದ್ದೆವು.

"ಸುಮಾರು ೧೫ ದಿನಗಳ ವರೆಗೆ ಆಹಾರವೇ ಸಿಕ್ಕಲಿಲ್ಲ ಹುಲ್ಲು ತಿಂದದ್ದಾಯಿತು. ಸಿಕ್ಕ ಗಡ್ಡೆಗೆಣಸುಗಳನ್ನು ತಿಂದದ್ದಾಯಿತು ಅಂತೂ ಹೇಗೋ ಮಾಡಿ ಒಮ್ಮೆ ಮಣಿಪುರ ತಲ್ಪಿದೆವು"

"ಮಣಿಪುರ ತಲ್ಪಿದ ದಿನವೇ ನಮ್ಮೆಲ್ಲರನ್ನು ಬ್ರಿಟಿಷ್ ಯೋಧರು ಬಂಧಿಸಿ ಬಿಟ್ಟರು. ಅಲ್ಲಿಗೆ ನಮ್ಮ ಕಥೆ ಮುಕ್ತಾಯವಾದಂತಾಯಿತು. ಬಂಧನಕ್ಕೊಳಗಾದವರೆಲ್ಲರೂ ಕಣ್ಣೀರು ಸುರಿಸಿದರು. ನಾವು ಬರ್ಮಾ ಅರಣ್ಯದಲ್ಲಿಯೇ ನಾಯಬಾರದಾಗಿತ್ತೇ? ಎಂದೆನಿಸಿತು ಇನ್ನೆಲ್ಲಿಯ ನೇತಾಜಿ? ಅವನ ದರ್ಶನ ಸಾಧ್ಯವೇ? ನಾವಿನ್ನು ಬದುಕಿ ನಮ್ಮ ನಮ್ಮ ಸ್ಥಳಗಳನ್ನು ಸೇರುತ್ತೇವೆಯೋ ಎಂದು ಚಿಂತಾಮಗ್ನರಾದೆವು.

"ಎಷ್ಟು ಚಿಂತಿಸಿದರೇನು' ಮತ್ತೆ ನಮ್ಮ ವಿಧಿ ನಮ್ಮ ಕೈಕಾಲು ಕಟ್ಟಿ ಹೆಳವರನ್ನಾಗಿಮಾಡಿತು ಉತ್ಸಾಹ, ಶಕ್ತಿಗಳೆಲ್ಲ ಬಿಸಿಲಿಗಿಟ್ಟ ಬೆಣ್ಣೆ

ಯಂತೆ ಕರಗಿ ನೀರಾಗಿ ಹೋದುವು ಸ್ವಲ್ಪೇ ಮಾತಿನಲ್ಲಿ ಹೇಳಬೇಕಾದರೆ ನಾವೆಲ್ಲ ಜೀವನ್ಮೃತರಾದೆವು."

## ೧೦

"ನಮ್ಮೆಲ್ಲರನ್ನು ಜೆನ್ಸೋರ್ ಬಂದಿ ಶಿಬಿರಕ್ಕೆ ತಂದು ಸರ್ಪ ಕಾವಲಿನಲ್ಲಿ ಇಟ್ಟರು. ಇದ್ದುದರಲ್ಲಿ ಊಟ ಬಟ್ಟೆಗಳು ಸಿಕ್ಕುವ ಏರ್ಪಾಟು ಸರಿಯಾಗಿತ್ತೆನ್ನಬೇಕು ಏನಾದರೇನು ? ಸ್ವಾತಂತ್ರ್ಯ ಸಾಮ್ರಾಜ್ಯದ ವಿಶಾಲಾಕಾಶದಲ್ಲಿ ಹಕ್ಕಿಗಳಾಗಿ ವಿಹರಿಸಿದ್ದ ನಮಗೆ ಇಲ್ಲಿನ ಬಾಳು ನರಕಪಾದಂತಾಯಿತು

"ನಮಗಾಗಿ ಯಾವ ಆಶೆಯೂ ಈ ಪೃಥ್ವಿಯಲ್ಲಿ ಉಳಿಯಲಿಲ್ಲ. ಅದೆಲ್ಲ ಇನ್ನು ಆಕಾಶ ಕುಸುಮ ಜೀವನದ ಅಂತಿಮ ಧ್ಯೇಯಗಳೆಲ್ಲ ಎಲ್ಲೋ ತೂರಿಹೋದವು. ಮಾನವ್ಯದಮಟ್ಟವೇ ಇಳಿದು ನಿಂತಿತು.

"ಹೊರಗಿನಿಂದ ಯಾವ ಸುದ್ದಿಗಳೂ ನಮ್ಮ ಕಿವಿಗೆ ತಲ್ಪುವಂತಿಲ್ಲ. ತಲ್ಪಿದ ಸುದ್ದಿಗಳೆಲ್ಲ ನಮ್ಮ ಚೇತನವನ್ನೆಲ್ಲ ಹಿಂಡಿ ಹಿಪ್ಪೆ ಮಾಡುವಂಥವುಗಳು

"ಪ್ರತಿಕ್ಷಣದಲ್ಲೂ ಬ್ರಿಟಿಷರ ವಿಜಯ ಯಾತ್ರೆಯ ಕಹಳೆನಾದ ಕೇಳಲು ಇಚ್ಛೆಯಿಲ್ಲದಿದ್ದರೂ ಸುಮ್ಮನಿರಬೇಕಾಯಿತು. ಜೀವನ ಬೇಡವಾಗಿ ಹೋಯಿತು ಅನೇಕರು ಆತ್ಮ ಹತ್ಯೆಗಾಗಿ ಸಿದ್ಧತೆ ಮಾಡುತ್ತಿದ್ದರು. ಆದರೆ ಮತ್ತೆ ನಮ್ಮ ನಮ್ಮಲ್ಲಿಯೇ ಕೆಲವರು ವಿಚಾರಮಾಡಿ, ಒಂದಿಲ್ಲೊಂದು ದಿನ ನಾವೆಲ್ಲ ಅಕಸ್ಮಾತ್ತಾಗಿ ಬಿಡುಗಡೆ ಹೊಂದಬಾರದೇಕೆ ? ಹೊರಗೆ ಹೋದ ನಾವೆಲ್ಲ ಮತ್ತೆ ಭಾರತ ಸ್ವಾತಂತ್ರ್ಯಕ್ಕಾಗಿ ಯತ್ನಿಸಬಹುದಲ್ಲ ಎಂದು ನಿರ್ಧರಿಸಿ ಆ ದುಷ್ಟ ಕಲ್ಪನೆಯನ್ನು ಹೊಡೆದೋಡಿಸಿದೆವು

"ಅದು ನಮ್ಮ ದುರ್ದಿನ ನಮ್ಮದಷ್ಟೇ ಅಲ್ಲ ಇಡೀ ಮಾನವ ಜನಾಂಗದ ದುರ್ದಿನ. ಪ್ರಾತಃಕಾಲದ ೧೦ ಗಂಟೆಯಾಗಿರಬೇಕು. ನಾವೆಲ್ಲ ನಮ್ಮ ಕೆಲಸದಲ್ಲಿ ನಿರತರಾಗಿದ್ದೆವು. ಮಲ್ಲಿಗೆ ಅರಳುಗಳ ರಾಶಿಯಮೇಲೆ

ಪ್ರಳಯ ಪೆರಗಿದಂತೆ ವಾರ್ತೆಯೊಂದು ಬಂತು. ನೇತಾಜಿ ಸುಭಾಸ್ ಚಂದ್ರ ಬೋಸ್ ತಾಯ್‌ಹೋಕು ವಿಮಾನ ನಿಲ್ದಾಣದಿಂದ ವಿಮಾನದಲ್ಲಿ ಪ್ರಯಾಣ ಬೆಳೆಯಿಸುತ್ತಿದ್ದಾಗ ಅದಕ್ಕೆ ಬೆಂಕಿ ತಗಲಿ ಭಾರಿ ಗಾಯ ಗೊಂಡರೆಂದೂ, ನಂತರ ಅವರನ್ನು ಚಿಕಿತ್ಸೆಗಾಗಿ ಟೋಕಿಯೋ ಆಸ್ಪತ್ರೆಗೆ ಕಳಿಸಲಾಯಿತೆಂದೂ ನೇತಾಜಿ ಶಾಂತಚಿತ್ತರಾಗಿ ಮರಣ ಹೊಂದಿದ ರೆಂದೂ ಕೇಳಿದೆವು. ಮೊದಲೇ ಸಂತ್ರಸ್ತರಾಗಿದ್ದವರಿಗೆ ಈ ವಾರ್ತೆ ಉಂಟು ಮಾಡಿದ ನೋವು ಅಷ್ಟಿಷ್ಟಲ್ಲ. ಎಲ್ಲರ ಕಣ್ಣಲ್ಲೂ ನೀರು ಕೋಡಿಯಾಗಿ ಹರಿಯಿತು ಆಪ್ತ ಬಂಧುಗಳನ್ನು ಕಳೆದುಕೊಂಡವರಿಗೂ ಅಷ್ಟು ದುಃಖ ವಾಗಲಿಕ್ಕಿಲ್ಲ. ಎಲ್ಲರೂ ಊಟ ನಿದ್ರೆಗಳನ್ನು ಮರೆತು ಬಿಟ್ಟರು

"ನೇತಾಜಿ ಸಾಯುವುದೆಂದರೇನು? ಅಸಂಬದ್ಧ ಪ್ರಲಾಪ ಈ ವಾರ್ತೆಯನ್ನು ನಂಬಲು ಸಾಧ್ಯವೇ ಇಲ್ಲ ಲಕ್ಷಗಟ್ಟಲೆ ಜನ ಆತನ ಹಿಂದಿರಬೇಕಾದರೆ ನಮ್ಮೆಲ್ಲರನ್ನು ಬಿಟ್ಟು ನೇತಾಜಿ ಹೋಗಿ ಬಿಡುವುದೆಂದ ರೇನು? ದೇವರೇ ಮಕ್ಕಳನ್ನು ಮರೆಯಲು ಸಾಧ್ಯವೇ" ಇದೆಲ್ಲ ಬ್ರಿಟಿಷರ ತಂತ್ರ. ನಾವು ಈ ವಾರ್ತೆ ನಂಬಲಿಕ್ಕಾಗದು ದೇವರ ದಯೆಯಿಂದ ನಮ್ಮೆಲ್ಲ ಬಿಡುಗಡೆಯಾಗಲಿ ಈ ನರಕದಿಂದ ಹೊರಗೆ ಹೋಗಿ ಅಲ್ಲಿ ನೈಜವಾದ ವಾರ್ತೆ ಏನಿದೆಯೋ ನೋಡೋಣ ಎಂದು ನಮ್ಮ ಶಿಬಿರದ ನಾಯಕರು ಎಲ್ಲರಿಗೂ ಆಶೆಯನ್ನು ತುಂಬಿದರು.

"ಯುದ್ಧವೆಲ್ಲ ಮುಗಿದು ಹೋಯಿತು. ಜಪಾನು ಕೂಡ ಸಂಪೂರ್ಣ ಶರಣಾಯಿತು." ಎಂಬ ವಾರ್ತೆ ನಮ್ಮ ಕಿವಿಯಲ್ಲಿ ಸುಳಿಯಿತು ಸ್ವಲ್ಪ ದಿನಗಳವರೆಗಂತೂ ನಮಗೆ ಯಾವ ವಾರ್ತೆಯೂ ಬೇಕು ಎನಿಸುತ್ತಿರಲಿಲ್ಲ ಸುಮಾರು ೪ ವರ್ಷಗಳಲ್ಲಿ ಕಂಡದ್ದೆಲ್ಲ ಯಾವುದೋ ಜನ್ಮದ ಕಲೆಯಂತೆ ತೋರಿತು

"ಯಾತ್ರಿಕ ಜೀವನ ಯಾರ ಮುಖದ ಮೇಲೂ ಉತ್ಸಾಹದ ಕಳೆ ಯಿಲ್ಲ. ಅದೊಂದು ಬಗೆಯ ಭೀಕರ ನಿರಾಶೆ ಕವಿದು ನಿಂತಿತ್ತು ನಾವೆಲ್ಲ ನಾವು ಬದುಕಿನ ತೂಗುಯ್ಯಾಲೆಯಲ್ಲಿ ಹಾಗೆ-ಹೀಗೆ ನೇತಾಡುತ್ತಿದ್ದೆವು

"ಒಂದು ರಾತ್ರಿ ನಮ್ಮ ಶಿಬಿರದ ಸೈನಿಕರಿಗೆ ವಾರ್ತೆಯೊಂದು ಬಂತು. ಐ. ಎನ್. ಎ. ಸೈನಿಕರನ್ನು ಅಲ್ಲಲ್ಲಿ ಬಿಡುತ್ತಿದ್ದಾರೆ. ಜೆಸ್ಸೋರ್ ಶಿಬಿರದಿಂದಲೂ ೫೦ ಜನರ ಬಿಡುಗಡೆಯು ಇಷ್ಟರಲ್ಲಿಯೇ ಆಗಲಿದೆ ಎಂದು. ಈ ಹೊತ್ತಿಗಾಗಲೇ ಪೂಜ್ಯ ಬಾಪೂಜಿ ಕಲಕತ್ತೆಗೆ ಬಂದಿದ್ದರು. ಸೋದೇಪುರ ಆಶ್ರಮಕ್ಕೆ ಹೋಗಿ ಅವರನ್ನು ಭೇಟಿ ಮಾಡಬೇಕೆಂದು ಕುತೂಹಲ ಉಂಟಾಯಿತು.

"ಮನುಷ್ಯನ ಆಶೆ ಎಷ್ಟು ಕೆಟ್ಟದ್ದು ? ಇನ್ನೂ ಯಾವ ಸಮಾಚಾರವೂ ಇಲ್ಲ. ಈಗಾಗಲೇ ಬಿಡುಗಡೆ—ಗಾಂಧೀಜಿ ದರ್ಶನ—ಬಂಧು ಬಳಗದವರ ಭೇಟಿ ಇತ್ಯಾದಿ. ಎಷ್ಟು ಹುಚ್ಚತನದ ಮಾತುಗಳು. ಇನ್ನೂ ಏನೇನೋ ವಿಚಾರಗಳ ಅಲೆಗಳು ಬಂದು ತಲೆಯಲ್ಲಿ ಅಪ್ಪಳಿಸುತ್ತಿದ್ದವು.

"ಮನುಷ್ಯ ಬಯಸುವುದೇ ಒಂದು ; ಆಗುವುದೇ ಒಂದು. ನಾವೆಲ್ಲ ನೂರಾರು ಜನರಿದ್ದಾಗ ಇಂಥವರದೇ ಬಿಡುಗಡೆಯಾಗುತ್ತದೆಂದು ಯಾರಿಗೆ ಗೊತ್ತಿತ್ತು ? ಆದರೆ ಇನ್ನೊಂದು ದಿನ ರಾತ್ರಿ ನಮ್ಮ ಕಿವಿಗಳನ್ನೇ ನಾವು ನಂಬದಂತಹ ವಾರ್ತೆಯನ್ನೊಂದನ್ನು ಕೇಳಿದೆವು :

"ನಾಳೆಯೇ ನಮ್ಮೆಲ್ಲರ ಬಿಡುಗಡೆ" ಇದೇ ಆ ಸಮಾಚಾರ.

"ಅಂದಿನ ರಾತ್ರಿ ನಾವು ಯೋಚಿಸಿದಷ್ಟು ಪ್ರಾಯಶಃ ಎಂದೂ ಯೋಚಿಸಿರಲಿಲ್ಲ. ಯಾವ ಐವತ್ತು ಜನ ನಾಳೆಗೆ ಹೊರಗೆ ಹೋಗ ತಕ್ಕವರೆಂದೂ ತಿಳಿಸಲಾಗಿತ್ತು. ಈ ಗುಂಪಿನವರಲ್ಲಿ ನಾನೂ ಒಬ್ಬನಿದ್ದೆ.

"ರಾತ್ರಿಯಲ್ಲಿ ಎಲ್ಲರೂ ಒಬ್ಬರ ಹತ್ತಿರ ಒಬ್ಬರು ಸೇರಿದೆವು. ಏನು ಉಪಕ್ರಮ ಎಂದು ತೀರ್ಮಾನಿಸುವುದೇ ನಮ್ಮ ಆಗಿನ ಕಾರ್ಯಕ್ರಮವಾಗಿತ್ತು. ಒಬ್ಬರು ಹೇಳಿದರು—ಗಾಂಧೀಜಿಯ ದರ್ಶನ ಮಾಡಿಕೊಂಡು ನಮ್ಮ ಊರಿಗೆ ತೆರಳಬೇಕು. ಇನ್ನೊಬ್ಬರೆಂದರು—ಕಲಕತ್ತಾ ನೋಡಿಕೊಂಡು ಹೋಗಬೇಕು. ಐವತ್ತು ಜನದ ಬಾಯಿಯಿಂದ ಐವತ್ತು ವಿಚಾರಗಳು ಹೊಮ್ಮಿ ಬಂದವು.

"ರಾತ್ರಿ ಕ್ಷಣಕ್ಕೊಮ್ಮೆ ಸರಿದು ಹೋಗುತ್ತಿತ್ತು. ನಮಗೆಲ್ಲ ಕಣ್ಣಿಗೆ ಕಣ್ಣು ಹತ್ತಲಿಲ್ಲ. ಸಹಸ್ರ ಯೋಚನೆಗಳು ನನ್ನನ್ನು ಸಮಾಧಿ ಸ್ಥಿತಿಗಿಳಿಸಿದ್ದುವು.

"ಎಂದಿನಂತೆ ಅಂದೂ ಪೂರ್ವ ದಿಗ್ವಲಯದಲ್ಲಿ ಸೂರ್ಯ ರಶ್ಮಿ ಚಿಮ್ಮಿ ಬಂತು. ಬಿಡುಗಡೆಯ ದಿನ. ಜೈಲಿನ ಗೋಡೆಗಳ ಇದುರಿನಲ್ಲೇ ಒಂದಿಲ್ಲೊಂದು ದಿನ ಮರಣ ತನ್ನ ಶೀತಲ ಕರವನ್ನು ನಮ್ಮೆಲ್ಲರ ಮೇಲೆ ಚಾಚುವುದೆಂದು ನಂಬಿದ್ದ ನಮಗೆ ಈ ಬಿಡುಗಡೆ ಖಂಡಿತ ಆಶ್ಚರ್ಯವನ್ನುಂಟುಮಾಡಿತು.

"ಒಂದು ಗಂಟೆ ಕಳೆಯಿತು. ಪ್ರತಿ ನಿತ್ಯದಂತೆ ಬೆಳಗಿನ ಕಾರ್ಯಕ್ರಮಗಳೆಲ್ಲವನ್ನೂ ಯಥಾವಿಧಿಯಾಗಿ ಮುಗಿಸಿದೆವು. ಅಧಿಕಾರಿಗಳೊಬ್ಬರು ಬಂದು ನಮ್ಮ ತಂಡವನ್ನು ಒತ್ತಟ್ಟಿಗೆ ನಿಲ್ಲಿಸಿದರು. ನೀವೆಲ್ಲ ಇಂದು ಬಂಧಮುಕ್ತರು. ಇನ್ನೇನು ೧೦—೧೫ ನಿಮಿಷಗಳಲ್ಲಿಯೇ ನಿಮ್ಮನ್ನು ಟ್ರಕ್ ನಲ್ಲಿ ಕಲಕತ್ತಾ ನಗರಕ್ಕೆ ತಲ್ಪಿಸಲಾಗುವುದೆಂದು ತಿಳಿಸಿದರು.

"ಸೂರ್ಯ ಮೇಲೆ ಮೇಲೆ ಏರಿ ಬರುತ್ತಿದ್ದ. ಹೊಂಗಿರಣಗಳು ನಮ್ಮ ಕಣ್ಣಿಗೆ ವಿನೂತನತೆಯನ್ನು ಪ್ರದರ್ಶಿಸಿದವು. ಇನ್ನೂ ಅಸಂಖ್ಯಾತ ಮಿತ್ರರನ್ನು ಬಿಟ್ಟು ಹೊರಗೆ ಹೋಗಬೇಕಾಯಿತಲ್ಲ ಎಂದು ಚಿಂತೆ ಪ್ರತಿಧ್ವನಿಸುತ್ತಿತ್ತು.

"ಟ್ರಕ್ ಬಂದುದು ಸೂಚಿತವಾಯಿತು. ಸರಿ ಎಲ್ಲರೂ ಸಿದ್ಧರಾದೆವು. ನಾನು ಇನ್ನು ಹೆಜ್ಜೆ ಇಕ್ಕುವುದರಲ್ಲಿದ್ದೆ. ನನ್ನ ಪರಮಾಪ್ತ ಶೀಖ್ ಮಿತ್ರ ಬಂದವನೇ ನನ್ನನ್ನು ತಬ್ಬಿಕೊಂಡ.

"ಆತನ ಮುಖವನ್ನು ನೋಡಿದೆ. ಕಣ್ಣು ಒದ್ದೆಯಾಗಿದ್ದುವು. ಸ್ವರ ಗದ್ಗದಿತವಾಗಿತ್ತು. ಏನೋ ಹೇಳಬೇಕೆಂದು ಯತ್ನಿಸುತ್ತಿದ್ದ. ನಾಲಗೆ ಒಣಗಿ ನಿಂತಿತ್ತು.

"ನನ್ನ ಕಣ್ಣೂ ನೀರು ತುಂಬಿದವು. ಏನು ಬಲವಂತ್‌ಸಿಂಗ್ ನಿನ್ನ ವೇದನೆ? ನಿನ್ನದೂ ನಮ್ಮ ಹಾಗೆಯೇ ಬಿಡುಗಡೆಯಾಗುತ್ತದೆ. ಅಧೀರ

ನಾಗಬೇಡ ಎಂದು ನಾನು ಹೇಳಲು ಯತ್ನಿಸಿದೆ. ನನ್ನ ಕುತ್ತಿಗೆಯೂ ತುಂಬಿ ಬಂದಿತು.

"ಇಬ್ಬರೂ ಮೂಕ ವಿಸ್ಮಿತರಾಗಿ ನಿಂತು ಬಿಟ್ಟೆವು. ಬಲವಂತಸಿಂಗ್ ಕೇಳಿದ 'ತಮ್ಮಾ ನಿನ್ನ ಭೇಟಿ ಇನ್ನೆಂದು ? ನೀನು ಬೆಂಗಳೂರಿನ ಕಡೆಗೆ ಹೋಗುತ್ತಿ. ನಾನು ಪಂಜಾಬಿಗೆ ಹೋಗುತ್ತೇನೆ. ಇಂದು ಅಗಲಿದ ಬಂಧುಗಳು ಇನ್ನೊಮ್ಮೆ ಕೂಡುವುದು ಸಾಧ್ಯವೇ ? ಆ ದಿನಗಳನ್ನು ನಾನು ಎಂದೂ ಮರೆಯಲಾರೆ. ದೇವರು ಅಗಲಿಸಿದ್ದಾನೆ. ಉಪಾಯವಿಲ್ಲ. ಹೋಗಿ ಬಾ. ನಿನಗೆ ತುಂಬಾ ಆಯುಷ್ಯ ಕೊಡಲಿ ದೇವರು' ಎಂದ.

"ಆ ಅಭೂತ ಪೂರ್ವ ಸ್ನೇಹದ ಅಕ್ಕರೆಯ ಮಾತುಗಳಿಂದ ನನ್ನ ಇಡೀ ಸರ್ವಾಂಗದಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ಒಂದೆರಡು ನಿಮಿಷ ಇಹಲೋಕದಿಂದಲೇ ನಾನು ಎಲ್ಲೋ ಮರೆಯಾದಂತೆ ಭಾಸ ವಾಯಿತು.

"ಬಲವಂತ್‌ಸಿಂಗ್ ನಿನ್ನನ್ನು ಈ ದೇಹದಲ್ಲಿ ಪ್ರಾಣವಿರುವವರೆಗೆ ಎಂದೂ ಮರೆಯಲಾರೆ. ಇಷ್ಟೇಕೆ ನೊಂದುಕೊಂಡಿದ್ದೀಯ. ನಾವೆಲ್ಲ ನಮ್ಮ ನಚ್ಚಿನ ಅನೇಕ ಮಿತ್ರರನ್ನು ಚಿಂದ್ವಿನ್, ಬರ್ಮಾ ಇತ್ಯಾದಿ ರಣರಂಗ ದಲ್ಲಿ ಘೋರವಾದ ಕಟ್ಟಡವಿಯಲ್ಲಿ ಬಿಟ್ಟು ಬಂದಿಲ್ಲವೆ ? ಅದರ ಮುಂದೆ ನಮ್ಮ ಈ ಅಗಲಿಕೆ ಏನು ದೊಡ್ಡದು. ನೇತಾಜಿಯನ್ನು ಸ್ಮರಿಸಿಕೋ. ಎಲ್ಲ ದುಃಖ ಹಾರಿ ಹೋಗುತ್ತದೆ ಎಂದು ಹೇಳಿದೆ.

"ಇಬ್ಬರಿಗೂ ತೃಪ್ತಿಯಾಗಲಿಲ್ಲ.

"ಜೈ ಹಿಂದ್. ಆಗಲಿ ನಿನ್ನ ವಿಳಾಸವನ್ನಾದರೂ ಕೊಟ್ಟು ಹೋಗು. ಅಲ್ಲದೆ ನಿನ್ನ ರುಜುವನ್ನು ಈ ಕಾಗದದಲ್ಲಿ ಮಾಡು ಎಂದು ಬಲವಂತ್‌ಸಿಂಗ್ ಕೇಳಿದ. ಆತನ ಕಣ್ಣಲ್ಲಿ ಇನ್ನೂ ನೀರು ಹನಿಯುತ್ತಲೇ ಇತ್ತು.

"ಕಾಗದ ತಕ್ಕೊಂಡು ರುಜುಹಾಕಿ ಕೊಟ್ಟೆ. ವಿಳಾಸವನ್ನು ಬರೆದಿದ್ದೆ. ಈ ಹೊತ್ತಿಗಾಗಲೇ ನನ್ನ ಪಕ್ಕದ ಮಿತ್ರರು ಹೊರಟಿದ್ದರು ನಾನೂ ಹೆಜ್ಜೆ ಹಾಕಬೇಕೆಂದು ಯತ್ನಿಸಿದೆ ಬಲವಂತ್‌ಸಿಂಗ್ ಮತ್ತೆ ಗಾಢವಾಗಿ ತಬ್ಬಿಕೊಂಡ.

"ಈ ಬಾರಿಯಂತೂ ಆತನ ಕಣ್ಣುಗಳು ಕೆಂಪಗೆ ಕೆಂಡದಂತಾಗಿದ್ದವು. ನಾನು ಮತ್ತೆ ಸಮಾಧಾನ ಹೇಳಿ ಹೊರಟು ಬಿಟ್ಟೆ. ನಾನು ಕಾಣುವವರೆಗೆ ಬಲವಂತ್‌ಸಿಂಗ್ ನನ್ನನ್ನೇ ನಿಟ್ಟಿಸುತ್ತಿದ್ದ. ನಾನೂ ಕೂಡ ತಿರುಗಿ ತಿರುಗಿ ನೋಡುತ್ತಿದ್ದೆ. ಆ ಕಣ್ಣಿನ ನೋಟ, ಆ ಪ್ರೇಮ ಸೌಹಾರ್ದಗಳ ಅಪ್ರತಿಮ ನೋಟ, ಆ ವಾತ್ಸಲ್ಯದ ಕರುಣಾ ಪೂರಿತ ಪ್ರಶಾಂತ ನೋಟ ನನ್ನ ಹೃದಯದಲ್ಲಿ ಶಿಲಾ ಪ್ರತಿಮೆಯಂತೆ ನಿಂತಿದೆ."

ಇದುರಿಗಿನ ಗಡಿಯಾರ ಈ ಸ್ವಾರಸ್ಯ ಕತೆಗೆ ಮುಕ್ತಾಯ ಹೇಳಿತು. ರಾತ್ರಿ ಎಂಟು ಗಂಟೆಯಾಯಿತೆಂದು ಸೂಚಿಸಿತು.

ಚೆಲುವರಾಜನ ಕತೆಯೊಡನೆ ತೇಲಿಹೋಗಿದ್ದ ನಾವು ಫಕ್ಕನೆ ಎಚ್ಚರ ಗೊಂಡೆವು. ಚಂದ್ರೂ ಕಣ್ಣಲ್ಲಿ ನೀರು ಕಾಣಿಸಿತು. ಅದರ ಅರ್ಥ ನನ ಗಾಯಿತು. ಕತೆ ಹೇಳುತ್ತಿದ್ದಂತೆಯೇ ಚೆಲುವರಾಜ ಮೈಮರೆತು ಹೋಗಿದ್ದ. ಪ್ರತ್ಯಕ್ಷವಾಗಿ ಜೆಸ್ಸೋರ್ ಬಂದಿ ಶಿಬಿರದಿಂದ ಬಲವಂತಸಿಂಗ್‌ರನ್ನು ಅಗಲಿ ದಂತೆಯೇ ನಮಗೆನಿಸಿತು. ಎಲ್ಲ ಚಿತ್ರವೂ ನಮ್ಮ ಕಣ್ಣೆದುರಿಗೆ ಕೊರೆದು ನಿಲ್ಲಿಸಿದಂತಿತ್ತು.

ಚೆಲುವರಾಜನೂ ಕರವಸ್ತ್ರ ತೆಗೆದುಕೊಂಡು ಕಣ್ಣೊರಸಿಕೊಂಡ. ಏನೋ ಮಾತನಾಡಲು ಹೋಗಿದ್ದವನು ಸಾಧ್ಯವಾಗದೆ ಸುಮ್ಮನಾಗಿಬಿಟ್ಟ.

"ಎತ್ತಾದರೂ ಕೊಂಚ ಸುತ್ತಿಕೊಂಡು ಬರೋಣವೇ?" ಎಂದು ಪ್ರಶ್ನಿಸಿದ.

"ಇನ್ನೂ ಸ್ವಾರಸ್ಯವಾದ ಕತೆ ಮುಂದಿದೆಯಲ್ಲಯ್ಯ. ಎಲ್ಲಿಗೆ ಹೋಗೋಣ?" ಎಂದು ನಾನೆಂದೆ.

"ಹಾಗೇ ಸ್ವಲ್ಪ ಲಾಲ್‌ಬಾಗ್ ಕಡೆಗೆ ಹೋಗಿ ಬರೋಣ—ರಾತ್ರಿ ಕುಳಿತು ಬಿಟ್ಟರೆ ಕತೆಯನ್ನು ಮುಗಿಸಿಯೇ ಏಳೋಣ" ಎಂದು ಚಂದ್ರೂ ಹೇಳಿದ.

ಎಲ್ಲರೂ ಎದ್ದೆವು. ಕಾಲುಗಳು ನಮ್ಮನ್ನು ಲಾಲ್‌ಬಾಗ್ ಕಡೆಗೆ ಕರದೊಯ್ಯುತ್ತಿದ್ದವು.

“ಬಲವಂತಸಿಂಗರ ಅಗಲುವಿಕೆಯನ್ನು ಮುಗಿಸಿದಾಗಿನಿಂದಲೂ ಚೆಲುವರಾಜನಿಗೆ ಉತ್ಸಾಹವೇ ಹಾರಿ ಹೋದಂತಾಯಿತು. ಆತ ಮೌನವನ್ನೇ ತಾಳಿದ. ಕಾರಣ ಬೇರೆ ನಮಗೆ ತಿಳಿಯಲಿಲ್ಲ.

ಡಾರಿ ಸಾಗಿತ್ತು. ಲಾಲ್‌ಬಾಗ್ ಬಂದಿತ್ತು. ನಾವೆಲ್ಲ ಲಾಲ್ ಬಾಗ್ ರೆಸ್ಟೋರೆಂಟಿನಲ್ಲಿ ಕುಳಿತು ತಿಂಡಿಗಾಗಿ ಆರ್ಡರು ಮಾಡಿದೆವು.

ರೇಡಿಯೋ ಹಾಡುತ್ತಿತ್ತು. ಪಕ್ಕದಲ್ಲಿಯೇ ತರತರದ ಜನ ತಿಂಡಿ ತಿನ್ನುವುದರಲ್ಲಿ ಮಗ್ನರಾಗಿದ್ದರು. ಏನೇನೋ ಹರಟೆ ಹೊಡೆಯುತ್ತಿದ್ದರು. ನಾವು ಮೂವರು ಮಾತ್ರ ಇವಲ್ಲದರಿಂದ ದೂರವಾಗಿದ್ದೆವು.

“ಬೇಗನೆ ಮನೆಗೆ ಹೋಗೋಣ. ನನಗೆ ಅದೇಕೋ ವಿಪರೀತ ದುಃಖ ತುಂಬಿ ತುಂಬಿ ಬರುತ್ತಿದೆ. ನಾ ತಡೆಯಲಾರೆ” ಎಂದವನೇ ಚೆಲುವರಾಜ್ ಕರವಸ್ತ್ರ ತೆಗೆದು ಕಣ್ಣೊರಸಿ ಕೊಳ್ಳ ತೊಡಗಿದ. ನಾವಿಬ್ಬರೂ ತಣ್ಣಗಾಗಿ ಕುಳಿತೆವು. ಈ ದುಃಖದ ಅರ್ಥ ಮಾತ್ರ ನಮಗಾಗಲಿಲ್ಲ.

ಮೌನದಿಂದಲೇ ಮೂವರು ಗೃಹಾಭಿಮುಖರಾಗಿ ಹೊರಟೆವು. ಮನೆಗೆ ಬಂದಾಗ ಊಟದ ಸಿದ್ಧತೆಯಾಗಿತ್ತು.

“ಚಂದ್ರೂ ನೀನು ಇಲ್ಲೇ ಊಟ ಮಾಡಿಬಿಡು” ಎಂದು ನಾನೆಂದೆ. ಅವನೂ ತಲೆ ಅಲ್ಲಾಡಿಸಿದ. ಎಲ್ಲರೂ ಊಟ ಮಾಡಿಕೊಂಡು ಮತ್ತೆ ಮುಂದಿನ ಕತೆಗೆ ಸಿದ್ಧರಾದೆವು.

## ೧೧

“ಟ್ರಕ್ ಸಿದ್ಧವಾಗಿತ್ತು. ಹೋಗಿ ಎಲ್ಲರೂ ಕುಳಿತೆವು. ಆಗ ಹೊರಟವರು ೫೦ ಮಂದಿ. ಕಲಕತ್ತಾ ನಗರಕ್ಕೆ ನಮ್ಮನ್ನು ತಲ್ಪಿಸುವ ವ್ಯವಸ್ಥೆಯನ್ನು ಮಿಲಿಟರಿ ಅಧಿಕಾರಿಗಳು ಮಾಡಿದ್ದರು.

“ಟ್ರಕ್‌ನಲ್ಲಿ ಕುಳಿತುಕೊಳ್ಳುವವರೆಗೆ ಇದ್ದ ಏನೋ ಒಂದು ಬಗೆಯ ಉತ್ಸಾಹ ಆದರ ನಮ್ಮ ಮಾರ್ಗ ಕ್ರಮಣ ಆರಂಭವಾದ ಮೇಲೆ ಉಳಿಯಲಿಲ್ಲ. ಬದಲಾಗಿ ವೇದನೆ ತೀರ ಹೆಚ್ಚಲಾರಂಭಿಸಿತು.

"ಆಪ್ತ ಮಿತ್ರರನ್ನು ಇನ್ನೂ ಸೆರೆಯ ಮರೆಯಲ್ಲೇ ಬಿಟ್ಟು ನಾವು ಮಾತ್ರ ಹೊರಗೆ ಬಂದುದು ಯೋಗ್ಯವೇ? ನಾವೂ ಹೊರಗೆ ಹೋಗುವುದಿಲ್ಲ; ಎಲ್ಲರನ್ನೂ ಬಂಧ ಮುಕ್ತರನ್ನಾಗಿ ಮಾಡಿದರೇನೇ ನಾವು ಹೊರಗೆ ಹೊರಡುವುದು ಎಂದು ಹಠ ಹಿಡಿದಿದ್ದರೆ ಅವರೆಲ್ಲರ ಬಿಡುಗಡೆಯಾಗುತ್ತಿತ್ತೇ? ನಾವೇನು ಅವರಿಗಿಂತ ಹೆಚ್ಚಿನವರು? ಎಂದು ಅನೇಕಾನೇಕ ಯೋಚನೆಗಳು ಮೂಡಿ ಮರೆಯಾದುವು ಏನಾದರೇನು—ನಮ್ಮ ಬಿಡುಗಡೆಯಾದದ್ದು ಖಂಡಿತವಾಗಿತ್ತು. ಜೊತೆಗೆ ಕಲಕತ್ತಾ ನಗರದ ಕಡೆಗೆ ನಮ್ಮ ಟ್ರಕ್ಕು ರಭಸದಿಂದ ಓಡುತ್ತಲಿತ್ತು.

"ಆ ಹಿಂದಿನ ಸವಿನೆನಪು. ಡಮ್ ಡಮ್ ವಿಮಾನ ನಿಲ್ದಾಣದಿಂದ ಆಕಾಶ ನಾವೆಯಲ್ಲಿ ಕುಳಿತು ರಂಗೂನಿಗೆ ಹಾರಿಹೋದ ಆ ದಿನದ ಮಧುರ ನೆನಪು ನನ್ನ ಸ್ಮೃತಿ ಪಟಲದಲ್ಲಿ ಫಕ್ಕನೆ ಸುಳಿಯಿತು. ಗಂಗಾ ದರ್ಶನ. ಕಲಕತ್ತಾ ನಗರ ಸೌಂದರ್ಯಾನ್ವೀಕ್ಷಣ ಮತ್ತೆ ದೊರಕುವುದೆಂಬ ಸದಾಸೆ. ಎಲ್ಲ ನಿಜ. ಇವುಗಳ ಅಂತರಂಗದಲ್ಲಿ ಹೇಳಲು ಬಾರದ ಮಹಾ ವೇದನೆಯೊಂದು ಮೂರ್ತೀಭವಿಸಿತ್ತು. ಅದು ನೇತಾಜಿಯನ್ನು ಅಗಲಿದ್ದು; ಅಸ್ವತಂತ್ರ ಭಾರತಕ್ಕೆ ಧ್ಯೇಯ ಈಡೇರದಾಗಲೇ ಬಂದದ್ದು.

"ಯೋಚನೆಗೆ ಕೊನೆ ಮೊದಲೆಲ್ಲಿ? ಸಾಗಿತ್ತು ಲಹರಿ. ನನ್ನ ಹಾಗೆಯೇ ನನ್ನ ಬಂಧಮುಕ್ತ ಮಿತ್ರರು ದುಃಖಿಗಳಾಗಿರಬೇಕೆಂದು ಕೊಂಚ ಆ ಕಡೆಗೆ ದೃಷ್ಟಿ ಹರಿಯಿಸಿದೆ.

"ಸೂರ್ಯರಶ್ಮಿಗಳು ಕಣ್ಣಿಗೆ ಹಬ್ಬ ಮಾಡಿದ್ದವು. ನಿರಭ್ರವಾದ ಆಕಾಶ. ಎಲ್ಲ ಕಡೆಯಲ್ಲೂ ಒಂದು ಬಗೆಯ ವಿನೂತನತೆ ತೋರಿಬಂದಿತು.

"ಪಕ್ಕದ ಮಿತ್ರರು ಹರಟೆಯಲ್ಲಿ ಲೀನರಾಗಿ ಹೋಗಿದ್ದರು. ಯಾರೋ ಲಾಹೋರಿನ ಸುದ್ದಿ ಹೇಳುತ್ತಿದ್ದರು. ಇನ್ನೊಬ್ಬರು ಸಿಂಗಪುರದಲ್ಲಿನ ಒಂದು ಭೀಕರ ರಾತ್ರಿಯ ಬಗ್ಗೆ ಹೇಳುತ್ತಿದ್ದರು. ಮತ್ತೊಬ್ಬರು ರಂಗೂನಿನಲ್ಲಿನ ಪೆರೇಡಿನ ಬಗ್ಗೆ ವಿಶೇಷ ಆದರ ವಹಿಸಿ ಮಾತು ಮುಂದು ವರಿಸಿದ್ದರು. ಇನ್ನೂ ಕೆಲವರು ಇನ್ನೂ ಏನೇನೋ ಹೇಳುತ್ತಿದ್ದರು.

"ಬ್ರೆಡ್ಡಿನ ತುಂಡೊಂದನ್ನು ಅಗಿಯುತ್ತ ಇನ್ನೊಬ್ಬ ಶೀಖ್ ಮಿತ್ರ ಹೇಳಿದ 'ಗಾಂಧೀಜಿಯನ್ನು ಹೇಗಾದರೂ ನೋಡಬೇಕು' ಎಂದು ಎಲ್ಲರೂ 'ಜೈ ಹಿಂದ್' ಎಂದು ಜಯಘೋಷ ಮಾಡಿದರು. ನಾನು ಎಲ್ಲರ ಮಾತುಗಳನ್ನೂ ಸಾವಧಾನವಾಗಿ ಕೇಳುತ್ತಿದ್ದೆ. ನನಗೂ ಗಾಂಧೀಜಿಯನ್ನು ಕಾಣಬೇಕೆಂಬ ಆಸೆ ವಿಪರೀತವಾಗಿತ್ತು.

"ಇವತ್ತೇನು ಕಾರ್ಯಕ್ರಮ ಎಂದು ನಾನು ಪ್ರಶ್ನಿಸಿದೆ. ಅದಕ್ಕೆ ಏನೆಂದರೇನು? ಮೊದಲು ಊಟ ಉಪಚಾರಗಳನ್ನು ತೀರಿಸಿಕೊಂಡು ನಂತರ ಮುಂದಿನ ಕಾರ್ಯಕ್ರಮ ಎಂದು ಉತ್ತರ ಬಂತು. ಆಗಬಹುದೆಂದು ಬಹುಮತದ ನಿರ್ಣಯವಾಯಿತು.

"ಟ್ರಕ್ ನಿಂತಿತು. ನಮ್ಮ ಕಲಕತ್ತೆ ಬಂದಿತೆಂದು ತಿಳಿಯಿತು. ಎಲ್ಲರೂ ನಮ್ಮ ನಮ್ಮ ಸಾಮಾನುಗಳನ್ನು ತೆಗೆದುಕೊಂಡು ಪಕ್ಕದ ಹೋಟೆಲಿನಲ್ಲಿ ಹೊಕ್ಕೆವು.

* * * *

"ಸೋದೇಪುರ ಆಶ್ರಮದ ಯಾತ್ರೆ ಅಪ್ರತಿಮ ಪ್ರೇಮಾದರಗಳಿಂದ, ಭಕ್ತಿ ಕಂಪಿತ ಹೃದಯದಿಂದ ಸಾಗಿತ್ತು. ನಾವೆಲ್ಲ ಸೈನಿಕ ಪೋಷಾಕಿನಲ್ಲೇ ನಡೆದಿದ್ದೆವು. ಸಂಧ್ಯಾ ಸೂರ್ಯನ ಪ್ರಶಾಂತತೆ ಇನ್ನೂ ಹಬ್ಬಿರಲಿಲ್ಲ. ಬಿಸಿಲಿನ ಕಾವು ಹಾಗೇ ಇತ್ತು.

"ಜೈ ಹಿಂದ್ ಗೀತವನ್ನು ಯಾರೋ ಸುಸ್ವರವಾಗಿ ಹೇಳುತ್ತಿದ್ದರು. ನಮ್ಮೆಲ್ಲರ ಹೃದಯದಲ್ಲಿ ಸ್ಫೂರ್ತಿಯು ಬುಗ್ಗೆಯೇ ಚಿಮ್ಮಿತು.

"ಅರೆಕ್ಷಣದಲ್ಲಿಯೇ ಕರ್ಣಾನಂದಕರ ವಾರ್ತೆಯೊಂದು ಕೇಳಿತು. **"ಅದೋ ಗಾಂಧೀಜಿ".**

"ಗಾಂಧೀಜಿ ಸೋದೇಪುರ ಆಶ್ರಮವಾಸಿಗಳೊಂದಿಗೆ ಪ್ರಾರ್ಥನೆಗಾಗಿ ಹೊರಟಿದ್ದರು. ಅವರ ಪಕ್ಕದಲ್ಲೆಲ್ಲ ಜನರು. ಗಾಂಧೀಜಿ ಗಂಭೀರವಾಗಿ ಹೆಜ್ಜೆ ಹಾಕುತ್ತ ದಾರಿಗುಂಟ ನಡೆದಿದ್ದರು.

"ನಾವೆಲ್ಲ ಆ ಮಹಾಪುರುಷನನ್ನು ತೆರೆದ ಕಣ್ಣಿನಿಂದ ನೋಡಿದೆವು. ಅಂದು ಸಿಂಗ್‌ಪುರದಲ್ಲಿ ನೇತಾಜಿಯನ್ನು ಕಂಡಾಗ ಯಾವ ಹರ್ಷಾಶ್ರುಗಳು ತುಂಬಿದವೋ ಅದೇ ಹರ್ಷಾಶ್ರುಗಳು ಈಗಲೂ ಕಣ್ಣುತುಂಬ ತುಂಬಿದುವು. ಇದುವೇ ಸುದಿನವೆಂದು ನಾವೆಲ್ಲ ಎಂದು ಕೊಂಡೆವು.

"ಗಾಂಧೀಜಿ ತಮ್ಮ ನಡಗೆಯನ್ನು ಸಾಗಿಸಿದ್ದರು. ಪರಿವಾರವೂ ನಿಧಾನವಾಗಿ ಬೆಂಬತ್ತಿ ಬರುತ್ತಿತ್ತು.

"ದಾರಿಯಲ್ಲೇ ನಾವು ಬಾಪೂಜಿಯನ್ನು ಇದಿರಾಗಿ ನಿಂತೆವು. ಎಲ್ಲರೂ ಶಿಸ್ತಿನಿಂದ "ಜೈ ಹಿಂದ್" ಘೋಷಣೆ ಮಾಡಿ ಸೈನಿಕ ವಂದನೆಯನ್ನರ್ಪಿಸಿದೆವು ಬಾಪೂಜಿ ಸ್ಮಿತವದನರಾಗಿ ಆ ವಂದನೆಗೆ ತಮ್ಮ ಸಂತಸವನ್ನು ವ್ಯಕ್ತ ಪಡಿಸಿದರು. ನಾವೆಲ್ಲ **"ಗಾಂಧೀಜೀಕಿ ಜೈ"** ಎಂದು ಆನಂದಾತಿರೇಕದಿಂದ ಜಯಘೋಷ ಮಾಡಿದೆವು.

" ಬಾಪೂಜಿಯ ಬೆನ್ನಹಿಂದೆ ಸಾಗುವುದರಲ್ಲಿ ಅವರ್ಣನೀಯ ಆನಂದವೆನಿಸಿತು. ಅವರನ್ನು ನೋಡುವ ಎಲ್ಲರಿಗೂ ಏನೋ ಒಂದು ಬಗೆಯ ನಿರ್ಮಲ ಭಾವನೆ ಕೊನರೊಡೆಯುತ್ತದೆ. ಅವರ ಸಾನ್ನಿಧ್ಯದಲ್ಲೇ ಸಾಧ್ಯವಿದ್ದಷ್ಟು ಕಾಲ ಇರಬೇಕೆನ್ನಿಸುತ್ತದೆ.

" ದಾರಿಯಲ್ಲಿ ಎಲ್ಲರೂ ಮೌನವನ್ನು ಆಚರಿಸುತ್ತಿದ್ದಂತೆ ತೋರಿತು. ಒಮ್ಮೆ ಗಾಧೀಜಿ ಪಶ್ಚಿಮ ದಿಕ್ಕಿನ ಕಡೆಗೆ ಬೆರಳು ಮಾಡಿ ಪಕ್ಕದವರೊಬ್ಬರಿಗೆ ಏನೋ ತೋರಿಸಿದರು. ಎಲ್ಲರೂ ಅತ್ತಕಡೆಗೇ ನೋಡಿದರು. ಆಗ ಬಾಪೂಜಿ " ಅಂಥದೇನೂ ಇಲ್ಲ " ಎಂದರು. ನಗೆಯ ಕಿರುತೊರೆಯೊಂದು ಜಾರಿಹೋಯಿತು.

" ಇನ್ನು ಸ್ವಲ್ಪ ಮುಂದೆ ನಾಲ್ಕು ಜನ ಹಳ್ಳಿಗರು ಭೇಟಿಯಾದರು. ಬಂದವರೇ ಬೀದಿಯಲ್ಲಿಯೇ ಸಾಷ್ಟಾಂಗವಂದನೆ ಮಾಡಿದರು. ಬಾಪೂಜಿ ಮತ್ತೆ ಮುಗುಳ್ನಗೆಯಿಂದ ತಮ್ಮ ಸಂತೋಷವನ್ನು ವ್ಯಕ್ತ ಪಡಿಸಿದರು.

" ಸೈನಿಕರಾದ ನಾವೆಲ್ಲ ಮಹಾತ್ಮರ ಪರಿವಾರದೊಡನಿರುವದನ್ನು ಕಂಡು ಆ ಹಳ್ಳಿಗರಿಗೆ ಅತ್ಯಾಶ್ಚರ್ಯವಾದಂತೆ ತೋರಿತು. ಅವರು ನಮ್ಮನ್ನೇ ತೆರೆದ ಕಣ್ಣಿನಿಂದ ನೋಡುತ್ತಿದ್ದರು.

" ಸುಮಾರು ೨೦ ನಿಮಿಷಗಳ ನಂತರದಲ್ಲಿಯೇ ಬಾಪೂಜಿ ಆಶ್ರಮಕ್ಕೆ ಆಗಮಿಸಿದರು. ಪ್ರಾರ್ಥನಾ ಸಿದ್ಧತೆಯೆಲ್ಲ ಆಗಿತ್ತು. ಆ ಸ್ಥಳದಲ್ಲಂತೂ ವಿಶೇಷ ಜನ ಸಂದಣಿ.

" ಸ್ವಲ್ಪ ಎತ್ತರದ ಸ್ಥಳದಲ್ಲಿ ಖಾದಿಯ ಶುಭ್ರವಸ್ತ್ರವನ್ನು ಹಾಸಿ ಗಾಂಧೀಜಿ ಕುಳಿತುಕೊಳ್ಳಲು ಆಸನವನ್ನೇರ್ಪಡಿಸಲಾಗಿತ್ತು ಉಳಿದವರೆಲ್ಲ ಕೆಳಗಡೆಗೆ ಸುತ್ತಮುತ್ತಲು ಕುಳಿತರು.

" ಪ್ರಾರ್ಥನೆ ಆರಂಭವಾಯಿತು.

" ಸುಸ್ವರದಲ್ಲಿ 'ರಘುಪತಿರಾಘವರಾಜಾರಾಂ' ಗಾನವಾದಮೇಲೆ ಗಾಂಧೀಜಿ ನಾಲ್ಕು ಮಾತನ್ನಾಡುತ್ತಾರೆಂದು ತಿಳಿಯಿತು. ಇಡೀಜನ ಸ್ತೋಮ ನಿಶ್ಶಬ್ದವಾಗಿ ಕುಳಿತಿತ್ತು.

" ಪ್ರಶಾಂತವಾದ ವಾತಾವರಣ. ಈ ಹೊತ್ತಿಗಾಗಲೇ ಬಿಸಿಲೂ ಇಳಿಮುಖವಾಗಿತ್ತು. ಆಗಾಗ ತಂಪುಗಾಳಿಯ ತೆರೆಯೊಂದು ಬಂದು ನಮ್ಮೆಲ್ಲರ ಮೇಲೆ ಹಾಯ್ದು ಹೋಗುತ್ತಲಿತ್ತು. ನೆರೆದ ಜನರ ಕಣ್ಣುಗಳೆಲ್ಲ ಬಾಪೂಜಿಯ ವಿಗ್ರಹದಲ್ಲಿ ಲೀನವಾಗಿದ್ದುವು

" ಆಶ್ರಮವಾಸಿಗಳು ಶಾಂತರಾಗಿದಾರೆ. ಗಾಂಧೀಜಿ ಕೆಳಗಡೆಗೆ ಮುಖಮಾಡಿಕೊಂಡು ಕುಳಿತಿದ್ದರು. ಒಂದೆರಡು ನಿಮಿಷಗಳಲ್ಲಿ ಮುಖವನ್ನು ಮೇಲೆತ್ತಿ ಮೆಲ್ಲಗೆ ಮಾತಿಗೆ ಆರಂಭಿಸಿದರು. ಈಗಂತೂ ಜನರ ಆನಂದಕ್ಕೆ ಪಾರವೇ ಉಳಿಯಲಿಲ್ಲ.

" ಗಾಂಧೀಜಿ ಹೇಳಲಾರಂಭಿಸಿದ್ದರು.

"ನಾವು ಬದುಕುತ್ತಿರುವುದು ಆ ಪರಮಾತ್ಮನ ಕೃಪೆಯಿಂದ. ಮತ್ತಾರ ಕೃಪೆಯಿಂದಲೂ ಬದುಕುವುದಕ್ಕೆ ನಾವು ಆಶಿಸುವುದಿಲ್ಲ. ಗೀತಾ ಕಲಿಸುವು

ದೇನು? ನಿರ್ಭಯ ವೃತ್ತಿ. ಆ ಪಾಠವನ್ನು ನಾವು ಯಥಾವಿಧಿಯಾಗಿ ಕಲಿತುದಾದರೆ ಯಾರಿಗೂ ತಲೆ ತಗ್ಗಿಸಬೇಕಾಗಿಲ್ಲ. ಯಾರಿಗೂ ಅಂಜ ಲಾರದ, ಅಳುಕಲಾರದ ಪಾಠವನ್ನೇ ಗೀತೆ ಎಲ್ಲರಿಗೂ ಕಲಿಸುತ್ತದೆ.

"ನಾನು ಇಷ್ಟು ವಯಸ್ಸಾದವನಾಗಿದ್ದೇನೆ. ನನಗೆ ಯಾರಾದರೂ ಬಂದು ತಲೆ ತಗ್ಗಿಸು ಎಂದು ತಿಳಿಸಿದರೆ ನಾನು ಅದೇ ಕ್ಷಣದಲ್ಲಿ ಸಾಧ್ಯವಿಲ್ಲ ಎನ್ನುತ್ತೇನೆ. ಹಾಗೆಂದರೆ ಏನಾದೀತು? ಎಂದು ನೀವು ಚಿಂತಿಸಬಹುದು. ನಾನು ಆ ರೀತಿ ಹೇಳಿದಾಕ್ಷಣ ನನ್ನನ್ನು ತಳ್ಳಿ ಹಾಕಬಹುದು; ಹೊಡೆಯ ಬಹುದು; ಕೊನೆಗೆ ಕೊಂದು ಹಾಕಬಹುದು. ಇಷ್ಟೇತಾನೆ.

"ಈ ರೀತಿಯ ನಿರ್ಭಯ ವೃತ್ತಿಯೇ ಸ್ವರಾಜ್ಯ. ಇದೇ ರೀತಿಯಲ್ಲಿ ಎಲ್ಲರೂ ಆಚರಿಸಿದರೆ ಅಲ್ಲಿಯೇ ಸ್ವರಾಜ್ಯವಿದೆ. ಸ್ವಾತಂತ್ರ್ಯ ಸ್ವಾತಂತ್ರ್ಯ ಎಂದು ಗಿಳಿಪಾಠಮಾಡಿ ಉಚ್ಚರಿಸಿದರೆ ಏನು ಪ್ರಯೋಜನ? ನಮ್ಮ ಕರ್ತ ವ್ಯವೆಲ್ಲ ಅದೇ ಹಾದಿಯಲ್ಲಿ ಸಾಗಬೇಕು.

"ಗಾಂಧೀಜಿ ತಮ್ಮ ಪ್ರವಚನ ನಿಲ್ಲಿಸಿದರು.

"ಪ್ರಾರ್ಥನೆಗೆಂದು ಬಂದ ಜನರೆಲ್ಲ ಎದ್ದರು. ಸ್ವಲ್ಪ ಗಲಾಟೆ ಯಾಯಿತು. ಯಾರೋ ಹೇಳಿದರು "ಶಾಂತಿ ಶಾಂತಿ" ಎಂದು. ಜನುಮ ಪಾವನವಾಯಿತೆಂಬ ತೃಪ್ತಿ ನಮಗೆ ಉಂಟಾಯಿತು. ನಾವೆಲ್ಲ ಮತ್ತೆ ಕಲಕತ್ತಾ ನಗರಕ್ಕೆ ತೆರಳಿದೆವು.

"ಆಪ್ತಮಿತ್ರರ ಒತ್ತಾಯದ ಮೂಲಕ ನಾನು ಕಲಿಕತ್ತೆಯಲ್ಲಿ ಇನ್ನು ಒಂದು ವಾರ ನಿಲ್ಲಬೇಕೆಂದು ನಿರ್ಧರಿಸಿದ್ದೆ. ಸುಮಾರಾಗಿ ನಾನು ಎರಡುದಿನಕ್ಕೊಮ್ಮೆಯಾದರೂ ಗಾಂಧೀಜಿಯ ಪ್ರಾರ್ಥನೆಯಲ್ಲಿ ಭಾಗವಹಿ ಸುತ್ತಿದ್ದೆ. ಸೋದೇಪುರ ಆಶ್ರಮದ ಕಡೆಗೆ ಹೋಗದಿದ್ದರೆ ಮನಕ್ಕೆ ನೆಮ್ಮದಿಯೇ ಇರುತ್ತಿರಲಿಲ್ಲ.

"ಮಿತ್ರರೊಡನೆ ಕಲೆತು ಪರಸ್ಪರ ಸುಖ ದುಃಖಗಳನ್ನು ತೋಡಿ ಕೊಂಡುದಾಯಿತು. ಊರನ್ನು ಚೆನ್ನಾಗಿ ಸುತ್ತಿ ತೃಪ್ತಿಹೊಂದಿದಾಯಿತು.

" ಒಂದು ದಿನ ಬೆಳಿಗ್ಗೆ ನಮ್ಮ ನೇತಾಜಿಯ ಅಣ್ಣಂದಿರಾದ ಶ್ರೀ ಶರತ್ ಚಂದ್ರ ಬೋಸರನ್ನು ಕಾಣಲು ನಾವೆಲ್ಲ ಹೋಗಿದ್ದೆವು ಶರತ್ ಬಾಬುಗಳ ಮುಖದಲ್ಲಿಯೇ ನೇತಾಜಿಯನ್ನು ಕಂಡೆವು. ಅದೇನೋ ಒಂದು ಬಗೆಯ ತೃಪ್ತಿ ಎನಿಸಿತು. ಅವರೊಂದಿಗೆ ಸುಮಾರು ಒಂದುಗಂಟೆ ಮಾತನಾಡಿಕೊಂಡು ಮತ್ತೆ ಮರಳಿ ಬಂದೆವು.

" ಈ ಹೊತ್ತಿಗಾಗಲೇ ಕ್ಯಾ|| ಷಾ ನವಾಜ್ ಖಾನ್, ಲೆ|| ಡಿಲ್ಲನ್ ಕ್ಯಾ|| ಸೇಗಾಲ್ ಇವರ ವಿಚಾರಣೆ ಕೊನೆ ಪರ್ವ ಮುಟ್ಟುತ್ತಿರುವುದೂ ಪತ್ರಿಕೆಗಳಿಂದ ತಿಳಿದಿತ್ತು. ಅದನ್ನಿಷ್ಟು ತಿಳಿದುಕೊಂಡೇ ಊರಿನಕಡೆಗೆ ಹೋದರಾಯಿತು ಎಂದು ನಾನು ನಿರ್ಧರಿಸಿದೆ. ಅದರಂತೆ ನನ್ನ ಹಲವು ಮಿತ್ರರೂ ಸಿದ್ಧರಾದರು.

" ಜನವರಿ ೩ನೇ ತಾರೀಖಿನ ದಿನ ಸುವಾರ್ತೆ ಬಂದೇ ಬಿಟ್ಟಿತು. ಕಮಾಂಡರ್-ಇನ್-ಚೀಫ್ ರವರು ಮೂವರನ್ನೂ ಬಿಡುಗಡೆ ಮಾಡಿದರು. ಆದರೆ ಅವರ ಸಂಬಳ, ಅಲೋಯನ್ಸ್ ಇತ್ಯಾದಿಗಳನ್ನು ಕೊಡಲಾಗುವುದಿಲ್ಲ.

" ನಮ್ಮ ಸಂತೋಷದ ಬುಗ್ಗೆ ಆಕಾಶಕ್ಕೆ ಚಿಮ್ಮಿತು. ನಾವು ಆ ಮೂವರನ್ನೂ ಡೆಲ್ಲಿಗೆ ಹೋಗಿ ಭೇಟಿ ಮಾಡಬೇಕೆಂದು ಗೊತ್ತು ಪಡಿಸಿಕೊಂಡೆವು.

* * *

" ರೈಲು ಜೋರಿನಿಂದಲೇ ಓಡುತ್ತಿತ್ತು. ನಮ್ಮೆಲ್ಲರ ಮನದಲ್ಲಿ ಡಿಲ್ಲಿ ಪ್ರತಿನಿಮಿಷಕ್ಕೊಮ್ಮೆ ಸಮೀಪವಾದಂತಿತ್ತು.

" ಕ್ಯಾ|| ಷಾ ನವಾಜ್ ಖಾನ್ ನಮ್ಮ ಶಿಬಿರಕ್ಕೆ ಬಂದು ಮಾತನಾಡಿದ ಅಂದಿನ ಆ ನೆನಪಿನ ಚಿತ್ರ ಕಣ್ಣಮುಂದೆ ಸುಳಿಯಿತು. ಲೆ|| ಡಿಲ್ಲನ್‌ರನ್ನು ಮಾತ್ರ ಎಂದೋ ಒಮ್ಮೆ ನೋಡಿದ ಮಸಕು ಮಸಕು ನೆನಪು. ಆಕಾಶವಾಣಿ ಮೂಲಕ ಮಾತು ಕೇಳಿದು ಮಾತ್ರ ಜ್ಞಾಪಕದಲ್ಲಿದ್ದೇ ಇತ್ತು.

" ರಕ್ತಕೋಟೆಯ ಮುಂದೆ ಎಂಥ ಪ್ರಚಂಡ ಮೆರವಣಿಗೆಯಾಗುತ್ತದೋ ಡೆಲ್ಲಿಯ ಜನ ಎಷ್ಟು ಅದ್ಭುತವಾದ ಮೆರವಣಿಗೆ ಮಾಡುತ್ತಾರೋ

ಅಂದಿನ ಸಭೆ ಏನು ಅಭೂತಪೂರ್ವವಾಗಿರುತ್ತದೋ ಎಂದು ನಾವೆಲ್ಲ ಯೋಚಿಸುತ್ತಿದ್ದೆವು.

"ನಮ್ಮ ಕಣ್ಣನ್ನೇ ನಂಬಲಾರದ ದೃಶ್ಯವನ್ನು ಡೆಲ್ಲಿಯಲ್ಲಿ ನಾವು ನೋಡಬಹುದು ಎಂದು ಒಬ್ಬರೆಂದರು.

"ಇದು ಜನತಾಶಕ್ತಿಯ ಜಯ. ಎಂದರಿನ್ನೊಬ್ಬರು.

"ಪ್ರಾಯಶಃ ಈ ಮೂವರೂ ಕಾಂಗ್ರೆಸ್ಸಿಗಾಗಿ ತನುಮನ ಧನವನ್ನ ರ್ಪಿಸಬಹುದು ಎಂದರು ಮತ್ತೊಬ್ಬರು.

"ಸಾಗಿತ್ತು ರೈಲಿನ ಓಟದೊಡನೆ ಹರಟೆಯ ಓಟ.

* * * *

"ಇಡೀ ದೆಹಲಿ ನಗರದಲ್ಲಿ ಅಪೂರ್ವ ಉತ್ಸಾಹವೇ ಮೈವೆತ್ತಿತ್ತು. ಮೂವರು ಮಹಾ ವೀರರನ್ನು ಅಭಿನಂದಿಸಲು ಪ್ರಚಂಡವಾದ ಸಿದ್ಧತೆಯಾಗಿತ್ತು. ನಗರ ದೀಪೋತ್ಸವದಿಂದಲಂಕೃತವಾಗಿತ್ತು.

"ಸಾಯಂಕಾಲ ಸಮೀಪಿಸಿತ್ತು. ನಗರದ ಜನಸ್ತೋಮ ತ್ರಿಮೂರ್ತಿಗಳ ದರ್ಶನಕ್ಕಾಗಿ ಸಾಗಿತ್ತು.

"ದೆಹಲಿ ನಗರದ ಇತಿಹಾಸದಲ್ಲೇ ಇಲ್ಲದಂಥ ಜನರ ಮಹಾಸಭೆ ನೆರೆದಿತ್ತು ಅಂದು. ಲಕ್ಷಗಳ ಸಂಖ್ಯೆಯಲ್ಲಿ ಜನರು ಸೇರಿದ್ದರು. ಧ್ವನಿವಾಹಕಗಳ ಏರ್ಪಾಟೂ ಆಗಿತ್ತು.

"ಕ್ಯಾ|| ಷಾನವಾಜ್ ಖಾ, ಕ್ಯಾ|| ಪ್ರೇಮ್‌ಕುಮಾರ್ ಸೇಗಾಲ್ ಲೆ|| ಡಿಲ್ಲ‌ನ್ ಮೂವರೂ ಸೈನಿಕ ಪೋಷಾಕಿನಲ್ಲಿ ವೇದಿಕೆಗೆ ಬಂದರು. ಆಕಾಶ ಹಾರಿ ಹೋಗುವಂತೆ ಮಹಾ ಜನರು ಕರತಾಡನ ಮಾಡಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಅಂದು ಡಾ|| ಅಸಫ್ ಅಲ್ಲಿಯವರ ಹಿರಿತನ. ಅವರೇ ಅಧ್ಯಕ್ಷತೆ ವಹಿಸಿದ್ದರು.

" ನಮಗೆ ಅಂದಾದ ಸಂತೋಷವನ್ನು ನಾನು ಹೇಗೆ ನಿಮಗೆ ತಿಳಿಸ ಬೇಕೊ ತಿಳಿಯದು. ನಾನೂ ನನ್ನ ಮಿತ್ರರೂ ನೆಟ್ಟ ನೋಟದಿಂದ ಆ ಮೂವರು ನಾಯಕರನ್ನು ನೋಡುತ್ತಿದ್ದೆವು.

" ಕ್ಯಾ|| ಷಾ ನವಾಜ್ ಖಾನ್, ಕ್ಯಾ|| ಸೇಗಾಲ್ ಸ್ಫೂರ್ತಿಯಿಂದ ಮಾತನಾಡಿದರು. ನಮ್ಮ ಬಿಡುಗಡೆಯಾಗುವವರೆಗೆ ಜನರು ತೋರಿದ ಶಕ್ತಿ, ಸಂಘಟನೆಗಳಿಗಾಗಿ ತಮ್ಮ ಚಿರ ಕೃತಜ್ಞತೆಯನ್ನು ವ್ಯಕ್ತಪಡಿಸಿದರು.

" ನಂತರ ಲೆ|| ಡಿಲ್ಲನ್ ಮಾತನಾಡುತ್ತ,

" ಇಷ್ಟು ಗೌರವಕ್ಕೆ ನಾನು ಅರ್ಹನಲ್ಲ. ನೀವು ಬರ್ಮಾ ರಣರಂಗ ದಲ್ಲಿ ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ ವೀರರಿಗಾಗಿ ಅಭಿವಂ ದಿಸಿರಿ.' ಎಂದರು ಪ್ರತಿಯೊಂದು ಅಕ್ಷರವೂ ಸುವರ್ಣಾಕ್ಷರದಲ್ಲಿ ಬರೆದಿ ಡುವಂತಿತ್ತು ಅವರ ಮಾತು.

" ಭಾಷಣಾದಂತರದಲ್ಲಿ ಕುತ್ತಿಗೆ ಮುಚ್ಚಿಹೋಗುವಂತೆ ಹಾರ ಹಾಕಿ ದರು. ಮತ್ತೆ ಜನಗಳು ಹರ್ಷಧ್ವನಿಮಾಡಿದರು.

" ಜೀವಿಸಿದರೆ ಹೀಗೆ ಜೀವಿಸಬೇಕು. ಶೂರನ ಬಾಳು ಬಾಳು. ಉಳಿದರೂ ಕೀರ್ತಿ, ಮಡಿದರೂ ಕೀರ್ತಿ. ಎಂದು ನಾನು ನನ್ನ ಮನದಲ್ಲೇ ಅಂದುಕೊಂಡೆ.

" ಹೇಗೋ ಕಷ್ಟದಿಂದ ಕ್ಯಾ|| ಷಾ ನವಾಜರ ಬಳಿ ಸಾಗಿದೆವು. ನನ್ನನ್ನವರು ಕಂಡೊಡನೆಯೇ " ಜೈ ಹಿಂದ್ " ಘೋಷಣೆ ಮಾಡಿ ಬಾಗಿದವರೇ ತಬ್ಬಿಕೊಂಡು ಬಿಟ್ಟರು. ಕ್ಯಾ|| ಸೇಗಾಲ್, ಲೆ|| ಡಿಲ್ಲನ್ ಡಾ|| ಅಸಫ್ ಅಲ್ಲಿ ಮತ್ತು ಅಪರಿಮಿತ ಜನಸ್ತೋಮ ಈ ಮಂಗಳ ದೃಶ್ಯ ವನ್ನು ನೋಡುವುದರಲ್ಲಿ ಲೀನರಾಗಿದ್ದರು. ನನ್ನ ಕಣ್ಣಲ್ಲೂ ನೀರೂರಿತು. ಕ್ಯಾ|| ಷಾ ನವಾಜ್ ಖಾನರ ಧ್ವನಿಯೂ ಗದ್ಗದಿತವಾಗಿತ್ತು."ಎಂದು ಚೆಲು ವರಾಜ ಸುಮ್ಮನಾದ.

"ನಾವೀರ್ವರೂ ಮೂಕ ವಿಸ್ಮಿತರಾಗಿ ಕಲ್ಲುಬೊಂಬೆಯಂತೆ ಕುಳಿತಿದ್ದೆವು.

ಹತ್ತು ನಿಮಿಷಗಳ ತರುವಾಯ ಚೆಲುವರಾಜ ತಾನೇ ಹೇಳಿದ— "ಈಗ ನನ್ನದೊಂದೇ ಧ್ಯೇಯ. ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡುವುದು. ಈ ದೇಹದಲ್ಲಿ ರಕ್ತದ ಹನಿ ಇರುವವರೆಗೆ ಆ ಹಾದಿಯಲ್ಲಿ ನಡೆದು ನನ್ನ ಸೇವೆ ಸಲ್ಲಿಸುವುದು. ಇದೇ ರಾಷ್ಟ್ರೀಯ ಸೈನಿಕರ ಪರಮ ಕರ್ತವ್ಯ.

"ಏಪ್ರಿಲ್ ತಿಂಗಳಲ್ಲಿ **"ರಕ್ತಕೋಟೆ"** ಯುಳ್ಳ ದೆಹಲಿ ನಗರದಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ನಡೆಯುತ್ತದೆ. ಆ ಸಮಯಕ್ಕೆ ನಾವೆಲ್ಲ ಬರಬೇಕೆಂದೂ ಅಲ್ಲದೆ ಸ್ವಯಂ ಸೇವಕರಾಗಿ ನಮ್ಮ ಸೇವೆಯನ್ನು ಸಲ್ಲಿಸಬೇಕೆಂದೂ ಆಜ್ಞೆಯಾಗಿದೆ. ಆದ್ದರಿಂದ ನಾನು ನನ್ನ ಚೆಂದೂರಿಗೆ ಹೋಗಿ ಒಂದು ತಿಂಗಳು ಇದ್ದು ಮುಂದಿನ ತಿಂಗಳಲ್ಲಿಯೇ ಡೆಲ್ಲಿಗೆ ಪ್ರಯಾಣ ಬೆಳೆಯಿಸುತ್ತೇನೆ. ನನ್ನ ಮಿತ್ರರು ಹಲವರು ಡೆಲ್ಲಿಗೆ ಬರುತ್ತಾರೆ. ಇಂದೂ ನಮ್ಮ ಘೋಷಣೆ **"ಚಲೋ ದಿಲ್ಲಿ"**ಯೇ ಆಗಿದೆ ಎಂದು ಚೆಲುವರಾಜ ಮತ್ತೆ ಸುಮ್ಮನಾದ.

"ನಿನ್ನ 'ಚಲೋದಿಲ್ಲಿ' ಘೋಷಣೆ ಮಂಗಳಮಯವಾಗಲಿ. ನಿನ್ನ ಪ್ರವಾಸ ಸುಖಮಯವಾಗಲಿ" ಎಂದು ನಾನೆಂದೆ.

ಮೌನವೇ ಮೂರ್ತೀಭವಿಸಿ ನಿಂತಿತ್ತು. ನಂತರ ಒಬ್ಬರೂ ಮಾತನಾಡಲಿಲ್ಲ. ಎಲ್ಲರ ತಲೆಯಲ್ಲೂ **"ಚಲೋ ದಿಲ್ಲಿ"** ಎಂಬ ಮಾತು ಕ್ಷಣ ಕ್ಷಣಕ್ಕೂ ನುಡಿ ಗೊಡುತ್ತಿತ್ತು.

---

ಪುನಃ ಹೊಸಬೆಳಕು !     ಹೊಸ ಸೊಬಗು !!

ಹೊಸ ಸಮೃದ್ಧಿ, ಅಂದಗಳು !!!

ಬಂದಿವೆ

ಲೋಕ ಪ್ರಗತಿ ಮಾರ್ಗದಲ್ಲಿ ಮುನ್ನಡೆಯುತ್ತಿದೆ.

ಜನತೆ ಹೊಸ ಸೊಬಗು-ಸೌಂದರ್ಯಗಳನ್ನು

ಹುಡುಕುತಿದಾರೆ.

ನಾವು ಈ ದಾರಿಯಲ್ಲಿ

ಸಹಕಾರಿಗಳಾಗಿದೇವೆ.

ಅಂದವಾದ ರೇಶ್ಮೆ ಸೀರೆಗಳು, ರೇಶ್ಮೆ ಉಡಿಗೆಗಳು

ಧಾರಾಳವಾಗಿ ಈಗತಾನೆ ಹೊಸದಾಗಿ ಬಂದಿವೆ.

# ಇಂಡಿಯನ್ ಸಿಲ್ಕ್ ಸ್ಟೋರ್ಸ್

133-134 ಕಮರ್ಷಿಯಲ್ ಸ್ಟ್ರೀಟ್, ಬೆಂಗಳೂರು.

## ಸೌಂದರ್ಯದ ಸಾರ ಸರ್ವಸ್ವ

ಮೈವೆತ್ತು ಬಂದಾಗ
ಅದು ಕಣ್ಮುಂದೆ ಬಂದಾಗ
ಮತ್ತೆಲ್ಲಿ ಸೌಂದರ್ಯವನ್ನು ಹುಡುಕುತ್ತೀರಿ ?

ಅಂದವಾದ ಬಣ್ಣದ
ಸೊಗಸಾದ ಮಾದರಿಯ
ನವನವೀನ ತರಹೆಯ

# ಬೆನಾರಿಸ್ ಸೀರೆಗಳು

ದೊರೆತಾಗ ಅಲ್ಲಿದೆ ಸೌಂದರ್ಯರಾಶಿ

★

★ ನೀವು ಬಯಸಿದ ★
★ ನೀವು ನೆನೆದ ★
★ ಸರಕುಗಳು ★

★

ಚಂದೀರಾಮ್ ಬ್ರದರ್ಸ್

೪. ಸೌತ್‌ಪೆರೇಡ್, : : ಬೆಂಗಳೂರು